ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

# ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ
# ಗೋರಟಾ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಡಾ. ಪ್ರಕಾಶ ಗ. ಖಾಡೆ**

ಲೇಖಕರು
**ಶ್ರೀ ಷ. ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**GORATA:** An Introduction Book on Places in Karnataka that Played a Major Role in the Freedom Struggle, Written by Sri Sha. Bra. Dr. Rajashekhar Shivacharya Swamygalu, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/-
ಪುಟ: ೮೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಸುಕ್ಷೇತ್ರ ಗೋರಟಾ ನನ್ನ ಜನ್ಮಭೂಮಿ ಎಂದು ಹೇಳಿಕೊಳ್ಳಲು ಹೆಮ್ಮೆ ಮತ್ತು ಅಭಿಮಾನವೆನಿಸುತ್ತದೆ. ಏಕೆಂದರೆ ಇದು ಕಲ್ಯಾಣ ಚಾಲುಕ್ಯರ ಸಾಂಸ್ಕೃತಿಕ ರಾಜಧಾನಿಯಾಗಿ, ಘಟಿಕಾಸ್ಥಾನವನ್ನು ಹೊಂದಿದ್ದ ವಿದ್ಯಾಕೇಂದ್ರವಾಗಿ, ಸಂಗೀತ ರುದ್ರ ಸಂಘದ ಉದ್ಭವದ ಭೂಮಿಯಾಗಿ ಮತ್ತು ಕಲ್ಯಾಣ ಕರ್ನಾಟಕ ಸ್ವಾತಂತ್ರ ಚಳವಳಿಯ ಪ್ರಸ್ಥಭೂಮಿಯಾಗಿ, ರಝಾಕಾರ ಹತ್ಯಾಕಾಂಡ ತ್ರಸ್ಥಭೂಮಿಯಾಗಿ, ತನ್ನನು ತಾನು ದೇಶಕ್ಕಾಗಿ ಸಮರ್ಪಿಸಿಕೊಂಡ ಮಹಾನ್ ಕ್ರಾಂತಿಭೂಮಿಯಾಗಿ ಇತಿಹಾಸ ಪುಟಗಳಲ್ಲಿ ಚಿರಸ್ಥಾಯಿಯಾಗಿದೆ. ಹುತಾತ್ಮರ ತೀರ್ಥಕ್ಷೇತ್ರ, ವೀರಭೂಮಿಯಾಗಿರುವ ಗೋರಟಾ ಗ್ರಾಮವನ್ನು 'ದಕ್ಷಿಣ ಭಾರತದ ಜಲಿಯನ್ ವಾಲಾಬಾಗ್' ಎಂದೇ ಕರೆಯಲ್ಪಡುತ್ತದೆ.

ಗೋರಟಾ ರಝಾಕಾರ ಹತ್ಯಾಕಾಂಡದ ಪ್ರತ್ಯಕ್ಷದರ್ಶಿಗಳಾಗಿದ್ದ ತಂದೆಯವರು ಮತ್ತು ಅವರ ಪರಮಾಪ್ತ ಗೆಳೆಯರಾಗಿದ್ದ ಮೇಲಗಲ್ಲಿ ಶ್ರೀ ವಿರೂಪಾಕ್ಷಯ್ಯ ಮಠಪತಿದ್ವಯರು ರಝಾಕಾರ ಹತ್ಯಾಕಾಂಡದಲ್ಲಿ ನಡೆದ ಘಟನೆಗಳನ್ನು ನೀಳ್ಗವನ ಮಾದರಿಯಲ್ಲಿ ಬರೆದು 'ಬುಲಾಯಿಪದ' ಹೆಸರಿನಲ್ಲಿ ೧೯೫೬ರಲ್ಲಿ ಪ್ರಕಟಪಡಿಸಿ ಮಹದುಪಕಾರವನ್ನು ಮಾಡಿದ್ದಾರೆ. ಇಂದು ನಮಗೇನಾದರೂ ಆ ಹತ್ಯಾಕಾಂಡ ನಡೆದ ಘಟನೆಯ ಮಾಹಿತಿಯನ್ನು ಲಭ್ಯವಾಗಿದೆ ಎಂದರೆ ಅದು ಈ ಉಭಯರ ಪುಣ್ಯವೆನ್ನಬೇಕು.

ನಾಗರ ಪಂಚಮಿ ಮುಂತಾದ ಸಂದರ್ಭದಲ್ಲಿ ನನ್ನ ತಾಯಿಯವರು ಭುಲಾಯಿ ಪದ ಹಾಡನ್ನು ಮನಕಲುಕುವಂತೆ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅದನ್ನು ಕೇಳುತ್ತಿದ್ದರೆ ನಮ್ಮ ಕಣ್ಣಲ್ಲಿ ನೀರು ಬರುತ್ತಿದ್ದವು. ನಮ್ಮ ರಕ್ತ ಕುದಿಯುತ್ತಿತ್ತು. ಕಣ್ಣಲ್ಲಿ ನೀರಲ್ಲ, ರಕ್ತದ ಹನಿ ಬಂದಂಗೆನಿಸುತ್ತಿತ್ತು. ಇದನ್ನೆಲ್ಲ ಕೇಳುತ್ತ ಬೆಳೆದ



ನಮಗೆ ತಾಯ್ನಾಡಿನ ಸ್ವಾತಂತ್ರಕ್ಕಾಗಿ ಬಲಿದಾನರಾದ ಗೋರಟಾದ ಆ ಎಲ್ಲ ಹೋರಾಟಗಾರರ ಮತ್ತು ವೀರ ಹುತಾತ್ಮರ ಸಂಸ್ಮರಣಾರ್ಥವಾಗಿ 'ಹುತಾತ್ಮ ಸ್ಮಾರಕ' ನಿರ್ಮಾಣ ಮಾಡಬೇಕೆಂಬ ಸಂಕಲ್ಪವು ಮನದೊಳಗೆ ಅಂಕುರಿಸಿತ್ತು.

ನಮ್ಮ ಮನೆಯಲ್ಲಿ ಅಜ್ಜಿ ಸಿದ್ದವ್ವ ಇರುತ್ತಿದ್ದರು. ನಮ್ಮನ್ನೆಲ್ಲ ಸಾಕಿ ಸಲಹಿದ್ದರು. ಅವರು ಎದುರಿನಲ್ಲಿ ಇದ್ದಾಗ ಯಾರೂ ರಝಾಕಾರ ಘಟನೆಯ ಬಗ್ಗೆ ಮಾತಾಡುತ್ತಿರಲಿಲ್ಲ. ಹೀಗೇಕೆಂದು ನಮಗೆ ಮೊದ ಮೊದಲು ತಿಳಿಯುತ್ತಿರಲಿಲ್ಲ. ಆನಂತರ ತಿಳಿಯಿತು. ಇವರು ಹುತಾತ್ಮ ರಾಚೋಟಿಸ್ವಾಮಿ ಅವರ ತಾಯಿ ಎಂದು. ರಾಚೋಟಿ ಸ್ವಾಮಿ ಲಿಂಗೈಕ್ಯರಾದ ನಂತರ ಇವರು ನಮ್ಮ ಮನೆಯಲ್ಲಿಯೇ ಕೊನೆತನಕ ಇದ್ದರು.

೧೯೯೭ರಲ್ಲಿ ಗೋರಟಾದಲ್ಲಿ ಶ್ರೀ ಸಂಗೀತ ರುದ್ರ ಸಂಘದ ಸುವರ್ಣ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಪರಮಪೂಜ್ಯ ಶ್ರೀಮದ್ ರಂಭಾಪುರಿ ಮತ್ತು ಶ್ರೀಮತಕ್ಕಾಶಿ ಜಗದ್ಗುರುಗಳ ಅಮೃತ ಹಸ್ತದಿಂದ ನನ್ನ ಅಣ್ಣ ವಿಶ್ರಾಂತ ಸಂಗೀತ ಪ್ರಾಧ್ಯಾಪಕರಾದ ಡಾ॥ ಸಿದ್ಧರಾಮಯ್ಯ ಸ್ವಾಮಿ ಬಾಗಲಕೋಟ ಅವರು ರಚಿಸಿದ 'ಸಂಗೀತ ಶ್ರೀರುದ್ರ' ಎಂಬ ಮೌಲಿಕ ಕೃತಿಯನ್ನು ಬಿಡುಗಡೆಗೊಳಿಸಿದರು. ಅದರಲ್ಲಿ ಅವರು ಗೋರಟಾ ರಝಾಕಾರ ಹತ್ಯಾಕಾಂಡವನ್ನು ಕುರಿತು ಅಗ್ರ ಲೇಖನವನ್ನು ಬರೆದಿರುವರು. ತಂದೆಯವರ ಭುಲಾಯಿ ಪದ ಪುಸ್ತಕವನ್ನು ಓದುತ್ತ ಬೆಳೆದ ನಮಗೆ ಅಣ್ಣನವರ ಈ ಲೇಖನವು ಆ ಘಟನೆಯನ್ನು ಸಮಗ್ರವಾಗಿ ತಿಳಿದುಕೊಳ್ಳಲು ಸಹಾಯಕವಾಯಿತು. ಇದಲ್ಲದೇ ಆ ಕುರಿತ ಇತರ ಲೇಖನಗಳೂ ಸಹ ದೊರೆತವು. ಅಣ್ಣ ಡಾ. ಸಿದ್ಧರಾಮಯ್ಯನವರು ಬರೆದ ಅನೇಕ ಲೇಖನಗಳಿಂದ ಪ್ರಭಾವಿತರಾದ ನಾವು ಸಂಶೋಧನಾತ್ಮಕ ಲೇಖನ, ಗ್ರಂಥಗಳನ್ನು ಬರೆಯಲು ಸಾಧ್ಯವಾಯಿತು.

ಬಾಲ್ಯದಿಂದಲೂ ಬರಹದತ್ತ ಮುಖ ಮಾಡಲು ಪ್ರೇರಣೆಯಿತ್ತು ಹರಸಿದ ಪೂಜ್ಯ ತಂದೆಯವರಾದ ಶ್ರೀ ವಿರೂಪಾಕ್ಷಯ್ಯ ಸ್ವಾಮಿ, ತಾಯಿ ಶ್ರೀಮತಿ ವೀರಮ್ಮನವರಿಗೂ, ಚಿಕ್ಕಪ್ಪ ಮೇಲಗಲ್ಲಿ ಶ್ರೀ ವಿರೂಪಾಕ್ಷಯ್ಯ ಮಠಪತಿ, ಸೋದರತ್ತೆ ಶ್ರೀಮತಿ ಸರಸ್ವತಿ ಸ್ವಾಮಿ ಇವರುಗಳಿಗೆ ಭಕ್ತಿ ಗೌರವಗಳಿಂದ ಸ್ಮರಿಸುವೆನು.

ಸದ್ಗುರುಗಳಾದ ಬೇಮಳಖೇಡ ಹಿರೇಮಠ ಅಧಿಪತಿಗಳಾಗಿದ್ದ 'ತಪೋರತ್ನ' ಲಿಂ. ಶ್ರೀ ಷ.ಬ್ರ. ಗುರುಪಾದ ಶಿವಾಚಾರ್ಯರಲ್ಲಿ ಭಕ್ತಿಯ ಪ್ರಣಾಮಗಳು. ಸದಾ ಕರುಣೆಯ ಕೃಪೆದೋರುತ್ತಿರುವ ಶ್ರೀಶೈಲದ ಅಕ್ಕಮಹಾದೇವಿ ಚೈತನ್ಯ ಕೇಂದ್ರದ ಅಧಿಪತಿಗಳಾದ 'ಮಹಾ ತಪಸ್ವಿ' ಪೂಜ್ಯ ಶ್ರೀ ಕರುಣಾದೇವಿ ಮಾತಾ ಅವರಲ್ಲಿ ಭಕ್ತಿಯ ಅಭಿವಂದನೆಗಳು.

ಈ ಕೃತಿ ರಚನೆಗೆ ಕಾರಣಕರ್ತರಾದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ ಮತ್ತು ರಜಿಸ್ಟ್ರಾರ ಕರಿಯಪ್ಪ ಮತ್ತು ಸದಸ್ಯರುಗಳಿಗೆ ಕೃತಜ್ಞತೆಗಳು. ಕೃತಿ ರಚನೆಯಲ್ಲಿ ಅಮೂಲ್ಯ ಮಾರ್ಗದರ್ಶನ ಮಾಡಿದ ಸಹೋದರ ಡಾ॥ ಸಿದ್ಧರಾಮಯ್ಯ ಸ್ವಾಮಿ ಬಾಗಲಕೋಟ ಅವರಿಗೂ, ಈ ಮಾಲೆಯ ಸಂಪಾದಕರಾದ ಬಾಗಲಕೋಟೆಯ ಡಾ. ಪ್ರಕಾಶ ಖಾಡೆ ಅವರಿಗೂ ಮತ್ತು ಕೃತಿ ರಚನೆ ಮಾಹಿತಿಯನ್ನು ನೀಡಿದ ಡಾಬಿ ರಘುಶಂಖ ಭಾತಂಬ್ರಾ ಅವರಿಗೂ ಕೃತಜ್ಞತೆಗಳು. ಕೃತಿ ರಚನೆ ಸಮಯದಲ್ಲಿ ಭಕ್ತಿಯಿಂದ ಗುರುಸೇವೆ ಸಲ್ಲಿಸಿದ ಪರಮ ಶಿಷ್ಯರಾದ ನೌಬಾದಿಯ ಶ್ರೀಮತಿ ಸುನೀತಾ ಶ್ರೀ ಕಂಟೆಪ್ಪಾ ಬಂಗೂರೆ ಅವರಿಗೂ ಮತ್ತು ಕಡಿಮೆ ಅವಧಿಯಲ್ಲಿ ತ್ವರಿತವಾಗಿ ಅಕ್ಷರ ಜೋಡಣೆಯನ್ನು ಮಾಡಿಕೊಟ್ಟ ಸೋದರಿ ಶ್ರೀಮತಿ ಸಂಗೀತಾ ರಘುನಾಥ ಅವರಿಗೂ ಸುಂದರವಾಗಿ ಪುಸ್ತಕವನ್ನು ಪ್ರಿಂಟ್ ಮಾಡಿಕೊಟ್ಟ ರಶ್ಮಿ ಪ್ರಿಂಟರ್ಸ್ ಅವರಿಗೂ, ಮುಖಪುಟ ವಿನ್ಯಾಸ ಮಾಡಿದ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೂ ತುಂಬು ಹೃದಯದ ಅನಂತಾನಂತ ಮಂಗಲಾಶೀರ್ವಾದಗಳು.

ತಮ್ಮ

**– ಶ್ರೀ ಡಾ॥ ರಾಜಶೇಖರ ಶಿವಾಚಾರ್ಯರು, ಬೇಮಳಖೇಡ**

ಜ್ಞಾನ ಶಿವಯೋಗಾಶ್ರಮ, ಬೀದರ
ದಿ: ೦೧.೦೧.೨೦೨೨

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೦ |
| ಅಧ್ಯಾಯ–೧ **ಕಲ್ಯಾಣ ಕರ್ನಾಟಕ ವಿಮೋಚನಾ ಚಳವಳಿ** | ೧೫ |
| ಅಧ್ಯಾಯ–೨ **ಗೋರಟಾದ ಪ್ರಾಚೀನತೆ** | ೩೨ |
| ಅಧ್ಯಾಯ–೩ **ಗೋರಟಾ ರಝಾಕಾರ ಹತ್ಯಾಕಾಂಡ** | ೩೫ |
| **ಭುಲಾಯಿಪದ** | ೭೩ |
| **ಗ್ರಂಥ ಋಣ** | ೮೨ |
| ● ಅನುಬಂಧ ಛಾಯಾಚಿತ್ರಗಳು | ೮೩ |
| ● ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೮೫ |

ಅಧ್ಯಾಯ–೧

# ಕಲ್ಯಾಣ ಕರ್ನಾಟಕ ವಿಮೋಚನಾ ಚಳವಳಿ

## ಹಿನ್ನೆಲೆ:

ಭವ್ಯ ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಶುಭ ಸಂದರ್ಭಕ್ಕೆ ನಾವುಗಳು ಸಾಕ್ಷಿಯಾಗುತ್ತಿರುವುದು ಸೌಭಾಗ್ಯವೆನ್ನಬೇಕು. ಈ ಕನಸು ಸಾಕಾರಗೊಳ್ಳುತ್ತಿರುವುದಕ್ಕೆ ನಾವೆಲ್ಲರೂ ಹೆಮ್ಮೆ ಮತ್ತು ಅಭಿಮಾನವನ್ನು ಪಡಬೇಕು. ಈ ಸಂಭ್ರಮದ ಶುಭಸಂದರ್ಭವನ್ನು ಉಡುಗೊರೆಯಾಗಿ ನೀಡಿದ ದೇಶದ ಸ್ವಾತಂತ್ರ ಚಳವಳಿಯ ಆ ಎಲ್ಲಾ ಹೋರಾಟಗಾರ ಮಹಾಪುರುಷರನ್ನು ಸದಾ ಸ್ಮರಿಸುತ್ತ ಮುನ್ನಡೆಯುವುದು ನಮ್ಮ ಆದ್ಯ ಕರ್ತವ್ಯವಾಗಬೇಕು.

ಸ್ವಾತಂತ್ರವು ನಮಗೆ ಸುಲಭವಾಗಿ ಸಿಕ್ಕಿಲ್ಲ. ಆ ಎಲ್ಲಾ ವೀರ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನದ ಫಲವಾಗಿ ನಮಗೆ ದೊರಕಿದ್ದು ಎಂದೆಂದೂ ಮರೆಯಲಾಗದ ಸಂಗತಿ.

ಭಾರತದ ಸ್ವಾತಂತ್ರ್ಯ ಚಳವಳಿಯು ಜಾಗತಿಕ ಸ್ವಾತಂತ್ರ್ಯ ಹೋರಾಟಗಳ ಚರಿತ್ರೆಯಲ್ಲಿ ಒಂದು ಮೈಲಿಗಲ್ಲಾಗಿ ಕಂಡುಬರುತ್ತದೆ. ಅಷ್ಟೇ ಅಲ್ಲ! ಅದೊಂದು ವಿಶಿಷ್ಟ ಮಾದರಿಯ, ತಾತ್ವಿಕ ಸಿದ್ಧಾಂತದ ಮೇಲೆ ರೂಪಿತವಾದ ಮಹತ್ತರವಾದ, ಅಷ್ಟೇ ವಿಭಿನ್ನವಾದ ಚಳವಳಿಯಾಗಿ ಜಾಗತಿಕರ ಗಮನ ಸೆಳೆದಿದೆ. ಏಕೆಂದರೆ ಇದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಅಪೂರ್ವ ದೂರದೃಷ್ಟಿಯ ಫಲವಾಗಿ ಅಹಿಂಸಾತ್ಮಕ ನೆಲೆಗಟ್ಟಿನ ಮೇಲೆ ರೂಪುಗೊಂಡ ವಿಶಿಷ್ಟ ಸ್ವಾತಂತ್ರ್ಯ ಚಳವಳಿಯಾಗಿ ಗುರುತಿಸಿಕೊಂಡಿದೆ. ಜಾಗತಿಕ ಇತರೆ ಆ ಎಲ್ಲಾ ಚಳುವಳಿಗಿಂತ

ಭಾರತದ ಸ್ವಾತಂತ್ರ್ಯ ಚಳವಳಿಯು ಈ ಕಾರಣಕ್ಕಾಗಿ ವಿಭಿನ್ನವಾಗಿ ಕಂಡುಬರುತ್ತದೆ. ಗಾಂಧೀಜಿ ಅವರ ಅಹಿಂಸಾತ್ಮಕ ಚಳವಳಿ ಸಾರ್ವಕಾಲಿಕ ಮೌಲಿಕ ಸಂದೇಶ ನೀಡುತ್ತಿದೆ. ವರ್ತಮಾನದಲ್ಲೂ ಪ್ರಸ್ತುತವೆನಿಸುತ್ತಿದೆ.

ಸುಮಾರು ಇನ್ನೂರು ವರ್ಷಗಳ ಕಾಲ ಬ್ರಿಟಿಷರ ನಿರಂಕುಶ ಆಡಳಿತದ ಕಪಿಮುಷ್ಠಿಯಲ್ಲಿ ನಲುಗಿಹೋಗಿದ್ದ ಭಾರತಕ್ಕೆ ಬಾಪೂಜಿಯವರು ಸ್ವಾತಂತ್ರ್ಯ ಆಂದೋಲನದ ಮೂಲಕ ಸ್ವಾತಂತ್ರ್ಯವನ್ನು ತಂದುಕೊಟ್ಟಿರುವುದು ಬಲ್ಲ ಸಂಗತಿ.

ಭಾರತದ ಸ್ವಾತಂತ್ರ್ಯ ಚಳವಳಿಗೆ ಸುದೀರ್ಘ ಇತಿಹಾಸವಿದೆ. ೧೯೮೭ರಿಂದ ಪ್ರಾರಂಭವಾದ ಸ್ವಾತಂತ್ರ್ಯ ಚಳವಳಿಯು ಗಾಂಧೀಜಿಯವರ ಮುಂದಾಳತ್ವದಲ್ಲಿ ವ್ಯಾಪಕ ಸ್ವರೂಪ ಪಡೆಯಿತು. ಕರನಿರಾಕರಣೆ, ಖಿಲಾಫತ್ ಚಳುವಳಿ, ಉಪ್ಪಿನ ಸತ್ಯಾಗ್ರಹ, ಭಾರತ ಬಿಟ್ಟು ತೊಲಗಿ ಮುಂತಾದ ಘಟನೆಗಳು ಚಳವಳಿಯ ಸ್ವರೂಪವನ್ನು ಬದಲಿಸಿತು. ಇಡೀ ಭಾರತದ ಜನತೆ ಚಳುವಳಿಯಲ್ಲಿ ದುಮುಕಿತು. ಪರಿಣಾಮ ಸೂರ್ಯಮುಳುಗದ ಬ್ರಿಟಿಷ ಸಾಮ್ರಾಜ್ಯದ ಆಡಳಿತ ಅಧಿಪತ್ಯ ಅಲುಗಾಡತೊಡಗಿ ಭಾರತದ ಸ್ವಾತಂತ್ರ್ಯದ ಹೆಬ್ಬಾಗಿಲು ತೆರೆದುಕೊಳ್ಳುವಂತೆ ಮಾಡಿತು.

ಸ್ವಾತಂತ್ರ್ಯ ಚಳವಳಿಯ ಹೋರಾಟಗಾರ ಮಹಾಪುರುಷರ ದೊಡ್ಡ ಪಡೆಯೇ ನಮಗೆ ದೊರಕಿದ್ದು ನಮ್ಮ ಸುದೈವ. ಅವರಲ್ಲಿ ರಾಜಾರಾಮ ಮೋಹನ್‌ರಾಯ್, ಮೋತಿಲಾಲ್ ನೆಹರು, ಬಾಲಗಂಗಾಧರ ತಿಳಕ್, ಗೋಪಾಲಕೃಷ್ಣ ಗೋಖಲೆ, ಲಾಲಾ ಲಜಪತರಾಯ, ಬಿಪಿನಚಂದ ಪಾಲ್, ಬ್ಯಾನರ್ಜಿ, ಅರವಿಂದ ಘೋಷ್, ಅನ್ನಿಬೆಸಂಟ್, ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಷ್ ಚಂದ್ರ ಭೋಸ್, ಆಚಾರ್ಯ, ಕೃಪಲಾನಿ, ಬಾಬು ರಾಜೇಂದ್ರ ಪ್ರಸಾದ್, ಮದನ್ ಮೋಹನ ಮಾಲವಿಯಾ, ಆಚಾರ್ಯ ವಿನೋಬಾಜಿ, ಸರೋಜಿನಿ ನಾಯ್ಡು, ಸ್ವಾಮಿ ರಾಮಾನಂದ ತೀರ್ಥ, ಹುತಾತ್ಮ ಚಂದ್ರಶೇಖರ ಆಜಾದ್, ಭಗತ್‌ಸಿಂಗ್, ಸುಖದೇವ, ರಾಜಗುರು, ಪ್ರಮುಖರಾದ ಮುಂತಾದ ಸಾವಿರಾರು ಜನ



ಸ್ವಾತಂತ್ರ್ಯ ಹೋರಾಟಗಾರರ ದೇಶಪ್ರೇಮ, ತ್ಯಾಗ, ಬಲಿದಾನಗಳ ಫಲವಾಗಿ ನಮಗೆ ಸ್ವಾತಂತ್ರ್ಯ ದೊರಕಿದೆ.

ಬ್ರಿಟಿಷರ ಒಡೆದಾಳುವ ತಂತ್ರ, ಕುತಂತ್ರ ಮತ್ತು ಶಸ್ತ್ರಾಸ್ತ್ರಗಳ ವಿರುದ್ಧ ಗಾಂಧೀಜಿಯವರ 'ಸತ್ಯ ಮತ್ತು ಅಹಿಂಸಾ'ವೆಂಬ ಪರಮ ಅಸ್ತ್ರಗಳನ್ನು ಬಳಸಿ ಬ್ರಿಟೀಷರನ್ನು ಒದ್ದೋಡಿಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿರುವುದು ಅಭೂತಪೂರ್ವ ರೋಚಕ ಸಂಗತಿಯಾಗಿದೆ. ಸ್ವಾತಂತ್ರ್ಯ ಚಳವಳಿಯ ವಿಭಿನ್ನ ಮಜಲುಗಳಾಗಿದ್ದ ಮಂದಗಾಮಿಗಳು ಮತ್ತು ತೀವ್ರಗಾಮಿ ಸ್ವಾತಂತ್ರ್ಯ ಹೋರಾಟಗಾರರ ಮಧ್ಯದಲ್ಲಿ ಸಹಜ ಸತ್ಯವಾದಿಯಾಗಿ ಎದ್ದು ಬಂದ ಗಾಂಧೀಜಿ ತನ್ನ ಸತ್ಯ ಮತ್ತು ಅಹಿಂಸಾತ್ಮಕ ಹೋರಾಟದಿಂದ ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಸಫಲರಾದುದು ಆಶ್ಚರ್ಯದ ಸಂಗತಿ; ಈ ನೆಲದ ಪುಣ್ಯ. ಏಕೆಂದರೆ ತೀವ್ರಗಾಮಿಗಳಂತೆ ಗಾಂಧೀಜಿಯವರು ಶಸ್ತ್ರಕ್ಕೆ ಶಸ್ತ್ರವೇ ಉತ್ತರವೆಂದು ಸ್ವಾತಂತ್ರ್ಯ ಚಳವಳಿಗೆ ಮುಂದಾಗಿದ್ದರೆ ದೇಶವು ಬಹುದೊಡ್ಡ ಆಪತ್ತು ಎದುರಿಸಬೇಕಾಗುತ್ತಿತ್ತು. ಬಹುದೊಡ್ಡ ಪ್ರಮಾಣದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದು ಕೊಳ್ಳಬೇಕಾಗುತ್ತಿತ್ತು. ಏಕೆಂದರೆ ಅಪಾರ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಮತ್ತು ನುರಿತ ಸೈನಿಕ ಪಡೆ ಹೊಂದಿದ್ದ ಬ್ರಿಟಿಷರ ವಿರುದ್ಧ ಭಾರತ ಆ ನಿಟ್ಟಿನಲ್ಲಿ ಊಹಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ನಮ್ಮಲ್ಲಿ ಶಸ್ತ್ರಗಳೂ ಇರಲಿಲ್ಲ. ಸೈನ್ಯವೂ ಇರಲಿಲ್ಲ. ಪ್ರಾಯಶಃ ಈ ಸತ್ಯವನ್ನರಿತೇ ಬಾಪೂಜಿ ಬ್ರಿಟಿಷರ ವಿರುದ್ಧ ಆ ಮುಂಚೆ ಎಲ್ಲಿಯೂ ಬಳಸಿರದ ಸತ್ಯ ಮತ್ತು ಅಹಿಂಸಾಸ್ತ್ರಗಳನ್ನು ಪ್ರಬಲ, ಪ್ರಖರವಾಗಿ ಬಳಸಿದರು. ಅದು ಯಶಸ್ವಿಯೂ ಎನಿಸಿತು ಮತ್ತು ಅದು ಹೊಸದೊಂದು ಪರಮಾಸ್ತ್ರವಾಗಿ ಹೊರಹೊಮ್ಮಿತು.

**ಕಾಯಿಸಿದ ಸ್ವಾತಂತ್ರ್ಯ:**

೧೯೪೭ ಆಗಸ್ಟ ೧೫ ರಂದು ದೇಶಕ್ಕೆ ಸ್ವಾತಂತ್ರ್ಯ ಬಂದರೂ ಇಂದಿನ ಕಲ್ಯಾಣ ಕರ್ನಾಟಕ ಭಾಗಕ್ಕೆ ಸ್ವಾತಂತ್ರ್ಯದ ಭಾಗ್ಯ ದೊರಕಿರಲಿಲ್ಲ. ೧೯೪೮ ಸೆಪ್ಟೆಂಬರ ೧೭ರವರೆಗೆ ಕಾಯಬೇಕಾಯಿತು. ಏಕೆಂದರೆ ಈ ಪ್ರದೇಶ ಹೈದ್ರಾಬಾದ ನಿಜಾಮ್ ಸಂಸ್ಥಾನದ ಆಡಳಿತದ ಕಪಿಮುಷ್ಠಿಯಲ್ಲಿತ್ತು. ಸ್ವತಂತ್ರ ಭಾರತದಲ್ಲಿ

ಈ ಪ್ರದೇಶ ವಿಲೀನವಾಗಬೇಕೆಂಬ ಏಕಮೇವ ಸದುದ್ದೇಶದಿಂದ ಈ ಪ್ರದೇಶದ ರಾಷ್ಟ್ರಭಕ್ತರು, ದೇಶಪ್ರೇಮಿಗಳು ಕಲ್ಯಾಣ ಕರ್ನಾಟಕ ಪ್ರದೇಶದ ವಿಮೋಚನೆಗಾಗಿ ಹೈದ್ರಾಬಾದ ನಿಜಾಮ ಸಂಸ್ಥಾನದ ವಿರುದ್ಧ ದೊಡ್ಡ ಚಳವಳಿಯನ್ನೇ ನಡೆಸಬೇಕಾಯಿತು. ಇದು ಹೈದ್ರಾಬಾದ ಕರ್ನಾಟಕ ಸ್ವಾತಂತ್ರ್ಯ ಹೋರಾಟ ಅಥವಾ ವಿಮೋಚನಾ ಚಳವಳಿ ಎಂದೇ ಇತಿಹಾಸದಲ್ಲಿ ಪ್ರಸಿದ್ಧಿಯಾಗಿದೆ. ಇದು ಭಾರತದ ಸ್ವಾತಂತ್ರ್ಯ ಸಂಗ್ರಾಮದಷ್ಟೇ ಮನ್ನಣೆ–ಮಹತ್ವವನ್ನು ಪಡೆದುಕೊಂಡಿದೆ.

ಹೈದ್ರಾಬಾದ ನಿಜಾಮ್ ಸಂಸ್ಥಾನದ ವಿರುದ್ಧ ನಡೆದ ಕಲ್ಯಾಣ ಕರ್ನಾಟಕ ಸ್ವಾತಂತ್ರ್ಯ ಚಳುವಳಿಯು ರಕ್ತಸಿಕ್ತ ರಣರೋಚಕ ಸಂಗತಿಗಳಿಂದ ಕೂಡಿದೆ. ಭಾರತ ಸ್ವಾತಂತ್ರ್ಯ ಚಳವಳಿಗಿಂತಲೂ ಇದು ವಿಶಿಷ್ಟವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಅಲ್ಲಿ ಕೇವಲ ಬ್ರಿಟಿಷರ ವಿರುದ್ಧ ಮಾತ್ರ ಹೋರಾಟ ನಡೆದರೆ, ಇಲ್ಲಿ ಬ್ರಿಟಿಷರ ಮತ್ತು ಹೈದ್ರಾಬಾದ ನಿಜಾಮ್‌ನ ಹೀಗೆ ಇಬ್ಬರ ವಿರುದ್ಧವೂ ಏಕಕಾಲದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ನಡೆಸಬೇಕಾಯಿತು. ಈ ಚಳುವಳಿಗೆ ಮುಖ್ಯ ಕಾರಣವೆಂದರೆ ಈ ಭಾಗವನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಬೇಕೆಂಬುದಾಗಿತ್ತು. ದೇಶಭಕ್ತ ರಾಷ್ಟ್ರಪ್ರೇಮಿ ಸ್ವಾತಂತ್ರ ಹೋರಾಟಗಾರರು ತಮ್ಮ ಇತಿಮಿತಿಯೊಳಗೆ ಚಳವಳಿಯನ್ನು ರೂಪಿಸಿದರಲ್ಲದೇ ಪ್ರಾಣದ ಹಂಗನ್ನು ತೊರೆದು ಅದರಲ್ಲಿ ಧುಮುಕಿದರು.

## ಹೈದ್ರಾಬಾದ ನಿಜಾಮ್ ಸಂಸ್ಥಾನ:

ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಸುಮಾರು ೫೦೦ಕ್ಕೂ ಅಧಿಕ ರಾಜ ಸಂಸ್ಥಾನಗಳು ತಮ್ಮ ತಮ್ಮ ಪರಿಧಿಯಲ್ಲಿ ಆಳ್ವಿಕೆಯನ್ನು ನಡೆಸಿಕೊಂಡು ಬರುತ್ತಿದ್ದವು. ಹತ್ತಾರು ಬಲಾಢ್ಯ ಶ್ರೀಮಂತ ಸಂಸ್ಥಾನಗಳು ಇದ್ದವು. ಅವುಗಳಲ್ಲಿ ಹೈದ್ರಾಬಾದ ನಿಜಾಮ ಸಂಸ್ಥಾನವೂ ಒಂದಾಗಿತ್ತು. ಹಿಂದೂ ವಿರೋಧಿ ನೀತಿಯನ್ನು ಹೊಂದಿದ್ದ ಶ್ರೀಮಂತ ಸಂಸ್ಥಾನವಾಗಿತ್ತು.

ಔರಂಗಜೇಬನ ದಂಡನಾಯಕನಾಗಿದ್ದ ನಿಜಾಮ್ ಉಲ್ ಮುಲ್ಕ ಅಸಫ್‌ಜಾಹಿ ೧೭೧೩ರಲ್ಲಿ ನಿಜಾಮ್ ಅಥವಾ ಅಸಫ್‌ಜಾಹಿ ವಂಶವನ್ನು ಬೆಳಕಿಗೆ ತಂದು ೧೭೨೪ರಲ್ಲಿ ಹೈದ್ರಾಬಾದನ್ನು ವಶಪಡಿಸಿಕೊಂಡು ನಿಜಾಮ್ ಸಂಸ್ಥಾನ ಆಡಳಿತವನ್ನು ಸಂಸ್ಥಾಪಿಸಿದನು. ಅವನ ನಂತರ ನಾಸಿರ್‌ಜಂಗ್, ಮುಸಾಫಿರ್ ಜಂಗ್, ಸಲಬತ್ ಜಂಗ್, ಸಿಕಂದರ್ ಜಹಾ, ನಾಸಿರ್ ಉದ್ದೀನ್ ದೌಲ್, ಅಸಫಲ್ ಉಲ್ ಅಲಿ, ಮೀರ್ ಮಹಿಬೂಬ್ ಅಲಿಖಾನ್ ಇವನ ನಂತರ ಮಗ ಮೀರ್ ಉಸ್ಮಾನ್ ಅಲಿ ಖಾನ್(೧೯೧೧) ಸಂಸ್ಥಾನದ ಕೊನೆಯ ನಿಜಾಮನಾಗಿ ೧೯೪೮ ಸೆಪ್ಟೆಂಬರ್ ೧೭ರ ವರೆಗೆ ಆಡಳಿತ ನಡೆಸಿದನು.

ಕೊನೆಯ ನಿಜಾಮ್ ಮೀರ್ ಉಸ್ಮಾನ್ ಅಲಿಖಾನ್‌ನು ಬ್ರಿಟಿಷ ಭಾರತದಲ್ಲಿಯೇ ಅತ್ಯಂತ ಶ್ರೀಮಂತ ರಾಜರುಗಳಲ್ಲಿ ಪ್ರಥಮನಾಗಿದ್ದನು. ಈತ 'ಖಂಜೂಸ್ ಮತ್ತು ಡರಪುಕ್' ನಿಜಾಮನಾಗಿದ್ದನೆಂದು ಇತಿಹಾಸಕಾರರು ಹೇಳುತ್ತಾರೆ. ಈತನ ಕಾಲದಲ್ಲಿ ಸ್ವಾತಂತ್ರ್ಯ ಸಂಗ್ರಾಮ ವ್ಯಾಪಕವಾಗಿ ಹರಡಿದಾಗ ಬ್ರಿಟಿಷರಿಗೆ ಬೆಂಬಲ ನೀಡಿದ್ದ. ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ನಿಜಾಮ್ ರಾಜ್ಯದಲ್ಲಿ ರಜಾಕಾರರ ದೌರ್ಜನ್ಯಗಳು ಮುಗಿಲು ಮುಟ್ಟಿದ್ದವು. ಅದರ ವಿರುದ್ಧ ಜನಾಂದೋಲನ ತಾರಕಕ್ಕೇರಿದವು. ಆ ಮನಕಲುಕುವ ಕಲ್ಯಾಣ ಕರ್ನಾಟಕ ಸ್ವಾತಂತ್ರ್ಯ ಚಳವಳಿಯ ಘಟನೆಗಳನ್ನು ಈ ಮುಂದೆ ನೋಡೋಣ!

## ಹಿಂದೂಗಳ ನೆಲೆ ಬೆಲೆ:

ಹೈದ್ರಾಬಾದ ನಿಜಾಮ ಸಂಸ್ಥಾನದಲ್ಲಿ ಶೇ ೨೦ರಷ್ಟು ಮುಸ್ಲಿಂರಿದ್ದರೆ ೮೦ ರಷ್ಟು ಹಿಂದೂಗಳಿದ್ದರೆ ಇವರು ಬಹುಸಂಖ್ಯಾತರಾಗಿದ್ದರೂ ಇವರ ಸ್ಥಿತಿ ದುರ್ಭರವಾಗಿತ್ತು. ಆಡಳಿತದಲ್ಲಿ ಅವರಿಗೆ ಕವಡೆಯ ಕಿಮ್ಮತ್ತು ಇರಲಿಲ್ಲ. ಇಸ್ಲಾಂ ಷರಿಯತ್ ಪ್ರಕಾರ ಆಡಳಿತ ನಡೆಯುತ್ತಿತ್ತು. ಉರ್ದು ಆಡಳಿತದ ಭಾಷೆಯಾಗಿತ್ತು. ತೆಲುಗು, ಮರಾಠಿ, ಕನ್ನಡ, ಹಿಂದಿ ಭಾಷೆಗಳು ಎರಡ್ಮೂರನೆಯ ಸ್ಥಾನದಲ್ಲಿದ್ದವು. ಉರ್ದು ಬಿಟ್ಟರೆ ಮೋಡಿ ಲಿಪಿಯನ್ನು ಹೆಚ್ಚಾಗಿ ಬಳಸುತ್ತಿದ್ದರು.

ಹಿಂದೂಗಳ ಮೇಲೆ ದಬ್ಬಾಳಿಕೆಯನ್ನು ನಡೆಸುವುದೇ ನಿಜಾಮ ಆಡಳಿತದ

ಮುಖ್ಯ ಧ್ಯೇಯವಾಗಿತ್ತು. ಇವರನ್ನು ಗುಲಾಮರಂತೆ ನೋಡಿಕೊಳ್ಳಲಾಗಿತ್ತು. ಯಾವುದೇ ರೀತಿಯ ಸ್ವಾತಂತ್ರ್ಯವಿರಲಿಲ್ಲ. ಧಾರ್ಮಿಕ ಸ್ವಾತಂತ್ರ್ಯವಂತೂ ಮೊದಲೇ ಇರಲಿಲ್ಲ. ಹಬ್ಬ ಹರಿದಿನಗಳನ್ನು ಆಚರಿಸುವ, ಜಾತ್ರೆ, ಉತ್ಸವ ಮೆರವಣಿಗೆಯನ್ನು ನಡೆಸುವಂತಿರಲಿಲ್ಲ. ಎಲ್ಲದಕ್ಕೂ ಸರ್ಕಾರದ ಪರವಾನಗಿ ಕಡ್ಡಾಯವಾಗಿತ್ತು. ತಪ್ಪಿದಲ್ಲಿ ದಂಡ ತೆರಬೇಕಾಗಿತ್ತು. ಹೀಗಾಗಿ ಹಿಂದೂಗಳ ಪರಿಸ್ಥಿತಿ ತೀರ ಶೋಚನೀಯ ಮತ್ತು ದಯನೀಯವಾಗಿತ್ತು.

ದೇಶದಲ್ಲಿದ್ದ ಇತರ ಸಂಸ್ಥಾನದ ರಾಜಪ್ರಭುತ್ವ ಆಡಳಿತದಲ್ಲಿ ಪ್ರಜೆಗಳ ಯೋಗಕ್ಷೇಮ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳ ಸುಧಾರಣೆಯ ಗಾಳಿ ಬೀಸತೊಡಗಿತ್ತು. ಜೊತೆಗೆ ಪ್ರಜೆಗಳ ಯೋಗಕ್ಷೇಮ ಅಥವಾ ಹಿತ ರಕ್ಷಣೆಯನ್ನು ಮುಂದಿಟ್ಟುಕೊಂಡು ಸುಧಾರಣೆಗಳನ್ನು ತರುವ ಪ್ರಯತ್ನಗಳೂ ನಡೆಯತೊಡಗಿದ್ದವು. ಇದರ ಮೊದಲ ಪ್ರಯತ್ನವಾಗಿ ೧೮೮೦ರಲ್ಲಿ ಮೈಸೂರು ಸಂಸ್ಥಾನದ ಆಡಳಿತದಲ್ಲಿ ಪ್ರಜೆಗಳ ಹಿತ ರಕ್ಷಣೆಗಾಗಿ ಪ್ರಜಾಪ್ರತಿನಿಧಿಗಳ ಸಭೆಯನ್ನು ಸ್ಥಾಪಿಸಲ್ಪಟ್ಟಿತ್ತು. ಇದರ ಪ್ರಭಾವ ಇತರ ಸಂಸ್ಥಾನಗಳ ಆಡಳಿತದ ಮೇಲೆಯೂ ಬೀರ ತೊಡಗಿತ್ತು.

ಇದೇ ಸಮಯದಲ್ಲಿ ಸಾಮಾಜಿಕ ಸುಧಾರಣಾವಾದಿಯಾಗಿದ್ದ ಹೈದ್ರಾಬಾದಿನ ರಾಯಬತ್ ಮುಕುಂದರು ೧೯೧೯ರಲ್ಲಿ ಹೈದ್ರಾಬಾದ ನಿಜಾಮ್ ಸಂಸ್ಥಾನದಲ್ಲಿ ಇಂತಹದೊಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಶಿಫಾರಸ್ಸು ಮಾಡಿದರು. ೧೯೨೧ರಲ್ಲಿ ಸುಧಾರಣಾ (Reform Committe) ಸಮಿತಿ ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದವಾದರೂ ಅದು ಯಶಸ್ವಿಯಾಗಲಿಲ್ಲ. ಅಲ್ಲಲ್ಲಿ ನಡೆಯುತ್ತಿದ್ದ ಇಂತಹ ಪ್ರಯತ್ನಗಳನ್ನು ಚಿವುಟಿ ಹಾಕುವ ನಿಟ್ಟಿನಲ್ಲಿ ನಿಜಾಮ್ ಇವುಗಳ ವಿರುದ್ಧ ನಿಷೇಧವನ್ನು ಹೇರಿದನು. ಸುಧಾರಣೆಯ ಬದಲಾಗಿ ಅದರ ವಿರುದ್ಧ ೧೯೨೯ರಲ್ಲಿ 'ಕಾಲಾಗಪ್ತಿ' ಎಂಬ ಹಿಂದೂ ವಿರೋಧಿ ಕಾನೂನನ್ನು ಜಾರಿಗೆ ತಂದನು. ಕಾಲಾಗಪ್ತಿಯಲ್ಲಿದ್ದ ೫೩ ನಿಯಮಗಳ ಮೂಲಕ ಹಿಂದೂ ಜನಗಳ ದೈನಂದಿನ ಬದುಕಿನ ಸ್ವಾತಂತ್ರ್ಯವನ್ನೂ ಸಹ ಹರಣ ಮಾಡಿದ್ದನು.



**ಮಜಲಿಸ್ ಎ ಇತ್ತೇಹಾದುಲ್ ಮುಸಲ್ಮಿನ್:**

ಇದೇ ಸಂದರ್ಭದಲ್ಲಿ ಹಿಂದೂಗಳ ವಿರುದ್ಧ ಮಾತಿಗೊಮ್ಮೆ ಉರಿದು ಬೀಳುತ್ತಿದ್ದ ಮಹಮ್ಮದ್ ನವಾಜ್ ಖಾನ್ ಎನ್ನುವವನು ಹೈದ್ರಾಬಾದಿನಲ್ಲಿ 'ಮಜಲಿಸೇ ಇತ್ತೇಹಾದುಲ್ ಮುಸಲ್ಮಿನ್' ಎಂಬ ಸಂಸ್ಥೆಯೊಂದನ್ನು ಹುಟ್ಟುಹಾಕಿದನು. ಹಿಂದೂ ವಿರೋಧಿಯಾಗಿದ್ದ ಈ ಸಂಸ್ಥೆಗೆ ನಿಜಾಮನು ಸಂಪೂರ್ಣ ಬೆಂಬಲ ನೀಡಿದನಲ್ಲದೇ ಕಾನೂನಾತ್ಮಕ ಸಂರಕ್ಷಣೆ ನೀಡಿ ಆದೇಶ ಹೊರಡಿಸಿದನು. ನಿಜಾಮನ ಪರವಾಗಿ ಎಲ್ಲಾ ಮುಸಲ್ಮಾನರನ್ನು ಒಗ್ಗೂಡಿಸಿ ಸಂಘಟಿಸುವುದು ಮತ್ತು ಸಂಸ್ಥಾನದಲ್ಲಿ ಬಹುಸಂಖ್ಯಾತರಾಗಿದ್ದ ಹಿಂದೂಗಳನ್ನು ಮುಸ್ಲಿಂರನ್ನಾಗಿ ಮತಾಂತರ ಗೊಳಿಸುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು.

ಇತ್ತೇಹಾದುಲ್ ಮುಸಲ್ಮಿನ್ ಸಂಘಟನೆಯು ಹಿಂದೂ ಸಮಾಜದ ವಿರುದ್ಧ ಮುಸ್ಲಿಂರನ್ನು ಎತ್ತಿ ಕಟ್ಟಿ ಅವರಲ್ಲಿ ಉಗ್ರ ಹಿಂದೂ ವಿರೋಧಿಭಾವ ಬಲಿಯುವಂತೆ ಮಾಡುವುದು ಮತ್ತು ಹಿಂದೂ ಸಮಾಜದಲ್ಲಿದ್ದ ಇತರ ನಿಮ್ನ ವರ್ಗದ ಜನರನ್ನು ಹಿಂದೂಗಳ ವಿರುದ್ಧ ಎತ್ತಿ ಕಟ್ಟಿ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿತ್ತು.

**ರಝಾಕಾರ ಉಗ್ರ ಸಂಘಟನೆ:**

ಹಿಂದೆಂದೂ ನಡೆಯದ, ಊಹಿಸಿಕೊಳ್ಳಲೂ ಆಗದಂತಹ ರೀತಿಯಲ್ಲಿ ಹಿಂದೂಗಳ ಮೇಲೆ ನಡೆದ ದಬ್ಬಾಳಿಕೆ, ಕ್ರೌರ್ಯ, ಹಿಂಸೆ, ಬರ್ಬರ ಕೊಲೆ, ಸುಲಿಗೆ ಸಾಮೂಹಿಕ ಅತ್ಯಾಚಾರಗಳು ಭಯಾನಕ ರೀತಿಯಲ್ಲಿ ಹೈದ್ರಾಬಾದ ನಿಜಾಂ ಸಂಸ್ಥಾನದಲ್ಲಿ ನಡೆದವು. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ 'ರಝಾಕಾರ'ವೆಂಬ ಹೆಸರಿನ ಸಂಘಟನೆ. ಇದು ಒಂದು ರೀತಿಯಲ್ಲಿ ಈಗಿನ ತಾಲಿಬಾನ್ ಉಗ್ರ ಸಂಘಟನೆಯಂತೆ. ಇದು ಪ್ರತ್ಯೇಕ ರಾಷ್ಟ್ರದ ಕಲ್ಪನೆಯಿಂದ ಜನ್ಮ ತಳೆದಿತ್ತು. ಪ್ರಬಲ ಹಿಂದೂ ವಿರೋಧಿಯಾಗಿತ್ತು. ಇದರ ಸಂಸ್ಥಾಪಕ ಖಾಸೀಂ ರಜ್ವಿ. ಈತ ಮೂಲತಃ ಮಹಾರಾಷ್ಟ್ರದ ಲಾತೂರಿನವನು. ವೃತ್ತಿಯಿಂದ ಹೈದ್ರಾಬಾದಿನಲ್ಲಿ ವಕೀಲನಾಗಿದ್ದನೆಂದು ಹೇಳಲಾಗುತ್ತಿದೆ. ಕಟ್ಟಾ ಇಸ್ಲಾಂ

ಧರ್ಮಿಯ. ತೀವ್ರ ಹಿಂದೂ ವಿರೋಧಿಯಾಗಿದ್ದವನು. ಈಗಿನ ಉಗ್ರಗಾಮಿಗಳ ನಾಯಕನಂತೆ.

ಖಾಸಿಂ ರಜ್ವಿ ಇತ್ತೇಹಾದುಲ್ ಮುಸಲ್ಮಿನ್ ಸಂಘಟಣೆಯಿಂದ ಪ್ರೇರೇಣೆ ಹೊಂದಿದ್ದನು. ಈತ ಮಾತೆತ್ತಿದರೆ ಹಿಂದೂಗಳ ವಿರೋಧವಾಗಿ ಬೆಂಕಿ ಉಗುಳುತ್ತಿದ್ದನು. ಹೋದಲೆಲ್ಲ ಹಿಂದೂ ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸುತ್ತಿದ್ದನು. ಮುಸ್ಲಿಂ ಯುವಕರನ್ನು ಹುರಿದುಂಬಿಸಿ ಸಂಸ್ಥಾನದ ತುಂಬೆಲ್ಲ ಸಂಘಟನೆಯನ್ನು ವ್ಯಾಪಕವಾಗಿ ಬೆಳೆಸಿದನು. ಸ್ವಲ್ಪೇ ಸಮಯದಲ್ಲಿ ಬಲಾಢ್ಯವಾದ ರಝಾಕಾರ ಪಡೆಯನ್ನು ಕಟ್ಟಿ ಬೆಳೆಸಿದನು.

## ಖಾಸೀಂ ರಜ್ವಿ:

ನಿಜಾಮ ಸಂಸ್ಥಾನದಲ್ಲಿ ಹೆಚ್ಚಿನ ಪ್ರಚಾರಕ್ಕೆ ಬಂದ ಖಾಸೀಂರಜ್ವಿ. ನಿರೀಕ್ಷೆಯಂತೆ ನಿಜಾಮನ ಸಂಪರ್ಕಕ್ಕೆ ಬಂದನು. ಅಲ್ಪ ಸಮಯದಲ್ಲಿ ನಿಜಾಮನ ಆಪ್ತವಲಯದಲ್ಲಿ ಗುರುತಿಸಿಕೊಂಡನು. ಮುಂದೆ ಆತನ ಬಲಗೈಬಂಟನಾದ. ರಜಾಕಾರ ಸಂಘಟಣೆಗೆ ನಿಜಾಮ ಬಹಿರಂಗವಾಗಿ ಬೆಂಬಲ ನೀಡಿದನು. ಎಲ್ಲಾ ರೀತಿಯ ಸಹಾಯ ಸಹಕಾರ ನೀಡತೊಡಗಿದನು. ರಜ್ವಿಯ ವರ್ಚಸ್ಸು ವೃದ್ಧಿಸತೊಡಗಿತು. ರಝಾಕಾರ ಸಂಘಟಣೆಯು ನಿಜಾಮನ ಅನಧಿಕೃತ ಮಿಲಿಟರಿ ಪಡೆಯಂತೆ ಬಲಗೊಂಡಿತು. ರಜ್ವಿಯ ವರ್ಚಸ್ಸು ಹೆಚ್ಚತೊಡಗಿತು. ಆತ ಸೈನ್ಯದ ವಲಯದಲ್ಲಿ ನಿರ್ಣಾಯಕ ಪಾತ್ರ ವಹಿಸುವಷ್ಟು ಪ್ರಬಲನಾಗತೊಡಗಿದನು.

ಮೊದಮೊದಲು ನಿಜಾಮನಲ್ಲಿ 'ಛೋಟಾ ಪಾಕಿಸ್ತಾನ' ಎಂಬ ಸರ್ವತಂತ್ರ ಸ್ವತಂತ್ರವಾದ ಪ್ರತ್ಯೇಕ ರಾಷ್ಟ್ರದ ಕಲ್ಪನೆ ಇರಲಿಲ್ಲವೆಂದು ಹೇಳಲಾಗುತ್ತಿದೆ. ಬ್ರಿಟಿಷರಿಂದ ಬಿತ್ತಿದ ಈ ಬೀಜ ಮೊಳಕೆಯೊಡೆದರೂ ಬೆಳೆದಿರಲಿಲ್ಲ. ಅದನ್ನು ನೀರೆರೆದು ಪೋಷಿಸಿ ಬೆಳೆಸಿದವನೆಂದರೆ ಈ ಖಾಸೀಂ ರಜ್ವಿ. ನಿಜಾಮನಲ್ಲಿ ಈ ಕನಸು ಚಿಗುರಿದಂತೆಲ್ಲ ರಜ್ವಿ ಮತ್ತಷ್ಟೂ ಪ್ರಬಲನಾಗತೊಡಗಿದನು. ಸಮಯ ಕಳೆದಂತೆಲ್ಲ ಅವನ ಜೀವನ ಶೈಲಿ ಬದಲಾಗತೊಡಗಿತು. ಈಗ ರಜ್ವಿಯು ಸೇನಾಧಿಕಾರಿಯ ಸಮವಸ್ತ್ರದಲ್ಲಿ ಕಾಣಿಸತೊಡಗಿದನು. ಮತ್ತಷ್ಟೂ ಹಿಂದೂ ವಿರೋಧಿಯಾಗತೊಡಗಿದನು. ನಿಜಾಮನ ಅಧಿಕೃತ ಮಿಲಿಟರಿ ಪಡೆಯ ಮೇಲೆ ನಿಯಂತ್ರಣವನ್ನೂ ಹೊಂದಿದನು.



ಖಾಸೀಂ ರಜ್ವಿಯ ಬೆಳವಣಿಗೆಯಿಂದಾಗಿ ರಝಾಕಾರರು ಮತ್ತಷ್ಟು ಉಗ್ರ, ವ್ಯಗ್ರರಾಗತೊಡಗಿದರು. ಹಿಂದೂಗಳ ಮೇಲೆ ದೌರ್ಜನ್ಯಗಳು ತಾರಕ್ಕೇರಿದವು. ಕೊಲೆ, ಸುಲಿಗೆ, ಹಿಂಸೆ, ಅತ್ಯಾಚಾರಗಳು ಮುಗಿಲ ಮುಟ್ಟಿದವು. ಇವರನ್ನು ಕೇಳುವವರೇ ಇಲ್ಲದಂತಾಯಿತು. ಸಂಸ್ಥಾನದಲ್ಲಿ ಶೇ.೮೦ರಷ್ಟಿದ್ದ ಹಿಂದೂಗಳ ಜೀವನಕ್ಕೆ ಬೆಲೆ ಇಲ್ಲದಂತಾಯಿತು. ಅವರು ನಿತ್ಯ ನರಕಯಾತನೆಯನ್ನು ಅನುಭವಿಸುವಂತಾಯಿತು. ರಝಾಕಾರ ಕುಕೃತ್ಯ ಮತ್ತು ಅಟ್ಟಹಾಸಗಳನ್ನು ಯಾರೂ ಕೇಳದಂತಾಯಿತು. ಇದರಿಂದಾಗಿ ಹಿಂದೂಗಳ ಜೀವನ ಅಪಾಯಕ್ಕೆ ಸಿಲುಕುವಂತಾಯಿತು. ರಝಾಕಾರರ ಧ್ಯೇಯವಾಕ್ಯವೇ ವಿಚಿತ್ರವಾಗಿತ್ತು. ಜನಸಾಮಾನ್ಯ ಹಿಂದೂಗಳಲ್ಲಿ ಭಯಹುಟ್ಟಿಸುವಂತಿತ್ತು. ಅದು ಹೀಗಿದೆ:

> **"ಬಮ್ಮನ್ ಕೊ ಕಾಟೋ, ಬನಿಯಾ ಕೊ ಲೂಟೋ ಆಪಸ್ ಮೇ ಬಾಂಟೋ ರಖೋ ಜಾನ್, ಜಾಗ್ ಉಠೋ, ಅಮರ್ ಹಮಾರಾ ಛೋಟಾ ಪಾಕಿಸ್ತಾನ್"**

ಹಿಂದೂ ಶ್ರೀಮಂತ ವರ್ಗದವರನ್ನು, ನಿರ್ದಯಿಯಾಗಿ ಹೊಡೆದು ಬಡಿದು ಹಿಂಸಿಸುವುದು ಕೊಳ್ಳೆ ಹೊಡೆದು ಅವರನ್ನು ಬೆದರಿಸಿ ಬಲವಂತಾಗಿ ಇಸ್ಲಾಂಮಿಗೆ ಮತಾಂತರಗೊಳಿಸುವುದೇ ರಝಾಕಾರ ಸಂಘಟನೆಯ ಮುಖ್ಯ ಉದ್ದೇಶವಾಗಿತ್ತು. ನಿತ್ಯ ಕಾಯಕವಾಗಿತ್ತು.

## ಫಸ್ತಕೋಮ್ ಸಂಘಟಣೆ:

ಈ ಮಧ್ಯದಲ್ಲಿ 'ಫಸ್ತಕೋಮ' ಎಂಬ ಅನಧಿಕೃತ ಸಂಘಟನೆಯೊಂದನ್ನು ಕಾಣಿಸಿಕೊಳ್ಳುತ್ತದೆ. ಇದರ ಸ್ಥಾಪಕರ್ಯಾರು ಮತ್ತು ಇದರ ಧ್ಯೇಯೋದ್ದೇಶಗಳು ಏನೆಂಬುದು ತಿಳಿದುಬರುವುದಿಲ್ಲ. ಇದು ಕೂಡ ಹಿಂದೂ ಶ್ರೀಮಂತರ ವಿರೋಧಿ ಭಾವನೆಯಿಂದ ಜನ್ಮ ತಳೆದಂತಿದೆ. ಹಿಂದೂ ಶ್ರೀಮಂತರ ಆಸ್ತಿಪಾಸ್ತಿಗಳನ್ನು ಕೊಳ್ಳೆಹೊಡೆಯುವ, ಶ್ರೀಮಂತರ ವಿರುದ್ಧದ ದ್ವೇಷವನ್ನು ತೀರಿಸಿಕೊಳ್ಳುವುದಕ್ಕಾಗಿ

'ಫಸ್ತಕೋಮ್' ಸಂಘಟಣೆ ಜನ್ಮತಳೆದಂತೆ ಕಂಡು ಬರುತ್ತದೆ. ಫಸ್ತ್‌ಕೋಮ ಹಿಂದೂ ಸಮಾಜ ಇತರ ಕೆಳವರ್ಗದ ಜನರಿಂದ ಸಂಘಟಿತವಾಗಿತ್ತೆಂದು ಹೇಳಲಾಗುತ್ತಿದೆ. ಹಳ್ಳಿಗಳಲ್ಲಿ ಇದು ಸಕ್ರಿಯವಾಗಿತ್ತು. ಬಡವ–ಬಲ್ಲಿದ, ಮೇಲು ಕೀಳೆಂಬ ತಾರತಮ್ಯದ ದ್ವೇಷಾಗ್ನಿಯ ಹಿನ್ನೆಲೆಯಲ್ಲಿ ರೂಪ ತಾಳಿ ಸಂಘಟಿತವಾಗಿತ್ತೆನ್ನಬಹುದು. ಫಸ್ತ್‌ಕೋಮ ರಝಾಕಾರರಿಂದ ಪ್ರೇರಣೆ ಹೊಂದಿತ್ತು. ಇದೊಂದು ಅವರ ದುಷ್ಟ ಸಂತಾನವೆಂದು ಹೇಳಿದರೆ ತಪ್ಪಲ್ಲ.

ಫಸ್ತಕೋಮ ಜನರು ರಝಾಕಾರರಿಗೆ ಸ್ಥಳೀಯ ಮಟ್ಟದಲ್ಲಿ ಸಹಾಯಕರಾಗಿದ್ದರು. ಗ್ರಾಮೀಣ ಭಾಗದ ಶ್ರೀಮಂತರ ಮತ್ತು ಸ್ವಾತಂತ್ರ್ಯ ಪ್ರೇಮಿಗಳ ಮಾಹಿತಿಗಳನ್ನು ಗುಪ್ತವಾಗಿ ರಝಾಕಾರರಿಗೆ ತಿಳಿಸುತ್ತಿದ್ದರು. ಅಂಥವರನ್ನು ಗುರಿಯಾಗಿಟ್ಟುಕೊಂಡು ರಝಾಕಾರರು ಲೂಟ–ಮಾರ ಮಾಡುತ್ತಿದ್ದರು. ಅಂತಹ ಶ್ರೀಮಂತರಿಂದ ಕೊಳ್ಳೆ ಹೊಡೆದ ವಸ್ತುಗಳಲ್ಲಿ ಶೇ. ೨೫ ಇವರಿಗೆ ಸಲ್ಲುತ್ತಿತ್ತೆಂದು ಹೇಳಲಾಗುತ್ತಿದೆ.

**ಬೀದರ್ ಜಿಲ್ಲೆ ಮತ್ತು ಕಲ್ಯಾಣಕ ರ್ನಾಟಕ ಚಳವಳಿ:**

ನಿಜಾಮ ಸಂಸ್ಥಾನದಲ್ಲಿ ಎಲ್ಲಾ ಕಡೆಗಳಿಗಿಂತ ಬೀದರ ಜಿಲ್ಲೆಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ಚಳವಳಿಯು ಸ್ವಲ್ಪ ಜೋರಾಗಿದ್ದುದ್ದು ಕಂಡುಬರುತ್ತದೆ.

೧೯೪೭ ಅಗಸ್ಟ್ ೧೫ರಂದು ಭಾರತಕ್ಕೆ ಸ್ವಾತಂತ್ರ ದೊರಕಿದರೂ ಕಲ್ಯಾಣ ಕರ್ನಾಟಕದ ಈ ಪ್ರದೇಶಕ್ಕೆ ಸ್ವಾತಂತ್ರ್ಯದ ಸಂಭ್ರಮಾಚರಣೆಯನ್ನು ಹಂಚಿಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಈ ಭಾಗವು ಹೈದ್ರಾಬಾದ ನಿಜಾಮ ಸಂಸ್ಥಾನದ ಆಡಳಿತ ಕಪಿಮುಷ್ಟಿಯಲ್ಲಿತ್ತು. ಇಂದಿನ ತೆಲಂಗಾಣಾದ ಎಂಟು, ಮರಾಠವಾಡಾದ ಐದು, ಕಲ್ಯಾಣ ಕರ್ನಾಟಕದ ಬೀದರ, ಗುಲಬರ್ಗಾ ಮತ್ತು ರಾಯಚೂರು ಈ ಮೂರು ಜಿಲ್ಲೆಗಳು ನಿಜಾಮ ಸಂಸ್ಥಾನಕ್ಕೆ ಒಳಪಟ್ಟಿದ್ದವು. ಕಾರಣ ಹೈದ್ರಾಬಾದ ನಿಜಾಮನು ಭಾರತದ ಒಕ್ಕೂಟಕ್ಕೆ ಸೇರದೇ ೧೯೪೭ ಅಗಸ್ಟ್ ೧೫ ರಂದು ಸ್ವತಂತ್ರನೆಂದು ಘೋಷಿಸಿಕೊಂಡಿದ್ದನು. ಆತ ಸರ್ವತಂತ್ರ



ಸ್ವತಂತ್ರವಾದ 'ಘೋಟಾ ಪಾಕಿಸ್ಥಾನ'ವೆಂಬ ಪ್ರತ್ಯೇಕ ರಾಷ್ಟ್ರವೊಂದನ್ನು ಸ್ಥಾಪಿಸುವ ಹುನ್ನಾರು ನಡೆಸಿದ್ದನು.

ಭಾರತದ ಸ್ವಾತಂತ್ರ ಚಳವಳಿಯಲ್ಲಿ ಬೀದರ ಜಿಲ್ಲೆಯ ಕೊಡುಗೆ ಅಪಾರವಾಗಿದೆ. ೧೮೧೯–೨೦ರಲ್ಲಿ ರಾಷ್ಟ್ರ ಭಕ್ತ ಉದಗೀರದ ಶಿವಲಿಂಗಯ್ಯ ದೇಶಮುಖ ಎಂಬುವವರು ಬ್ರಿಟೀಷರ ವಿರುದ್ಧ ಬಂಡೆದ್ದು ರಣಕಹಳೆಯನ್ನು ಊದಿದ್ದರು. ಇದು ಇಡೀ ದೇಶದಲ್ಲಿಯೇ ನಡೆದ ಮೊಟ್ಟ ಮೊದಲ ಸ್ವಾತಂತ್ರ್ಯದ ಚಟುವಟಿಕೆ ಎಂದು ಹೇಳಲಾಗುತ್ತಿದೆ. ೧೮೫೨ರಲ್ಲಿ ಬೀದರಿನ ಲಿಂಗಪ್ಪ ಎಂಬ ವೀರಪುರುಷ ಬೀದರಿನ ಅನೇಕ ಜಹಗೀರು ಅಥವಾ ಕೋಟೆಗಳನ್ನು ಗೆದ್ದುಕೊಂಡದ್ದು ಚಾರಿತ್ರಿಕ ಸಂಗತಿಯಾಗಿದೆ.

೧೮೫೭ರಲ್ಲಿ ಭಾರತದ ಪ್ರಥಮ ಸ್ವಾತಂತ್ರ ಚಳವಳಿಯು ಮೀರಠದಲ್ಲಿ ಪ್ರಾರಂಭವಾಗಿ ಅದರ ಪ್ರಥಮ ಘಟ್ಟ ೧೮೬೭ರಲ್ಲಿ ಬೀದರನಲ್ಲಿ ತೆರೆಬಿದ್ದಿತು. ಇದರ ಭಾಗವಾಗಿ ರಾಮರಾವ ಊರ್ಫ್ ಜಂಗಬಹದ್ದೂರ್ ಎಂಬುವವನು ಸಾತಾರಾದ ಛತ್ರಪತಿ ಎಂದು ಘೋಷಿಸಿಕೊಂಡನು. ಇವನನ್ನು ೧೮೬೭ರಲ್ಲಿ ತಾತ್ಯಾಟೋಪಿಯು ಕಳಿಸಿಕೊಟ್ಟಿದ್ದನೆಂದು ಹೇಳಲಾಗುತ್ತಿದೆ. ಇದೇ ರಾಮರಾವ್‌ನು ಬ್ರಿಟಿಷರ ಆಡಳಿತ ವಿರುದ್ಧ ಬೀದರ ಜಿಲ್ಲೆಯ ಅಸ್ಟಿಯಲ್ಲಿ ಭಗವಾ ಧ್ವಜವನ್ನು ಹಾರಿಸಿ ಸ್ವಾತಂತ್ರ ರಣಕಹಳೆಯನ್ನು ಊದಿದ್ದನು.

ಮಹಾತ್ಮಾ ಗಾಂಧೀಜಿ ಅವರು ೧೯೩೪ರಲ್ಲಿ ಹೈದ್ರಾಬಾದಿಗೆ ಆಗಮಿಸಿದರು. ಅವರ ಪ್ರೇರಣೆಯಿಂದ ಹೈದ್ರಾಬಾದ ಸ್ಟೇಟ್ ಕಾಂಗ್ರೇಸ್ ಕಮಿಟಿ ಸ್ಥಾಪನೆಯಾಯಿತು. ಸ್ವಾಮಿ ರಾಮಾನಂದತೀರ್ಥರು ಅದರ ಅಧ್ಯಕ್ಷರಾದರು. ಕಾಂಗ್ರೆಸ್ ಮೇಲೆ ನಿಜಾಮನು ಪ್ರತಿಬಂಧಕ ಹೇರಿದನು. ಪರಿಣಾಮವಾಗಿ ಕರ್ನಾಟಕ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಪ್ರಾಂತೀಯ ಪರಿಷತ್ತುಗಳು ಸ್ಥಾಪನೆಯಾದವು.

೧೯೪೨ ಕ್ರಾಂತಿಯೋಗಿ ಸ್ವಾಮಿ ರಮಾನಂದ ತೀರ್ಥರ ಮುಂದಾಳತ್ವದಲ್ಲಿ ಹೈದ್ರಾಬಾದ ಸಂಸ್ಥಾನದಲ್ಲಿಯೂ 'ಚಲೇ ಜಾವ್ ಚಳವಳಿ' ನಡೆಯಿತು. ಸುಮಾರು ೨೦ ಸಾವಿರ ನಿಷ್ಠಾವಂತ ದೇಶಪ್ರೇಮಿಗಳೂ ಹೋರಾಟದಲ್ಲಿ ಭಾಗವಹಿಸಿದರು.

ಕಲ್ಯಾಣ ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಆರ್ಯಸಮಾಜ ಪಾತ್ರ ತುಂಬಾ ದೊಡ್ಡದಾಗಿದೆ. ಪಕ್ಕಾ ಹಿಂದೂ ವಿರೋಧಿ ನೀತಿಯಿಂದ ಆಡಳಿತ ನಡೆಸುತ್ತಿದ್ದ ನಿಜಾಮನ ವಿರುದ್ಧ ಆರ್ಯ ಸಮಾಜ ಟೊಂಕ ಕಟ್ಟಿ ನಿಂತಿದ್ದರಿಂದ ಹಿಂದೂಗಳ ಹಿತರಕ್ಷಣೆ ಸಾಧ್ಯವಾಯಿತು. ಸ್ವಾಮಿ ದಯಾನಂದ ಸರಸ್ವತಿ ಅವರು ೧೮೭೫ರಲ್ಲಿ ಮುಂಬೈನಲ್ಲಿ ಆರ್ಯ ಸಮಾಜವನ್ನು ಸಂಸ್ಥಾಪಿಸಿದರು. ಅದರ ಶಾಖೆಗಳು ನಿಜಾಮ್ ರಾಜ್ಯದ ಬೀಢ ಜಿಲ್ಲೆಯ ಧಾರೇರ್‌ನಲ್ಲಿ ಸ್ಥಾಪಿತವಾಯಿತು. ನಂತರ ಬೀದರ ಜಿಲ್ಲೆಯ ಉದಗೀರದಲ್ಲಿ ೧೯೨೪ರಲ್ಲಿ ಸ್ಥಾಪಿತವಾಯಿತು.  ಹಳ್ಳಿಖೇಡಿನ ಭಾಯಿ ಬನ್ಸಿಲಾಲ ಮತ್ತು ವಕೀಲರಾದ ಶಾಮಲಾಲರು ಇದರ ಮುಖ್ಯಸ್ಥರಾಗಿದ್ದರು. ಊರೂರಿಗೂ ಆರ್ಯ ಸಮಾಜದ ಶಾಖೆಗಳನ್ನು ಹುಟ್ಟಿಕೊಂಡು ನೂರಾರು ಯುವ ಕಾರ್ಯಕರ್ತರು ರಝಾಕಾರರ ವಿರುದ್ಧ ಹೋರಾಟ ಮಾಡಲು ಸಿದ್ಧರಾದರು.

ಜಹಿರಾಬಾದ ಉದಗೀರಗಳಲ್ಲಿ ನಿಜಾಮ ವೀರಶೈವ ಪ್ರಾಂತೀಯ ಪರಿಷತ್ತುಗಳು' ಸ್ಥಾಪಿಸಲ್ಪಟ್ಟು ವಿಮೋಚನಾ ಚಳವಳಿಯಲ್ಲಿ ತೊಡಗಿಸಿಕೊಂಡಿತು. ಸಂಗ್ರಾಮಪ್ಪ ವಕೀಲ, ಪ್ರಭುರಾವ ಕಂಬಳಿವಾಲಾ ಮೊದಲಾದ ಮುಖಂಡರು ಮುಂಚೂಣಿಯಲ್ಲಿದ್ದರು.

ಸ್ವಾತಂತ್ರ ಸಂಗ್ರಾಮದ ಅಡಿಪಾಯದಂತಿದ್ದ ಕಾಂಗ್ರೆಸ್ ಪಕ್ಷದ ಮೇಲೆ ನಿಜಾಮ ಸರ್ಕಾರ ಪ್ರತಿಬಂಧಕ ಅಂದರೆ ನಿಷೇಧವನ್ನು ಹೇರಿದ್ದರಿಂದ ಆರ್ಯ ಸಮಾಜವು ಹಿಂದೂ ಧರ್ಮದ ಸಂಘಟನೆಯ ಜೊತೆಗೆ ವಿಮೋಚನಾ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿತ್ತು. ಅದಕ್ಕೂ ಮೊದಲು ೧೯೧೪–೧೮ರವರೆಗೆ ಬೀದರನಲ್ಲಿ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕರಾಗಿದ್ದ ರಾಯಚೂರಿನ ಪಂ. ತಾರಾನಾಥರು ಸ್ವಾತಂತ್ರ ಚಳವಳಿಯ ಕುರಿತು ಜಾಗೃತಿಯನ್ನು ಮೂಡಿಸಿದ್ದರು.

ತಾತ್ಕಾಲಿನ ಸಮಯದಲ್ಲಿ ಜಿಲ್ಲಾ ಕೇಂದ್ರವಾಗಿದ್ದ ಚಿಟಗುಪ್ಪ ರಾಜಕೀಯ ಚಟುವಟಿಕೆಯ ಕೇಂದ್ರ ಸ್ಥಾನವಾಗಿತ್ತು. ೧೯೩೮ರಲ್ಲಿ ಹಿಂದೂಗಳು ಭವಾನಿ ಮೆರವಣಿಗೆಯನ್ನು ನಡೆಸುತ್ತಿದ್ದಾಗ ಅದನ್ನು ಮತಾಂಧ ಮುಸ್ಲಿಂರು ತಡೆದು ದಾಂಧಲೆಯನ್ನು ಮಾಡಿದಾಗ ನಡೆದ ಘರ್ಷಣೆಯಲ್ಲಿ ಒಬ್ಬ ಮುಸ್ಲಿಂ ಹತನಾದನು. ಪರಿಣಾಮ ನಿಜಾಮ ಆಡಳಿತ ಚಿಟಗುಪ್ಪದ ನೂರಾರು ಹಿಂದೂ ಜನರನ್ನು ಬಂಧಿಸಿ ಜೈಲಿಗೆ ಹಾಕಿತ್ತು.



ಆರ್ಯ ಸಮಾಜದ ಮುಖಂಡ ಶಾಮಲಾಲರನ್ನು ಬೀದರ ಜೈಲಿಗೆ ಹಾಕಿ ೧೯೩೮ ಡಿಸೆಂಬರ ೬ ರಂದು ವಿಷ ಉಣಿಸಿ ಕಾರಾಗೃಹದಲ್ಲಿ ಕೊಲ್ಲಲಾಯಿತು. ಬಸವಕಲ್ಯಾಣದಲ್ಲಿ ೧೯೩೮ರಲ್ಲಿ ಬಸವೇಶ್ವರರ ಮೂರ್ತಿಯ ಮೆರವಣಿಗೆಯನ್ನು ತೆಗೆಯಲೆತ್ನಿಸಿದಾಗ ರಝಾಕಾರರು ಆಕ್ರಮಣವನ್ನು ಮಾಡಿ ಅದರ ಮುಂಚೂಣಿ ನಾಯಕರಲ್ಲಿ ಪ್ರಮುಖರಾಗಿದ್ದ ವೇದ ಪ್ರಕಾಶರನ್ನು ಗುಂಡಿಟ್ಟು ಕೊಲ್ಲಲಾಯಿತು.

ಬೀದರಿನಲ್ಲಿ ೧೯೩೮ರಲ್ಲಿ ಹೋಳಿ ಹುಣ್ಣಿಮೆಯ ಹಬ್ಬದಂದು ರಝಾಕಾರರು ಉಸ್ಮಾನ್‌ಗಂಜನ್ನು ಬೆಂಕಿ ಹಚ್ಚಿ ಸುಟ್ಟು ಹಾಕಿದರು. ಮುಂದೆ ಎಷ್ಟೋ ದಿನಗಳವರೆಗೆ ಗಲಭೆಗಳು ನಡೆಯುತ್ತಿದ್ದವು. ಇಂತಹ ಗಲಭೆಯಲ್ಲಿ ಷಡ್ಯಂತ್ರ ಮಾಡಿ ಬ್ರಿಜ್‌ಪಾಲಸಿಂಗರನ್ನು ಬಂಧಿಸಲಾಯಿತು. ಉಸ್ಮಾನ್ ಗಂಜಿನ ಗಲಭೆಯ ದಿನದಂದು ಖ್ಯಾತ ವಕೀಲರಾಗಿದ್ದ ಬಸವಂತರಾವ ಶೆಟಕಾರರು ಕೋರ್ಟಿನಿಂದ ಮನೆಗೆ ಬರುತ್ತಿದ್ದಾಗ ರಝಾಕಾರರು ಅವರ ಮೇಲೆ ಮಾರಣಾಂತಿಕ ಹಲ್ಲೆಯನ್ನು ನಡೆಸಿ ಹೊಡೆದು ಹಾಕಿದರು.

ಆರ್ಯ ಸಮಾಜ ನೇತಾರರಾಗಿದ್ದ ಧರ್ಮ ಪ್ರಕಾಶ ಹಿಂದೂ ಧರ್ಮ ಸಂಘಟನೆಯ ಜೊತೆಗೆ ಯುವಕರಿಗೆ ವ್ಯಾಯಾಮ, ಲಾಠಿ ಮತ್ತು ತಲವಾರ್‌ಗಳನ್ನು ತಿರುಗಿಸುವ ತರಬೇತಿಯನ್ನು ಕೊಡುತ್ತಿದ್ದರು. ೧೯೩೯ರ ಒಂದು ದಿನ ಆರ್ಯಸಮಾಜದಿಂದ ಯುವಕರಿಗೆ ತರಬೇತಿ ನೀಡಿ ಮನೆಗೆ ಬರುತ್ತಿದ್ದಾಗ ಸುಮಾರು ೨೦೦ ಜನ ಮುಸ್ಲಿಂರು ಅವರ ಮೇಲೆ ಆಕ್ರಮಣವನ್ನು ಮಾಡಿದರು. ಏಕಾಂಗಿಯಾಗಿ ಒಂದು ಗಂಟೆ ಕಾಲ ಸೆಣೆಸಿದರು. ಕಡೆಗೆ ರಝಾಕಾರರು ಅವರನ್ನು ಕೊಂದುಹಾಕಿದರು.

೧೯೪೨ರಲ್ಲಿ ಹುಮನಾಬಾದ ಆರ್ಯ ಸಮಾಜದವರು ಓಂ ಧ್ವಜದ ಮೆರವಣಿಗೆ ಯಶಸ್ವಿಯಾಗಿ ನಡೆಸಿದರು. ಸಂಜೆ ಮತ್ತೊಮ್ಮೆ ಮೆರವಣಿಗೆಯನ್ನು

ನಡೆಸುತ್ತಿದ್ದಾಗ ರಝಾಕಾರರು ಮೆರವಣಿಗೆಯ ಮೇಲೆ ಆಕ್ರಮಣವನ್ನು ಮಾಡಿದರು. ಅದರಲ್ಲಿ ಪಂ.ಶಿವಚಂದ್ರಜೀ, ಲಕ್ಷ್ಮಣಜೀ, ನರಸಿಂಹರಾವಜೀ ಮತ್ತು ರಾವಜೀ ಮುಂತಾದ ಹಿಂದೂ ವೀರರನ್ನು ಗುಂಡಿಟ್ಟು ಕೊಂದು ಹಾಕಿದರು. ಮಾಜಿ ಸಂಸದರಾಗಿದ್ದ ರಾಮಚಂದ್ರ ವೀರಪ್ಪ ವೀರಸ್ವಾತಂತ್ರ ಸೇನಾನಿಯಾಗಿದ್ದರು. ಇವರು ಭೂಗತರಾಗಿ ಮಾಣಿಕರಾವ ಭಂಡಾರಿ, ಮಂಡಲಿಕರಾವ ಪರೀಟರ ಜೊತೆಗೂಡಿ ದೇಶಿ ಬಾಂಬನ್ನು ತಯಾರಿಸಲು ಪ್ರಾರಂಭಿಸಿದರು. ೧೯೪೭ ಜೂನ್ ೭ರಂದು ಬೀದರ ಹತ್ತಿರದ ರಾಯಕೋಡದಲ್ಲಿ ರಝಾಕಾರರು ೧೪ ಜನ ಹಿಂದೂಗಳನ್ನು ಕೊಲೆ ಮಾಡಿದರು. ಬಜಾರದಲ್ಲಿರುವ ಹಿಂದೂಗಳ ಅಂಗಡಿಗಳನ್ನು ಸುಟ್ಟು ಹಾಕಿದರು.

ಅದೇ ವರ್ಷ ಚಿಟಗುಪ್ಪದಲ್ಲಿ ವೀರಭದ್ರಪ್ಪ ಬಿಡಪ ಅವರ ಮೇಲೆ ರಝಾಕಾರರು ಮಾರಣಾಂತಿಕ ಹಲ್ಲೆ ಮಾಡಿದರು. ಮೈತುಂಬ ರಕ್ತದ ಗಾಯಗಳಾಗಿದ್ದವು. ಇವರ ಜೊತೆಗಿದ್ದ ಅಪ್ಪಣ್ಣ ಮತ್ತು ಗುಂಡಪ್ಪ ಇರ್ವರೂ ರಝಾಕಾರರ ಹಲ್ಲೆಯಿಂದ ಹತರಾದರು. ೧೯೪೯ರಲ್ಲಿ ಅರ್ಜುನಸಿಂಹರನ್ನು ಸಹಚರನಾಗಿದ್ದ ಅಬ್ದುಲ್‌ಖಾನ್‌ನು ಹೊಡೆದು ಸಾಯಿಸಿದನು.

## ರಝಾಕಾರ ಅಟ್ಟಹಾಸ:

ದೇಶಕ್ಕೆ ಸ್ವಾತಂತ್ರ ಬಂದ ನಂತರ ಕೇಂದ್ರ ಸರ್ಕಾರ ನಿಜಾಮ ಸರ್ಕಾರದ ವಿರುದ್ಧ ದಿಟ್ಟ ಕ್ರಮ ತೆಗೆದುಕೊಳ್ಳದೇ ಕಾದು ನೋಡುವ ತಂತ್ರ ಅನುಸರಿಸಿತು. ಇದು ರಝಾಕಾರ ಹಾವಳಿ ಹೆಚ್ಚಾಗಲು ಪರೋಕ್ಷ ಕಾರಣವೆಂದು ಹೇಳಲಾಗುತ್ತಿದೆ. ಕೇಂದ್ರ ಸರ್ಕಾರವನ್ನು ತುಷ್ಟೀಕರಣವನ್ನು ಮಾಡುತ್ತಿದ್ದ ಖಾಸೀಂ ರಜ್ವಿ ಬಹಿರಂಗವಾಗಿ ಕೇಂದ್ರ ಸರ್ಕಾರವನ್ನು ವಿರೋಧಿಸುತ್ತಿದ್ದನು. 'ನಿಜಾಮ ಸಾರ್ವಭೌಮ ಹೊಸ ರಾಷ್ಟ್ರವನ್ನು ಕಟ್ಟುವ ತನಕ ನಾನು ವಿಶ್ರಮಿಸುವುದಿಲ್ಲ. ಒಂದು ಕೈಯಲ್ಲಿ ಖುರಾನ್ ಇನ್ನೊಂದು ಕೈಯಲ್ಲಿ ಕತ್ತಿಯನ್ನು ಹಿಡಿದು ಧರ್ಮಯುದ್ಧವನ್ನು ಮಾಡುತ್ತೇನೆಂದು' ರಜ್ವಿ ಸಾರುತ್ತಿದ್ದನು.

ಪ್ರತ್ಯೇಕ ಹೊಸ ರಾಷ್ಟ್ರದ ಸ್ಥಾಪನೆ ನನ್ನ ಗುರಿ. ಪ್ರತಿಯೊಬ್ಬ ನಿಷ್ಠಾವಂತ ಇಸ್ಲಾಮ ಬಾಂಧವ ಹಿಂದೂಗಳ ವಿರುದ್ಧ ಜೆಹಾದ ಅಂದರೆ ಧರ್ಮಯುದ್ಧವನ್ನು



ಮಾಡಬೇಕೆಂದು ಬಹಿರಂಗವಾಗಿ ಹೇಳುತ್ತಿದ್ದನು. ನಮ್ಮನ್ನು ಮೀರಿ ಭಾರತ ಸರ್ಕಾರ ಆಕ್ರಮಣವನ್ನು ಮಾಡಿದರೆ ಹಿಂದೂಗಳನ್ನು ಒತ್ತೆಯಾಳುಗಳನ್ನಾಗಿ ಮಾಡಿಕೊಂಡು ಹೋರಾಡುತ್ತೇವೆ. ಆಕ್ರಮಣಕಾರರು ಒಂದು ಕೋಟಿ ೬೦ ಲಕ್ಷ ಹಿಂದೂಗಳು ಜೀವಂತವಾಗಿ ಸುಟ್ಟು ಹೋಗುವ ಭಯಾನಕ ದೃಶ್ಯವನ್ನು ನೋಡಬೇಕಾಗುತ್ತದೆ ಎಂದು ಖಾಸಿಂ ರಜ್ವಿಯು ಗರ್ಜಿಸುತ್ತಿದ್ದನು.

ರಝಾಕಾರರು ನಿತ್ಯ ಶಸ್ತ್ರಾಸ್ತ್ರಗಳ ಕವಾಯತ ಮಾಡುವ ಮೂಲಕ ತಮ್ಮ ಶಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಆಗಾಗ ಶಸ್ತ್ರಗಳೊಂದಿಗೆ ಮೆರವಣಿಗೆ ಮತ್ತು ಕವಾಯತಗಳನ್ನು ನಡೆಸುತ್ತಿದ್ದರು. ಕಾಫೀರ್‌ದಾರ್ ಹಿಂದೂಗಳನ್ನು ಗುಲಾಮರನ್ನಾಗಿ ಮಾಡುವುದೇ ಇಸ್ಲಾಮರ ದೈವಿಹಕ್ಕು ಎಂದು ಖಾಸಿಂ ರಜ್ವಿ ಹೇಳುತ್ತಿದ್ದನು.

ಭಾರತ ಸರ್ಕಾರದ ಪ್ರತಿನಿಧಿಯಾಗಿದ್ದ ಕೆ.ಎಂ.ಮುನ್ಷಿ ತಮ್ಮ ವಾಹನದ ಮೇಲೆ ತಿರಂಗಾ ಧ್ವಜವನ್ನು ಹಚ್ಚಿಕೊಂಡು ಹೈದ್ರಾಬಾದಿನ ರಸ್ತೆಗಳಲ್ಲಿ ಸಂಚರಿಸುವ ಕಾಲಕ್ಕೆ ಇವರನ್ನು ನೋಡಿ ರಝಾಕಾರರು 'ನಿಜಾಮಕ್ಕೆ ಕದಮೊಮೇ ನೆಹರೂಕೊ ಜುಕಾದೆಂಗೇ, ಪಟೇಲ್ ಮುನ್ಷಿಕೋ ಕಬರೊಮೇ ಗಾಡದೆಂಗೇ' ಎಂದು ಕೇಕೆ ಹಾಕುತ್ತಿದ್ದರಂತೆ.

೧೯೪೮ರಲ್ಲಿ ಮಾಣಿಕರಾವ ಘುಲೇಕರನ್ನು ರಝಾಕಾರ ವಿರುದ್ಧ ಹೋರಾಡಲು ಗೆರಿಲ್ಲಾ ಯುದ್ಧ ತಂತ್ರದ ತರಬೇತಿಗಾಗಿ ವಿಜಯವಾಡಕ್ಕೆ ಕಳಿಸಿಕೊಡಲಾಗಿತ್ತು. ಗುರಪ್ಪ ಲಾಡಗೇರಿ ಜೊತೆಗೆ ಇವರು ಭೂಗತ ಚಳವಳಿಯಲ್ಲಿ ಭಾಗವಹಿಸಿದ್ದರು. ಚಿಟಗುಪ್ಪ, ನರಸಿಂಹ ಬಾಚಾ ರಝಾಕಾರರ ದೌರ್ಜನ್ಯಗಳ ಸಚಿತ್ರಗಳೊಂದಿಗೆ ಭಾರತ ಸರ್ಕಾರಕ್ಕೆ ಸೋಲಾಪುರ ಕ್ಯಾಂಪನಿಂದ ವರದಿಗಳನ್ನು ಕಳಿಸುತ್ತಿದ್ದರು.

ಚಿಟಗುಪ್ಪದ ಬಸವರಾಜ ಹುಡುಗಿ ಭೂಗತರಾಗಿ ಸ್ವಾತಂತ್ರ ಹೋರಾಟಗಾರರಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುವ ಕೆಲಸಮಾಡುತ್ತಿದ್ದರು. ಗೋವಾ ವಿಮೋಚನ ಚಳವಳಿಯಲ್ಲಿ ಇವರು ಪೋರ್ಚಗೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಸ್ವಾಮಿ ರಮಾನಂದ ತೀರ್ಥರ ಆದೇಶ ಮೇರೆಗೆ ಬೀದರ

ಜಿಲ್ಲೆ ಕಾಂಗ್ರೇಸ್ ಘಟಕವನ್ನು ಸ್ಥಾಪಿಸಲು ಕಾರಣಕರ್ತರಾದ ಯಶವಂತರಾವ ಸಾಯಂಗಾಂವಕರ ಮತ್ತು ಅಪ್ಪಾರಾವ ಪಾಟೀಲ ಕೌಳಖೇಡ ತಮ್ಮ 'ಟೋಳಿ'ಗಳನ್ನು ಕಟ್ಟಿಕೊಂಡು ರಝಾಕಾರ ವಿರುದ್ಧ ಹೋರಾಡಿದ ವೀರಸೇನಾನಿಗಳಾಗಿದ್ದರು.

ಇವರಲ್ಲದೇ ಬಾವು ಸಾಹೇಬ ದೇಶಪಾಂಡೆ, ಸಂಗಯ್ಯ ಕೋಮಟಿ, ಕಿಶನಲಾಲ್ ಪಾಂಡೆ, ಕೆ.ಎಸ್.ರಾಜ, ಬಂಡೆಪ್ಪ ಪಾಟೀಲ, ಸಿದ್ರಾಮ ಮೋಚಿ, ರಘೋತ್ತಮದಾಸ ಕೇಶವರಾವ ದೇಶಮುಖ, ಭವಾನಿಸಿಂಗ್, ಶ್ರೀನಿವಾಸ ಖೇಳಿಕರ, ರಾಮಕೃಷ್ಣ ಅಣದೂರಕರ, ಮೂರಲಿಧರ ಕಾಮತಿಕರ, ನಾನಾ ಸಾಹೇಬ ಕುಮ್ಮೇಕರ, ವಿಶ್ವನಾಥರಾವ ತಡಪಲ್ಲಿಕರ, ಗ್ಯಾನೋಬಾ ವಕೀಲ, ಶ್ರೀನಿವಾಸರಾವ ಹವಾಲದಾರ್, ಅಪ್ಪಾರಾವ ನಾರಾಯಣಖೇಡ, ಮಹಾಂತಪ್ಪ ಮಡಕಿ, ರಾಮಣ್ಣ ಕ್ಯಾಸಾ, ಯಶವಂತರಾವ ಸಾಯಗಾಂವಕರ, ಚಂದ್ರಪಾಲ ಆರ್ಯ, ಇಟಗೆಪಲ್ಲಿ ದೇಶಮುಖ, ಪ್ರಭುರಾವ ಕಂಬಳಿವಾಲಾ ಮುಂತಾದ ಸ್ವಾತಂತ್ರ ಸೇನಾನಿಗಳು ಹೈದ್ರಾಬಾದ ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುವರು.

ರಝಾಕಾರರ ಅನ್ಯಾಯ, ಅತ್ಯಾಚಾರ, ದೌರ್ಜನ್ಯಗಳಿಗೆ ತತ್ತರಿಸಿ ಹೋದ ಸಾವಿರಾರು ಜನರು ಬ್ರಿಟಿಷ ಇಂಡಿಯಾ ಭಾಗಗಳಿಗೆ ನಿರಾಶ್ರಿತರಾಗಿ ಓಡಿಹೋಗಬೇಕಾಯಿತು. ಜೊತೆಗೆ ಬಹಳಷ್ಟು ಜನ ನವಯುವಕರು ಚಳುವಳಿಯಲ್ಲಿ ತೊಡಗಿ ರಝಾಕಾರರನ್ನು ಶಸ್ತ್ರಾಸ್ತ್ರದೊಂದಿಗೆ ಎದುರಿಸಿ ಹೋರಾಡಿದರು. ಇನ್ನೂ ಕೆಲ ಸ್ವಾತಂತ್ರ ಹೋರಾಟಗಾರರು ಭೂಗತರಾಗಿದ್ದುಕೊಂಡು ರಝಾಕಾರರ ಹಾವಳಿಯ ಬಗ್ಗೆ ಮಾಹಿತಿಯನ್ನು ಕೊಡುತ್ತಿದ್ದರಲ್ಲದೇ ಸ್ವಾತಂತ್ರ ಹೋರಾಟಗಾರರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದರು.

ಭಾರತ ಸರ್ಕಾರ ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳ ಗಡಿಭಾಗದ ವಾಗಧರಿ, ಗೌಡಗಾಂವ, ದುಧುನಿ, ಕೆಸರ ಜಾವಳಗಾ, ತಾಳಿಕೋಟ, ಸಿಂಧಗಿ, ಮೈಂದಗಿರ, ಕಕ್ಕಳ ಮೇಲಿ, ಹಳ್ಳಿಕಡೂರು, ಮುಂಡರಗಿ, ತೊಂಡಚೇರ್,



ಲಿಂಗದಹಳ್ಳಿ ಮುಂತಾದ ಕಡೆಗಳಲ್ಲಿ ಕ್ಯಾಂಪಗಳನ್ನು ಸ್ಥಾಪಿಸಿತ್ತು. ಸ್ವಾತಂತ್ರ್ಯ ಹೋರಾಟಗಾರರಾದ ಆರ್.ವಿ. ಬಿಡಪ್ಪ ಇಂತಹ ಅನೇಕ ಕ್ಯಾಂಪಗಳ ಜವಾಬ್ದಾರಿಯನ್ನು ನಿರ್ವಹಿಸಿದ್ದರು.

೧೯೪೭ ಅಗಸ್ಟನಿಂದ ಪ್ರಾರಂಭವಾದ ರಝಾಕಾರರ ಹಾವಳಿಯು ೧೯೪೮ ಸಪ್ಟೆಂಬರ್ ೧೩ರವರೆಗೆ ಅಮಾನುಷವಾಗಿ ಅವ್ಯಾಹಿತವಾಗಿ ನಡೆಯಿತು. ಹೈದ್ರಾಬಾದ ಸಂಸ್ಥಾನ ತುಂಬೆಲ್ಲಾ ರಝಾಕಾರರು ಹಾವಳಿಯು ಹೆಚ್ಚಾಗಿ ಹೋಯಿತು. ಎಲ್ಲೆಂದರಲ್ಲಿ ಹಿಂದೂಗಳನ್ನು ಬರ್ಬರವಾಗಿ ಹತ್ಯೆ ಮಾಡ ತೊಡಗಿದರು. ಬೀದರ ಜಿಲ್ಲೆಯ ಬಸವಕಲ್ಯಾಣ, ಹುಮನಾಬಾದ, ಚಿಟಗುಪ್ಪ, ಬೀದರ, ಗೋರಟಾ, ಮುಚಳಂಬ, ಕೊಹಿನೂರು, ಹೊನ್ನಳ್ಳಿ, ಹಾಲಗೋರ್ಟಾ ಮುಂತಾದ ೧೬ ಹಳ್ಳಿಗಳಲ್ಲಿ ರಝಾಕಾರರ ಹತ್ಯಾಕಾಂಡಗಳು ನಡೆದಿವೆ.

❑

ಅಧ್ಯಾಯ–೨

# ಗೋರಟಾದ ಪ್ರಾಚೀನತೆ

ಗೋರಟಾ ಬೀದರ ಜಿಲ್ಲೆ ಅವಿಭಜಿತ ಬಸವಕಲ್ಯಾಣ ತಾಲೂಕಿನ ಹೆಸರಾಂತ ಗ್ರಾಮವಾಗಿದ್ದು ಭಾಲ್ಕಿ ಬಸವಕಲ್ಯಾಣ ಮಧ್ಯಮಾರ್ಗದಲ್ಲಿದೆ. ಈಗ ನೂತನ ಹುಲಸೂರು ತಾಲೂಕಿನಲ್ಲಿ ಸೇರ್ಪಡೆಗೊಂಡಿದೆ.

ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಗೋರಟಾ ಸನಾತನ ಶೈವ–ವೀರಶೈವ ಹಿಂದೂ ಸಂಸ್ಕೃತಿಯ ಭವ್ಯ ಕೇಂದ್ರವಾಗಿದೆ. ಕಲೆ, ಸಾಹಿತ್ಯ, ಸಂಗೀತ ಮತ್ತು ಸಂಸ್ಕೃತಿಯ ತವರೂರಾಗಿರುವ ಗೋರಟಾ ಕಲ್ಯಾಣ ಚಾಲುಕ್ಯ(ಕ್ರಿ.ಶ.೧೦೭೬)ರ ಕಾಲದ 'ಸಾಂಸ್ಕೃತಿಕ ರಾಜಧಾನಿ' ಎನ್ನುವಷ್ಟರ ಮಟ್ಟಿಗೆ ಪ್ರಖ್ಯಾತಿಯನ್ನು ಪಡೆದುಕೊಂಡಿತ್ತೆಂದು ಹೇಳಲಾಗುತ್ತಿದೆ.

ಗೋರಟಾದ ಪ್ರಾಚೀನ ಹೆಸರು 'ಗೋರಂಟಿ' ಎಂದಿದ್ದು ಶಾಸನಗಳಲ್ಲಿ ಇದನ್ನು 'ಅಗ್ರಹಾರ ಗೋರಂಟಿ' ಎಂದು ಕರೆಯಲ್ಪಟ್ಟಿದೆ. ಇದುವರೆಗೆ ಇಲ್ಲಿ ಹತ್ತಾರು ಶಿಲಾಶಾಸನಗಳು ದೊರಕಿದ್ದು ಅದರಲ್ಲಿ ಒಂದು ತಾಮ್ರಶಾಸನದ ಉಲ್ಲೇಖವೂ ಕಂಡುಬರುತ್ತದೆ. ರಾಜ್ಯದಲ್ಲಿ ಇರುವ ದೊಡ್ಡದಾದ ಶಾಸನಗಳಲ್ಲಿ ಇಲ್ಲಿರುವ ಒಂದು ಶಾಸನವೂ ಸೇರಿದೆ.

ತಕ್ಷಶೀಲಾ, ನಳಂದಾಗಳಂತೆ ಗೋರಟಾ 'ಘಟಿಕಾ ಸ್ಥಾನ'ವನ್ನು ಹೊಂದಿದ್ದ ಪ್ರಾಚೀನ ಬಹುದೊಡ್ಡ ವಿದ್ಯಾಕೇಂದ್ರವಾಗಿತ್ತೆಂದೂ, ಭಾಸ್ಕರ ಚಟ್ಟೋಪಾಧ್ಯಾಯರು ಅದರ ಕುಲಪತಿಗಳಾಗಿದ್ದರೆಂದೂ, ನೂರಾರು ಜನ ಪ್ರಾಧ್ಯಾಪಕರು ಸಾವಿರಾರು ಜನ ವಿದ್ಯಾರ್ಥಿಗಳು ಇಲ್ಲಿದ್ದರೆಂದು ಹೇಳಲಾಗುತ್ತಿದೆ. ಚಾಲುಕ್ಯ ದೊರೆ ೬ನೇ



ವಿಕ್ರಮಾದಿತ್ಯನು ಈ ವಿದ್ಯಾಕೇಂದ್ರದ ಯೋಗ ಕ್ಷೇಮಕ್ಕೆಂದು 'ಭಲ್ಲುಂಕೆ ೮೪' ವಿಭಾಗವನ್ನು ದತ್ತಿಯಾಗಿ ನೀಡಿದ್ದನೆಂದು ಸಂಗತಿಗಳು ಇಲ್ಲಿರುವ ಶಾಸನಗಳಿಂದ ತಿಳಿದುಬರುತ್ತದೆ.

ಪ್ರಾಚೀನ ಗೋರಟಾದಲ್ಲಿ ರುದ್ರೇಶ್ವರ, ನಗರೇಶ್ವರ, ಸಂಕೇಶ್ವರ, ಮಲ್ಲೇಶ್ವರ ಮತ್ತು ಕುಂಭೇಶ್ವರಗಳೆಂಬ ಪಂಚದೇವಾಲಯಗಳಿದ್ದು ಇಲ್ಲೊಂದು ಬೃಹತ್ ಜೈನ ಬಸದಿ, ಸಲ್ಲೇಖನ ಸಮಾಧಿಯೂ ಇದೆ. ಅದರಲ್ಲಿ ರುದ್ರೇಶ್ವರ ದೇವರು ರಾಜಪೂಜಿತವಾಗಿ ಆ ಕಾಲದ ಪ್ರಸಿದ್ಧ ದೇವಾಲಯಗಳಲ್ಲೊಂದಾಗಿತ್ತೆಂದು ಹೇಳಲಾಗುತ್ತಿದೆ. ರುದ್ರೇಶ್ವರ ದೇವರಿಗೆ ನಿತ್ಯದಲ್ಲಿ ವೇದ ಸಂಗೀತದೊಂದಿಗೆ ಆರಾಧನೆಯನ್ನು ಮಾಡಲಾಗುತ್ತಿತ್ತು. ರುದ್ರೇಶ್ವರ ದೇವರ ನಿತ್ಯ ಸೇವೆಗೆ, ಗೀತವಾದ್ಯಗೈವ ಕಲಾವಿದರಿಗೆ, ಅರ್ಚಕರ ಯೋಗ ಕ್ಷೇಮಕ್ಕೆಂದು ಅರಸ ೬ನೇ ವಿಕ್ರಮಾದಿತ್ಯ ಮತ್ತು ಮಹಾರಾಣಿಯರು ಅಪಾರ ಬೆಲೆಬಾಳುವ ಭೂಮಿಸೀಮೆಗಳನ್ನು ದಾನ ನೀಡಿದ ಸಂಗತಿಯು ಶಾಸನಗಳಲ್ಲಿ ಉಕ್ತವಾಗಿದೆ.

ಇಂದಿಗೂ ಕೂಡ ಗೋರಟಾದಲ್ಲಿ ಸಂಗೀತ ರುದ್ರ ಪೂಜೆ ನಡೆಯುತ್ತಿರುವುದು ವಿಶೇಷವಾಗಿದೆ. 'ಸಂಗೀತ ರುದ್ರ ಸಾರ್ವಭೌಮ ಶ್ರೀ ಲಿಂ. ವಿರೂಪಾಕ್ಷಯ್ಯ ಸ್ವಾಮಿಯವರು ಮೇಹಕರ ಮಠದ ಶ್ರೀ ಷ.ಬ್ರ. ರಾಜೋಟಿ ಶಿವಾಚಾರ್ಯರ ಹೆಬ್ಬಯಕೆಯಂತೆ ವೇದದ ರುದ್ರಮಂತ್ರಗಳಿಗೆ ಸಂಗೀತ ಸ್ವರ ಸಂಯೋಜಿಸಿ ೧೧ ಜನ ಮಾಹೇಶ್ವರರು ೧೧ ವಿಧ ವಾದ್ಯಗಳೊಂದಿಗೆ ದೇಶದಲ್ಲಿ ಪ್ರಪ್ರಥಮವಾಗಿ ಶ್ರೀ ಸಂಗೀತ ರುದ್ರವೆಂಬ ಭಕ್ತಿ ಸಂಗೀತ ಕಾರ್ಯಕ್ರಮಕ್ಕೆ ಶ್ರೀಕಾರ ಹಾಕಿದರು. ಶ್ರೀ ಸಂಗೀತ ರುದ್ರ ಸಂಘವನ್ನು ಸ್ಥಾಪಿಸಿ ತನ್ಮೂಲಕ ದೇಶಾದ್ಯಂತ ಸಂಗೀತ ಶ್ರೀರುದ್ರ ಕಾರ್ಯಕ್ರಮವನ್ನು ನೀಡುವ ಮೂಲಕ ನಾಡಿಗೆ, ಗ್ರಾಮಕ್ಕೆ ಅಪೂರ್ವ ಕೀರ್ತಿಯನ್ನು ತಂದಿದ್ದಾರೆ. ೧೯೯೮ರಲ್ಲಿ ಶ್ರೀ ವಿರೂಪಾಕ್ಷಯ್ಯ ಸ್ವಾಮಿ ಅವರಿಗೆ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಯನ್ನು ನೀಡಿ ಗೌರವಿಸಲ್ಪಟ್ಟಿದೆ. ಇಂದಿಗೂ ಕೂಡ ಗೋರಟಾದಲ್ಲಿ ಸಂಗೀತ ಶ್ರೀರುದ್ರ ಪೂಜಾ ಪರಂಪರೆಯು ಮುಂದುವರೆದುಕೊಂಡು ಬರುತ್ತಿದೆ.

ಗೋರಟಾ ಪಾಚೀನ ಕಾಲದಲ್ಲಿ ದೇಶಮಾನ್ಯ ಕಲಾವಿದರ ಸಂಗಮ ತಾಣವಾಗಿತ್ತು. ಅರಸ ೬ನೇ ವಿಕ್ರಮಾದಿತ್ಯನ ಪಟ್ಟದರಸಿಯಾಗಿದ್ದ

ಚಂದಲಾದೇವಿಯು ಗೋರಂಟಿಯಲ್ಲಿದ್ದ ರಾಜಗುರು ವಿಖ್ಯಾತ ಸಂಗೀತಜ್ಞ ರುದ್ರ ಮಿಶ್ರ ಎಂಬುವವರಲ್ಲಿ 'ಸಂಗೀತ ನೃತ್ಯ' ಕಲೆಯನ್ನು ಕಲಿತಿದ್ದಳೆಂದೂ, ಅವಳಿಗೆ ಗೋರಂಟಿಯ ಮಹಾಜನಂಗಳು 'ಸಂಗೀತ ನೃತ್ಯ ವಿದ್ಯಾಧರಿ' ಮತ್ತು 'ನಾಟ್ಯ ವಿಶಾರದೆ' ಎಂಬ ಬಿರುದನ್ನು ನೀಡಿ ಗೌರವಿಸಿದ್ದರೆಂಬ ಸಂಗತಿಯು ಇಲ್ಲಿಯ ಮತ್ತೊಂದು ಶಾಸನ ಉಕ್ತಗೊಳಿಸಿದೆ.

'ಸಂಗೀತ ರುದ್ರಜನಕ' ಪಂ. ವಿರೂಪಾಕ್ಷಯ್ಯನವರ ಸತ್ ಸಂಕಲ್ಪದಂತೆ ಆ ಪ್ರಾಚೀನ ರುದ್ರೇಶ್ವರ ದೇವರ ಪ್ರತೀಕವಾಗಿ ಇಂದು ಗೋರಟಾದಲ್ಲಿ ನೂತನ ಶ್ರೀ ಸಂಗೀತ ರುದ್ರೇಶ್ವರ ದೇವಾಲಯ ಭವ್ಯವಾಗಿ ನಿರ್ಮಾಣಗೊಂಡಿದೆ. ಗ್ರಾಮದ ಶ್ರೀ ಕರಬಸಪ್ಪ ಶರಣಪ್ಪ ಅಕ್ಕಣ್ಣ ಅವರು ದೇವಸ್ಥಾನಕ್ಕೆ ಒಂದು ಎಕರೆ ಜಮೀನನ್ನು ದಾನವಾಗಿ ನೀಡಿದ್ದಾರೆ.

ಗೋರಟಾದಲ್ಲಿ ಸಾಸನ್‌ಪಟ್ಟಿ ಎಂಬ ಪ್ರದೇಶವಿದ್ದು ಇಲ್ಲಿ ಚಾಲುಕ್ಯರ ಕಾಲದಲ್ಲಿ ಶಾಸನಗಳನ್ನು ಸಿದ್ಧಪಡಿಸುವ ಕಾರ್ಯಾಗಾರವಿತ್ತೆಂದು ಹೇಳಲಾಗುತ್ತಿದೆ. ಗೋರಟಾ ರಂಗಭೂಮಿಯ ಪ್ರಮುಖ ಕೇಂದ್ರವಾಗಿದೆ. ಇಲ್ಲಿ ಶತಮಾನ ಕಂಡ ಎರಡು ನಾಟಕ ಸಂಘಗಳಿವೆ. ನೂರಾರು ನಾಟಕಗಳನ್ನು ಆಡಲಾಗಿದೆ. ಸಾಮಾಜಿಕ, ಸಂಗೀತಮಯ ನಾಟಕಕ್ಕೆ ಗೋರಟಾ ಪ್ರಸಿದ್ಧವಾಗಿದೆ.

ವರ್ತಮಾನದಲ್ಲಿ ಗ್ರಾಮದಲ್ಲಿ ಮಹಾದೇವ ಗೋರಖನಾಥ, ಲಕ್ಷ್ಮೀ, ಹನುಮಾನ, ನಗರೇಶ್ವರ ಮುಂತಾದ ದೇವಾಲಯಗಳಿದ್ದು ಗ್ರಾಮಸ್ಥರ ಅನನ್ಯ ಶ್ರದ್ಧಾ ಕೇಂದ್ರಗಳಾಗಿವೆ. ಶ್ರೀ ಗೋರಖನಾಥ ಮಂದಿರವನ್ನು ಮನಃ ಭವ್ಯವಾಗಿ ನಿರ್ಮಾಣ ಮಾಡಲಾಗುತ್ತಿದೆ.

❑

ಅಧ್ಯಾಯ–೩

# ಗೋರಟಾ ರಝಾಕಾರ ಹತ್ಯಾಕಾಂಡ

ಹೈದ್ರಾಬಾದ ನಿಜಾಮ್ ಆಡಳಿತದ ವಿರುದ್ಧ ನಡೆದ ಕಲ್ಯಾಣ ಕರ್ನಾಟಕ ಸ್ವಾತಂತ್ರ ಚಳವಳಿಯಲ್ಲಿ ಗೋರಟಾ ಮಹತ್ತರ ಪಾತ್ರವನ್ನು ವಹಿಸಿದೆ. ರಜಾಕಾರರು ಗೋರಟಾದ ಮೇಲೆ ನಡೆಸಿದ ಭೀಕರ ಹತ್ಯಾಕಾಂಡ ಜಾಗತಿಕ ಮಾನವ ಇತಿಹಾಸದ ಘನಘೋರ ಕರಾಳ ಅಧ್ಯಾಯವಾಗಿದೆ. ಈ ದುಷ್ಕೃತ್ಯಕ್ಕೆ ಕಾರಣರಾದವರನ್ನು ಇತಿಹಾಸವು ಎಂದೂ ಕ್ಷಮಿಸುವುದಿಲ್ಲ. ಆದರೂ ಔದಾರ್ಯದ ಪ್ರತಿರೂಪರಾದ ಗೋರಟಾದ ಮಹಾಜನಂಗಳು ನೋವುಂಡು ಮರೆತು ಭಾವೈಕ್ಯದಿಂದ ಮುನ್ನಡೆದಿರುವರು.

ಕಲ್ಯಾಣ ಕರ್ನಾಟಕ ಸ್ವತಂತ್ರ ಚಳವಳಿಗೆ ಕಾರಣವೆನಿಸಿದ ಕೆಲವು ಘಟನೆಗಳನ್ನು ಅವಲೋಕನ ಮಾಡಬಹುದು. ದೇಶಕ್ಕೆ ಸ್ವಾತಂತ್ರ್ಯ ಬಂದ ಸಂತಸದ ಘಳಿಗೆಯನ್ನು ಜನರು ತಿರಂಗಾ ಧ್ವಜವನ್ನು ಹಾರಿಸುವುದರ ಮೂಲಕ ಸಡಗರ ಸಂಭ್ರಮ ಹರ್ಷೋಲ್ಲಾಸಗಳಿಂದ ಆಚರಿಸಿದರು. ಆದರೆ ಹೈದ್ರಾಬಾದ ನಿಜಾಂ ಸಂಸ್ಥಾನದಲ್ಲಿರುವ ದೇಶಪ್ರೇಮಗಳಿಗೆ ಈ ಸಂಭ್ರಮಾಚರಣೆಯನ್ನು ಆಚರಿಸುವ ಅವಕಾಶವನ್ನು ಇರಲಿಲ್ಲ. ಏಕೆಂದರೆ ೧೯೪೭ ಆಗಸ್ಟ ೧೪ರಂದು ದೇಶ ವಿಭಜನೆಯಾಗಿ ಪಾಕಿಸ್ತಾನವು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡ ಒಂದು ದಿನ ಮೊದಲೇ ಅಂದರೆ ೧೯೪೭ ಆಗಸ್ಟ್ ೧೩ರಂದು ನಿಜಾಮನು ಛೋಟಾ ಪಾಕಿಸ್ತಾನವೆಂಬ ಪ್ರತ್ಯೇಕ ರಾಷ್ಟ್ರದ ಕಲ್ಪನೆಯಿಂದ ಸ್ವತಂತ್ರನೆಂದು ಘೋಷಿಸಿಕೊಂಡನು. ಸಂಸ್ಥಾನದಲ್ಲಿ ಸ್ವಾತಂತ್ರ್ಯದ ಸಂಭ್ರಮಾಚರಣೆಯನ್ನು

ಆಚರಿಸುವುದನ್ನು ಮತ್ತು ತಿರಂಗಾ ಧ್ವಜವನ್ನು ಹಾರಿಸುವುದನ್ನು ನಿಷೇಧಿಸಿ ಆದೇಶ ಹೊರಡಿಸಿದನು. ಉಲ್ಲಂಘಿಸಿದರನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದೆಂದು ಕಠಿಣ ಕಾಯ್ದೆ ಜಾರಿ ಮಾಡಿದನು.

ಕ್ರಾಂತಿಯೋಗಿ ಕಲ್ಯಾಣ ಕರ್ನಾಟಕದ ಸ್ವಾತಂತ್ರ್ಯ ಶಿಲ್ಪಿ ಸ್ವಾಮಿ ರಮಾನಂದ ತೀರ್ಥರು ನಿಜಾಮನ ಈ ನಿಷೇದವನ್ನು ಲೆಕ್ಕಿಸದೆ ಜೈಲಿಗೆ ಹಾಕಿತು. ಧೃತಿಗೆಡದ ಸ್ವಾಮೀಜಿ ನಿಜಾಮನ ವಿರುದ್ಧ ಕಲ್ಯಾಣ ಕರ್ನಾಟಕ ಸ್ವಾತಂತ್ರ್ಯದ ರಣಕಹಳೆಯನ್ನು ಮೊಳಗಿಸಿ ಈ ಭಾಗದ ಜನತೆಯನ್ನು ಬಡಿದೆಬ್ಬಿಸಿದರು. ಹೈದ್ರಾಬಾದ ಸಂಸ್ಥಾ ಕಾಂಗ್ರೆಸ್ ಆರ್ಯ ಸಮಾಜ ಮತ್ತು ಪ್ರಾಂತೀಯ ವೀರಶೈವ ಪರಿಷತ್ತು ಮುಂತಾದ ಸಂಘಟನೆಗಳು ವಿಮೋಚನಾ ಚಳವಳಿಯಲ್ಲಿ ದುಮುಕಿದವು.

ದೇಶದ ಸ್ವಾತಂತ್ರ ಸಂಗ್ರಾಮದಲ್ಲಿ ಈ ಮೊದಲೇ ತೊಡಗಿಸಿಕೊಂಡ ಹೋರಾಟಗಾರರು ಈಗ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ನಿಜಾಮ ಸಂಸ್ಥಾನದ ವಿರುದ್ಧ ವೀರಾವೇಶದಿಂದ ತೊಡಗಿಸಿಕೊಂಡರು. ಸ್ವಾಮಿ ರಮಾನಂದ ತೀರ್ಥರ ನಾಯಕತ್ವದಲ್ಲಿ ವಿಮೋಚನಾ ಚಳವಳಿಯು ತೀವ್ರಗೊಂಡು ವ್ಯಾಪಕ ಸ್ವರೂಪವನ್ನು ಪಡೆದುಕೊಂಡಿತು. ವಿಮೋಚನಾ ಚಳವಳಿಯಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಅದಕ್ಕೆ ಶಕ್ತಿ ತುಂಬಿದರು. ಹಳ್ಳಿ ಹಳ್ಳಿಗಳಲ್ಲಿ ಜಾಗೃತಿ ಮೂಡಿಸತೊಡಗಿದರು. ಗೋರಟಾದ ಕೆಲ ದೇಶಪ್ರೇಮಿ ಯುವಕರು ವಿಮೋಚನಾ ಆಂದೋಲನದ ತಂಡಗಳಲ್ಲಿ ಭಾಗಿಯಾಗತೊಡಗಿದರು. ವಾಗ್ಧರಿ ಮುಂತಾದ ಕ್ಯಾಂಪ್‌ಗಳ ತರಬೇತಿ ಶಿಬಿರಗಳಲ್ಲಿ ಭಾಗವಹಿಸತೊಡಗಿದರು.

ವಿಮೋಚನಾ ಆಂದೋಲನವು ತೀವ್ರವಾದಂತೆಲ್ಲ ನಿಜಾಮ್ ಆಡಳಿತದ ನಿದ್ದೆ ಕೆಡಹತ್ತಿತ್ತು. ನಿಜಾಮ ಸರ್ಕಾರ ಈ ಆಂದೋಲನವನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಸಾಮ ಭೇದ ದಂಡಗಳ ಪ್ರಯೋಗ ನಡೆಸತೊಡಗಿತ್ತು. ಹೋರಾಟಗಾರರನ್ನು ಸದೆಬಡೆಯುವ ಎಲ್ಲಾ ಕಠಿಣ ಕ್ರಮಗಳನ್ನು ಕೈಗೊಂಡಿತು. ಖಾಸೀಂ ರಜ್ವಿ ನೇತೃತ್ವದ ರಝಾಕಾರ ಪಡೆಗಳು ಊರೂರಿಗೂ ಹುಟ್ಟಿಕೊಂಡವು. ಇವರ ಹಾವಳಿ ಹೆಚ್ಚಾಗತೊಡಗಿತ್ತು. ಹಿಂದೂಗಳ ಮೇಲೆ ರಝಾಕಾರರು ದಬ್ಬಾಳಿಕೆ, ದೌರ್ಜನ್ಯ, ಕೊಲೆ, ಸುಲಿಗೆ ಅವ್ಯಾಹತವಾಗಿ ನಡೆಸತೊಡಗಿದರು.



ಅವರ ಅಟ್ಟಹಾಸ ಮಿತಿಮೀರಿತು. ಇದರೊಂದಿಗೆ ಸ್ಥಳೀಯವಾಗಿ ಘಸ್ತಕೋಮ್ ಸಂಘಟಣೆಯ ಜನ ಸೇರಿಕೊಂಡು ಹಿಂದೂಗಳನ್ನು ಹೆದರಿಸಿ ಬೆದರಿಸಿ ಅವರ ಸಂಪತ್ತನ್ನು ಲೂಟಿ ಮಾಡತೊಡಗಿದರು. ಇಡೀ ಪ್ರದೇಶದಲ್ಲಿ ಅರಾಜಕತೆ ನಿರ್ಮಾಣವಾಯಿತು.

ಕಲ್ಯಾಣ ಕರ್ನಾಟಕದ ನೂರಾರು ಕಡೆಗಳಲ್ಲಿ ರಝಾಕಾರರ ದೌರ್ಜನ್ಯಗಳು ಎಗ್ಗಿಲ್ಲದೇ ನಡೆಯತೊಡಗಿದವು. ರಝಾಕಾರರು ಚಳವಳಿಗಾರರಲ್ಲದೆ ಅವರಿಗೆ ಬೆಂಬಲವನ್ನು ಕೊಡುತ್ತಿದ್ದ ಹಿಂದೂಗಳ ಮೇಲೆಯು ಭೀಭತ್ಸ ಕೌರ್ಯಗಳನ್ನು ನಡೆಸತೊಡಗಿದರು.

ಜಿಲ್ಲೆಯ ಬೀದರ, ಚಿಟಗುಪ್ಪ, ಹುಮನಾಬಾದ, ಬಸವಕಲ್ಯಾಣ, ರಾಜೇಶ್ವರ, ಮುಚಳಂಬ, ಕೊಹಿನೂರು, ಹೊನ್ನಳ್ಳಿ, ಹಾಲಗೋರ್ಟಾ ಮುಂತಾದ ೧೬ ಕಡೆಗಳಲ್ಲಿ ರಝಾಕಾರರು ಹತ್ಯಾಕಾಂಡಗಳನ್ನು ನಡೆಸಿದ್ದಾರೆ. ಇವುಗಳಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಗೋರಟಾ ಗ್ರಾಮದ ಮೇಲೆ ಭೀಕರ ಹತ್ಯಾಕಾಡ ನಡೆದಿವೆ. ಇದು ಗೋರಟಾ ರಝಾಕಾರ ಹತ್ಯಾಕಾಂಡ'ವೆಂದೇ ಖ್ಯಾತಿ ಪಡೆದುಕೊಂಡಿದೆ.

## ಹತ್ಯಾಕಾಂಡಕ್ಕೆ ಕಾರಣಗಳು:

ರಝಾಕಾರರ ಗೋರಟಾ ಹತ್ಯಾಕಾಂಡಕ್ಕೆ ಅನೇಕ ಕಾರಣಗಳು ಕಂಡುಬರುತ್ತವೆ. ಗೋರಟಾ ಮೊದಲಿನಿಂದಲೂ ಪ್ರಬಲ ಹಿಂದೂ ಸಂಸ್ಕೃತಿಯ ಕೇಂದ್ರವಾಗಿತ್ತು. ಸಹಸ್ರಾರು ವರ್ಷಗಳಿಂದ ದೇಶಿ ಕಲೆ ಸಾಹಿತ್ಯ ಸಂಗೀತ ಸಂಸ್ಕೃತಿಗಳಿಗೆ ಹೆಸರಾಗಿತ್ತು. ಕನ್ನಡ ಭಾಷೆ ಸಂಸ್ಕೃತಿಯ ಕಣಜವಾಗಿತ್ತು. ಸಂಗೀತ ಶ್ರೀರುದ್ರ, ನಾಟಕ, ಭಜನೆ, ಸಂಗೀತ ಕೀರ್ತನ ಪ್ರವಚನ ಮುಂತಾದವುಗಳಿಗೆ ಹೆಸರುವಾಸಿಯಾಗಿತ್ತು. ಸುತ್ತಮುತ್ತಲಿನ ಬಾರಾ ಹಳ್ಳಿಗಳಲ್ಲಿ ಧಾರ್ಮಿಕ ಪೂಜಾ ಸಂಸ್ಕೃತಿಗಳಿಗೆ ಪ್ರಸಿದ್ಧವಾಗಿತ್ತು. ಗ್ರಾಮದಲ್ಲಿ ಪ್ರತಿವರ್ಷ ತಪ್ಪದೇ ಎರಡೆರಡು ಕನ್ನಡದ ಸಂಗೀತ, ನಾಟಕಗಳನ್ನು ಆಡಲ್ಪಡುತ್ತಿದ್ದವು. ಶೇ. ೮೦% ಕನ್ನಡ ಭಾಷೆ ಬಳಕೆಯಿತ್ತು. ಕನ್ನಡ ಕಲಿಸುವ, ಓದುವ, ಬರೆಯುವ ವಾತಾವರಣವಿತ್ತು ಶಿವಲಿಂಗಯ್ಯ ಮಠಪತಿ, ಗುರಪ್ಪ ಹೂಗಾರ, ಮೋನಪ್ಪ ಬಡಿಗೇರ, ಹುತಾತ್ಮ ರಾಚೋಟಿ ಸ್ವಾಮಿ, ಪಂ.ವಿರೂಪಾಕ್ಷಯ್ಯ ಸ್ವಾಮಿ ಕೆಳಗಲ್ಲಿ ವಿರೂಪಾಕ್ಷಯ್ಯ

ಮಠಪತಿ ಮೇಲಗಲ್ಲಿ ಮುಂತಾದ ದಿಗ್ಗಜ ಕಲಾವಿದರು ಸಾಂಸ್ಕೃತಿಕ ರಾಯಭಾರಿಗಳಿದ್ದರು. ಹುತಾತ್ಮ ರಾಚೋಟಿ ಸ್ವಾಮಿಯವರು ಆ ಕಾಲದ ಪ್ರಸಿದ್ಧ ಸಂಗೀತಗಾರರಾಗಿದ್ದರಲ್ಲದೇ ಸಂಗೀತ, ನಾಟಕಗಳನ್ನು ಕಲಿಸುವುದರಲ್ಲಿ ಹೆಸರುವಾಸಿಯಾಗಿದ್ದರು. ಸ್ವತಃ ಪಂಚಾಂಗವನ್ನು ಬರೆಯುವ ನೈಪುಣ್ಯತೆಯನ್ನು ಹೊಂದಿದ್ದರು. ಕನ್ನಡದಲ್ಲಿ ನಾಟಕಗಳನ್ನು ರಚಿಸಿ ರಂಗಪ್ರಯೋಗಗಳಿಗೆ ಒಳಪಡೆಸಿದ್ದವರು.

ಭಾರತದ ಸ್ವಾತಂತ್ರ ಆಂದೋಲನದ ಗಾಳಿ ಊರಲ್ಲಿಯೂ ಬೀಸತೊಡಗಿತ್ತು. ಗ್ರಾಮದ ಯುವ ದೇಶಪ್ರೇಮಿಗಳು ಸದ್ದಿಲ್ಲದೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದರು. ವಿಶ್ವನಾಥಯ್ಯ ಮಠಪತಿ, ನಾಗಪ್ಪ ಹಳೆಂಬರೆ, ಕಾಶಪ್ಪ, ಭಾಲ್ಕೆ, ನರಸಪ್ಪ ಥೆಮಗಳೆ, ಸಿದ್ರಾಮಪ್ಪ ಪಟ್ನೆ, ವಿಠೋಬಾ ನರೋಡೆ, ಮಹಾರುದ್ರಪ್ಪ ಪಟ್ನೆ, ಮಾರುತಿ ಪರೀಟ ಮುಂತಾದ ಹತ್ತಾರು ಯುವ ದೇಶಭಕ್ತರು ಸ್ವಾತಂತ್ರ್ಯ ಆಂದೋಲನದ ಪ್ರಮುಖ ಮುಖಂಡರ ಸಂಪರ್ಕದಲ್ಲಿದ್ದರಲ್ಲದೇ ನಿಜಾಂ ಸರಹದ್ದಿನಲ್ಲಿದ್ದ ವಾಗ್ದರಿ ಮುಂತಾದ ದೇಸಿ ಸೈನಿಕ ತರಬೇತಿ ಶಿಬಿರಗಳಲ್ಲಿ ಭಾಗಿಯಾಗಿದ್ದರು. ರಝಾಕಾರರ ವಿರುದ್ಧ ಹೋರಾಡಲು ಶಸ್ತ್ರಾಸ್ತ್ರಗಳ ತರಬೇತಿಯನ್ನೂ ಪಡೆದುಕೊಂಡಿದ್ದರು.

ಮುಸ್ಲಿಂ ಬಾಂಧವರು ಅಧಿಕ ಸಂಖ್ಯೆಯಲ್ಲಿದ್ದ ಘೋರವಾಡಿಯು ಗೋರಟಾದ ಸಮೀಪದಲ್ಲಿತ್ತು. ಅದು ದೇಶದ್ರೋಹಿ ಉಗ್ರವಾದಿ ರಝಾಕಾರರ ಕಾರ್ಯಚಟುವಟಿಕೆಗಳ ತಾಣವಾಗಿತ್ತು. ಗೋರಟಾದ ಮೇಲೆ ಯಾವಾಗಲೂ ಇವರ ಹದ್ದಿನ ಕಣ್ಣಿತ್ತು. ಸನಾತನ ಹಿಂದೂ ಸಂಸ್ಕೃತಿಯ ಬೌದ್ಧಿಕ ಕಣಜವಾಗಿದ್ದ ಗೋರಟಾವನ್ನು ಉಧ್ವಸ್ಥಗೊಳಿಸಿದರೆ ವಿಮೋಚನಾ ಚಳವಳಿಯ ಅರ್ಧ ತಾಖತ್ ಕುಂದುತ್ತದೆ ಎನ್ನುವುದು ಅವರ ಆಲೋಚನೆಯಾಗಿತ್ತು. ಸಂಸ್ಕೃತಿ ನಾಶವಾದರೆ ನಾಡು–ದೇಶಗಳು ನಾಶವಾದಂತೆಯಲ್ಲವೆ?

**ಪ್ರಮುಖ ಕಾರಣಗಳು:**

ಮೇಲ್ನೋಟಕ್ಕೆ ಮೇಲೆ ವಿವರಿಸಲ್ಪಟ್ಟ ಕಾರಣಗಳಿಂದಲೇ ಗೋರಟಾ ಹತ್ಯಾಕಾಂಡ ನಡೆಯಿತ್ತೆಂದು ಹೇಳುವುದು ಅರ್ಧಸತ್ಯವಾಗುತ್ತದೆ. ಇದಕ್ಕೆ



ಇತರ ಮೂರ್‍ನಾಲ್ಕು ಬಲವಾದ ಕಾರಣಗಳಿದ್ದವು. ಅವು ಯಾವವು ಎಂಬುದನ್ನು ನೋಡೋಣ.

**ಮಸೀದಿ ಪ್ರಕರಣ:**

ಗೋರಟಾ ಸನಾತನ ಹಿಂದೂ ಸಂಸ್ಕೃತಿಕ ಉಜ್ವಲ ಪರಂಪರೆ ಹೊಂದಿದ್ದ ಹಿಂದೂ–ಮುಸ್ಲಿಂ ಭಾವೈಕ್ಯದ ಕೇಂದ್ರವಾಗಿತ್ತು. ಶೇ. ೭೦% ವೀರಶೈವ ಹಿಂದೂ ಸಮಾಜದವರಿದ್ದರೆ ಶೇ. ೩೦%ರಷ್ಟು ಮುಸ್ಲಿಂ ಬಾಂಧವರಿದ್ದರು. ಇವರು ಪರಸ್ಪರ ಭಾವೈಕ್ಯತೆಯಿಂದ ಕೂಡಿದ್ದು ಸಹೋದರರಂತೆ ಪ್ರೀತಿ–ವಿಶ್ವಾಸಗಳಿಂದ ಅನ್ಯೋನ್ಯವಾಗಿ ಬಾಳುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ಎಲ್ಲರೂ ಒಟ್ಟಾಗಿ ಪಾಲ್ಗೊಳ್ಳುತ್ತಿದ್ದರು. ಹಿಂದೂಗಳ ಶ್ರಾವಣ, ದಸರಾ ಮುಂತಾದ ಹಬ್ಬಗಳಲ್ಲಿ ಮುಸ್ಲಿಂ ಬಾಂಧವರು ಪಾಲ್ಗೊಂಡರೆ, ಮೊಹರಂ ಮುಂತಾದ ಮುಸ್ಲಿಂಹಬ್ಬಗಳಲ್ಲಿ ಹಿಂದೂಗಳು ಭಾಗಿಯಾಗುತ್ತಿದ್ದರು.

ನಮ್ಮ ತಂದೆ ಪೂಜ್ಯ ಪಂ.ವಿರೂಪಾಕ್ಷಯ್ಯನವರು ತಮ್ಮ ಗೆಳೆಯರೊಂದಿಗೆ ಪ್ರತಿವರ್ಷ ನಡೆಸುತ್ತಿದ್ದ ಶ್ರೀ ಜಗದ್ಗುರು ಪಂಚಾಚಾರ್ಯ ಜಯಂತಿ ಉತ್ಸವದಲ್ಲಿ ಮುಸ್ಲಿಂ ಬಾಂಧವರು ಭಾಗವಹಿಸುತ್ತಿದ್ದರಲ್ಲದೇ ಒಂದು ವರ್ಷ ಮುಸ್ಲಿಂ ಲೀಡರ್ ಮಹಮ್ಮದ್ ಇಸಾಮೋದ್ದಿನ್‌ನು ಪಂಚಾಚಾರ್ಯರ ಭಾವಚಿತ್ರವನ್ನು ತಲೆಯ ಮೇಲೆ ಹೊತ್ತುಕೊಂಡು ಮೆರವಣಿಗೆಯಲ್ಲಿ ಭಾಗವಹಿಸಿದ್ದನು.

ಆದರೆ ೧೯೨೯ರಲ್ಲಿ ನಡೆದ ಒಂದು ಘಟನೆಯು ಹಿಂದೂ ಮುಸ್ಲಿಮರ ಮಧ್ಯೆ ದ್ವೇಷ ಭಾವನೆಯನ್ನು ಹುಟ್ಟಲು ಪ್ರಮುಖ ಕಾರಣವಾಯಿತು. ಅದನ್ನು 'ಮಸೀದಿ ಪ್ರಕರಣ'ವೆಂದು ಕರೆಯಲಾಗಿದೆ. ಹುಮನಾಬಾದಿಯ ಕಾಳಗಿ ಮಸ್ತಾನ್ ಎಂಬುವವನು ವ್ಯಾಪಾರಕ್ಕಾಗಿ ಗೋರಟಾಕ್ಕೆ ಆಗಾಗ ಬರುತ್ತಿದ್ದನು. ಗೋರಟಾದಲ್ಲಿಯೇ ವ್ಯಾಪಾರ ಮಾಡುತ್ತ ಠಿಕಾಣಿ ಹೂಡಿದ್ದನು. ಅವನಿಗೆ ಗೋರಟಾದಲ್ಲಿದ್ದ ಇಸ್ಮಾಲ್‌ಸಾಬ್ ಎಂಬ ಮುಲ್ಲಾನ ಸಖ್ಯ ಬೆಳೆಯಿತು. ಕಾಳಗಿ ಮಸ್ತಾನ್ ಹಿಂದೂ ವಿರೋಧಿಯಾಗಿದ್ದ. ಯಾವಾಗಲೂ ಮುಸ್ಲಿಂರ ವಿರುದ್ಧ ಎತ್ತಿ ಕಟ್ಟುತ್ತಿದ್ದನು.

ಹಿಂದೂಗಳೊಂದಿಗೆ ಅನ್ಯೋನ್ಯವಾಗಿರುತ್ತಿದ್ದ ಇಸ್ಮಾಲ್‌ಸಾಬನು ಕಾಳ್ಗಿ ಮಸ್ತಾನನ ಸಂಪರ್ಕದಿಂದ ಹಿಂದೂ ವಿರೋಧಿಯಾಗತೊಡಗಿದನು. ಒಂದು ದಿನ ಮಸ್ತಾನನ ಪ್ರಭಾವಕ್ಕೊಳಗಾಗಿ ಗೋರಟಾದಲ್ಲಿದ್ದ ಮಸೀದಿಯ ನಂಬರ್ ಕಲನ್ನು ಕಿತ್ತಿ ಹಾಕಿದನು. ಇದನ್ನು ಹಿಂದೂಗಳೇ ಮಾಡಿದ್ದಾರೆಂದು ಅಪವಾದ ಹೊರೆಸಿದನು. ಈ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ರಝಾಕಾರ ಸಂಪರ್ಕದಲ್ಲಿದ್ದ ಮುಸ್ಲಿಂರೆಲ್ಲರೂ ಒಂದಾಗಿ ಗಲಾಟೆ ಮಾಡತೊಡಗಿದರು. ಹಿಂದೂ–ಮುಸ್ಲಿಂರಲ್ಲಿ ಭೇದಭಾವ ನಿರ್ಮಾಣವಾಗಿ ದೊಡ್ಡ ಕಂದಕ ನಿರ್ಮಾಣವಾಯಿತು. ಊರಲ್ಲಿ ಕೋಮು ದಳ್ಳುರಿ ಹೊತ್ತಿಕೊಂಡಿತು.

ಮುಸ್ಲಿಂ ತೀವ್ರವಾದಿಗಳು ನಿಜಾಮ ಸರ್ಕಾರದಲ್ಲಿ ಹಿಂದೂಗಳ ವಿರುದ್ಧ ಕೇಸ್ ಮಾಡಿದರು. ಸರ್ಕಾರದ ಕುದುರೆ ಪಾಗಾದ ಪೋಲಿಸರು ಗೋರಟಾಕ್ಕೆ ಬಂದರು. ಒಂದು ತಿಂಗಳು ತನಿಖೆಯನ್ನು ನಡೆಸಿದರು. ಗ್ರಾಮದ ಹಿಂದೂ ಜನರು ನಾವು ಯಾರೂ ಆ ಕೆಲಸ ಮಾಡಿಲ್ಲ. ನಂಬರ ಕಲ್ಲು ಕಿತ್ತಿಲ್ಲ. ನಮ್ಮ ಮೇಲೆ ವಿನಾಕಾರಣ ಅಪವಾದವನ್ನು ಹೊರಿಸಲಾಗುತ್ತಿದೆ ಎಂದು ಅವರ ಮುಂದೆ ಪರಿಪರಿಯಾಗಿ ಅಂಗಲಾಚಿ ಹೇಳಿಕೊಂಡರೂ ಕೂಡ ನಿಜಾಮ ಪೋಲಿಸರು ಕೇಳಲಿಲ್ಲ. ನೂರಾರು ಜನಹಿಂದೂಗಳನ್ನು ಬಂಧಿಸಿದರು. ಗ್ರಾಮದ ಮಹಾದೇವ ಮಂದಿರದಲ್ಲಿ ಕೂಡಿ ಹಾಕಿದರು. ಇಡೀ ಗ್ರಾಮದ ಹಿಂದೂಗಳ ಮೇಲೆ ದೊಡ್ಡ ಬಂಡೆಗಲ್ಲು ಬಿದ್ದಂತಾಯಿತು. ಪ್ರತಿಯೊಂದು ಪರಿವಾರ ಕಣ್ಣೀರಿನಲ್ಲಿ ಕೈ ತೊಳೆಯುವಂತಾಯಿತು.

ವೀರಶೆಟ್ಟೆಪ್ಪಾ ವಂಕೆ ಪೋಲಿಸ್ ಗೌಡರಾಗಿದ್ದರು. ನಿಜಾಂ ಸರ್ಕಾರದಲ್ಲಿ ಇವರಿಗೆ ವಿಶೇಷ ಗೌರವವಿತ್ತು. ನೀವು ಇದರಿಂದ ದೂರವಾಗಿರಿ. ಎಲ್ಲಿಯಾದರೂ ಹೋಗಿರಿ ಎಂದು ನಿಜಾಮ ಪೋಲೀಸ ಅಧಿಕಾರಿಯೊಬ್ಬರು ಇವರಲ್ಲಿಗೆ ಬಂದು ಹೇಳಿದರೂ ವೀರಶೆಟ್ಟೆಪ್ಪ ವಂಕೆ ಅವರ ಮಾತನ್ನು ತಿರಸ್ಕರಿಸಿ ನಾವು ಹಿಂದೂಗಳು ತಪ್ಪಿತಸ್ಥರಲ್ಲ. ನಿಮ್ಮ ಮುಲ್ಲಾನೇ ನಂಬರ್ ಕಲ್ಲು ಕಿತ್ತು ಹಾಕಿ ನಮ್ಮ ಮೇಲೆ ಸುಮ್ನೆ ಆರೋಪ ಹೊರಿಸಿದ್ದಾನೆ. ನಾನು ಪ್ರಾಮಾಣಿಕ, ಸತ್ಯವಾದಿ. ಬಡವರ ಹಿತಚಿಂತಕ. ಅವರ ಪರವಾಗಿ ಸಾಯಲು ಸಿದ್ಧ. ಬೇಕಾದರೆ ನನ್ನನ್ನೂ ಬಂಧಿಸಬಹುದೆಂದು ಹೇಳಿದರು. ಆ ಬಡ ಹಿಂದೂಗಳಿಗ್ಯಾಕೆ ಬಂಧಿಸಿದ್ದೀರಿ. ಮೊದಲು ನನ್ನನ್ನು ಬಂಧಿಸಿರೆಂದು ಹೇಳಿ ಕೈಗೆ ಕೊಳ ಹಾಕಿಸಿಕೊಂಡು ಜೈಲು ಸೇರಿದ ಮಹಾನ್ ಪುರುಷ.



ಈ ವ್ಯಾಜ್ಯ ಬಹಳ ದಿವಸ ನಡೆಯಿತು. ವಾರಂಗಲ್, ಕಲ್ಬುರ್ಗಿ ಮುಂತಾದ ಜೈಲಿನಲ್ಲಿ ಗೋರಟಾದ ನೂರಾರು ಅಮಾಯಕ ಹಿಂದೂಗಳನ್ನು ಕೂಡಿ ಹಾಕಿ ಚಿತ್ರಹಿಂಸೆ ನೀಡಿದರು. ಕೆಲವರನ್ನು ಒಂದು ವರ್ಷದ ನಂತರ ಇನ್ನೂ ಕೆಲವರನ್ನು ನಾಲ್ಕೈದು ವರ್ಷಗಳ ನಂತರ ಬಿಡುಗಡೆ ಮಾಡಿದರು. ಈ ಘಟನೆ ಹಿಂದೂಗಳಲ್ಲಿ ಭಯ ಹುಟ್ಟಿಸಿತು. ಹಿಂದೂ–ಮುಸ್ಲಿಮರ ಮಧ್ಯದಲ್ಲಿ ಶಾಶ್ವತಭೇದ ಹುಟ್ಟಿಸಿತು. ದೊಡ್ಡ ಕಂದಕ ನಿರ್ಮಾಣವಾಯಿತು.

**ವಂದೇ ಮಾತರಂ ಘಟನೆ:**

ದೇಶದ ಸ್ವಾತಂತ್ರ್ಯ ಆಂದೋಲನದಲ್ಲಿದ್ದಂತೆ ಕಲ್ಯಾಣ ಕರ್ನಾಟಕ ವಿಮೋಚನಾ ಚಳವಳಿಯಲ್ಲಿಯೂ ಬಂಕಿಂಚಂದ್ರ ಚಟರ್ಜಿ ಅವರ 'ವಂದೇ ಮಾತರಂ' ಗೀತೆ ಹೋರಾಟಗಾರರಿಗೆ ಸ್ಫೂರ್ತಿಯ ನೆಲೆಯಾಗಿತ್ತು. ನಿಜಾಮ ಸರ್ಕಾರ ಹೇರಿದ ನಿಷೇಧವನ್ನು ಲೆಕ್ಕಿಸದೇ ತರುಣ ಹೋರಾಟಗಾರರು ಅಲ್ಲಲ್ಲಿ ವಂದೇಮಾತರಂ ಗೀತೆ ಹಾಡುವ ಪವಿತ್ರ ಕಾರ್ಯವನ್ನು ಮಾಡುತ್ತಿದ್ದರು.

ಆ ಕಾಲದ ಬಹುಶ್ರುತ ವಿದ್ವಾಂಸರಾಗಿದ್ದ ಗೋರಟಾದ ಪಂ. ರಾಚೋಟಿ ಶರಣಯ್ಯ ಸ್ವಾಮಿ ಅವರು ದೊಡ್ಡ ಸಂಗೀತಗಾರರಾಗಿದ್ದರು. ನಾಟಕಗಳನ್ನು ಆಡಿಸುತ್ತಿದ್ದರಲ್ಲದೇ ಸ್ವತಃ ನಟಿಸಿ ಹಾಡುತ್ತಿದ್ದರು. ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಇವರ ಹೆಸರು ಜನಪ್ರಿಯವಾಗಿತ್ತು. ಇವರು ಸಿದ್ದವ್ವ ಶರಣಯ್ಯ ದಂಪತಿಯ ಏಕ ಮಾತ್ರ ಸುಪುತ್ರರಾಗಿದ್ದರು. ರಾಚೋಟಿ ಸ್ವಾಮಿ ವಿಮೋಚನಾ ಚಳವಳಿಯ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ವಂದೇ ಮಾತರಂ ಗೀತೆ ಹಾಡುತ್ತಿದ್ದರು. ನೋಡಲು ಸ್ಫುರದ್ರೂಪಿಯಾಗಿದ್ದ ಇವರು ಕಂಚಿನ ಕಂಠ ಹೊಂದಿದ್ದರು. ನಾಟಕ, ಭಜನೆಗಳಲ್ಲಿ ತಪ್ಪದೇ ವಂದೇ ಮಾತರಂ ಗೀತೆ ಹಾಡುತ್ತಿದ್ದರು.

ಸ್ವಾಮಿಯವರು ಬೇರೆ ಬೇರೆ ಊರುಗಳಿಗೆ ಭಜನ–ನಾಟಕ, ಸಂಗೀತ

ಕಲಿಸಲು ಹೋಗುತ್ತಿದ್ದರು. ರಾಚಯ್ಯನವರ ದೇಶಾಭಿಮಾನ ಊರಲ್ಲಿಯ ರಜಾಕಾರ ಲೀಡರ್‌ನಾಗಿದ್ದ ಇಸಾಮೊದ್ದೀನನಿಗೆ ಎಳ್ಳಷ್ಟು ಹಿಡಿಸುತ್ತಿರಲಿಲ್ಲ. ಆತ ಆಗಾಗ ಇವರನ್ನು ವಿರೋಧಿಸಿ ಗಲಾಟೆ ಮಾಡುತ್ತಿದ್ದನು. ಇಸಾಮೋದ್ದೀನನ ವಿರೋಧವನ್ನು ಲೆಕ್ಕಿಸದೇ ರಾಚೋಟಿ ಸ್ವಾಮಿ ನಾಟಕ, ಭಜನ, ಸಂಗೀತ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆ ಹಾಡುವುದು, ಬರೆದು ಅಂಟಿಸುವುದು ಮಾಡುತ್ತಿದ್ದರು. ಇವರಿಗೆ ರಝಾಕಾರರ ಕಿರುಕುಳ ಇದ್ದೇ ಇತ್ತು. ಮನೆಗೆ ಬಂದು ಬೆದರಿಕೆ ಹಾಕಿಹೋಗುತ್ತಿದ್ದರು.

ಇದೇ ಸಂದರ್ಭದಲ್ಲಿ ರಾಚೋಟಿ ಸ್ವಾಮಿ ನಿರ್ದೇಶನದಲ್ಲಿ ಗೋರಟಾದಲ್ಲಿ ಶ್ರೀ ರೇಣುಕ ವಿಜಯ ನಾಟಕ ನಡೆಯುತ್ತಿತ್ತು. ಅದರಲ್ಲಿ ಸ್ವಾಮಿ ಅವರ ಪ್ರಧಾನ ಪಾತ್ರವೂ ಇತ್ತು. ವಾಡಿಕೆಯಂತೆ ರಾಚೋಟಿ ಸ್ವಾಮಿ ರಂಗ ಮಂಚದ ಗೋಡೆಯೊಂದರಲ್ಲಿ 'ವಂದೇ ಮಾತರಂ' ಎಂದು ಬರೆದ ಭಿತ್ತಿಪತ್ರವನ್ನು ಅಂಟಿಸಿದ್ದರು. ನಾಟಕ ನೋಡಲು ಜನಸಂದಣಿ ಸೇರಿತ್ತು. ನಾಟಕಕ್ಕಾಗಿ ಕಾತರದಿಂದ ಕಾಯುತ್ತಿದ್ದರು. ಇನ್ನೇನು ನಾಟಕ ಶುರುವಾಗಬೇಕಿತ್ತು. ಅಷ್ಟರಲ್ಲಿ ತನ್ನ ಬೆಂಬಲಿಗರೊಂದಿಗೆ ನಾಟಕ ನೋಡಲು ಮುಂದೆ ಕುಳಿತಿದ್ದ ಇಸಾಮೋದ್ದಿನ್ ಒಮ್ಮೆಲೆ ಎದ್ದು ನಿಂತು ನಾಟಕದಲ್ಲಿ ವಂದೇ ಮಾತರಂ ಗೀತೆ ಹಾಡಕೂಡದು ಮತ್ತು ಅಟ್ಟದಲ್ಲಿ ಅಂಟಿಸಿದ ವಂದೇ ಮಾತರಂ ಪತ್ರವನ್ನು ತೆಗೆದುಹಾಕಬೇಕು. ಇಲ್ಲದಿದ್ದರೆ ನಾಟಕವಾಡಲು ನಾವು ಬಿಡುವುದಿಲ್ಲವೆಂದು ಅಬ್ಬರಿಸತೊಡಗಿದನು. ಇದರಿಂದ ಗದ್ದಲ ಪ್ರಾರಂಭವಾಯಿತು. ಪರ–ವಿರೋಧ ಮಾತುಗಳು ನಡೆದವು. ಇಸಾಮೋದ್ದಿನ್ ಬೆಂಬಲಿಗರು ಅಟ್ಟದೊಳಗೆ ನುಗ್ಗಲು ಪ್ರಯತ್ನಿಸಿದರು. ಅವರ ದಬಾವ್ ಹೆಚ್ಚಾಗತೊಡಗಿತು. ಸಂಘಟಕರು ದಿಗಿಲುಗೊಂಡರು. ಅಂಟಿಸಿದ ಭಿತ್ತಿಪತ್ರ ತೆಗೆಯುವಂತೆ ವಿನಂತಿಸಿಕೊಂಡರು. ರಾಚೋಟಿ ಸ್ವಾಮಿ ಪ್ರಾಣ ಹೋದರೂ ವಂದೇ ಮಾತರಂ ಹಾಡಬಿಡೆನು ಮತ್ತು ಭಿತ್ತಿಪತ್ರ ತೆಗೆಯನೆಂದು ಹಟ ಹಿಡಿದರು. ಅರ್ಧ ಘಂಟೆ ಹೀಗೆ ನಡೆಯಿತು. ಇದು ವಿಕೋಪಕ್ಕೆ ಹೋದಿತೆಂದು ಭಯಗೊಂಡ ಸಂಘಟಕರು ಮತ್ತೂ ಸ್ವಾಮಿ ಅವರ ಮನವೊಲಿಸಿ ಅಂಟಿಸಿದ ವಂದೇ ಮಾತರಂ ಭಿತ್ತಿಪತ್ರ ತೆಗೆದರು. ವಂದೇ ಮಾತರಂ ಹಾಡದಂತೆ ಮನವೊಲಿಸಿದರು.



ಈ ಘಟನೆಯಿಂದ ಕೆಂಡಾಮಂಡಲರಾದ ರಾಚೋಟಿ ಸ್ವಾಮಿ ನಾಟಕವೇ ಬೇಡವೆಂದು ಹೊರನಡೆದರಂತೆ! ಹಿರಿಯರು, ಸಂಘಟಕರು ಅವರನ್ನು ಕರೆ ತಂದು ಸಮಾಧಾನಪಡಿಸಿ ವಂದೇ ಮಾತರಂ ಗೀತೆ ಹಾಡದೇ ನಾಟಕ ಪ್ರಾರಂಭಿಸಿದರು. ಈ ಅಪಮಾನದಿಂದ ಒಳಗೊಳಗೆ ಕುದಿಯುತ್ತಿದ್ದ ರಾಚೋಟಿ ಸ್ವಾಮಿಗೆ ಸಮಾಧಾನವಿರಲಿಲ್ಲ. ಒಂದೆರಡು ದೃಶ್ಯಗಳಾದ ಮೇಲೆ ರಾಚೋಟಿ ಸ್ವಾಮಿ ಅವರ ಪಾತ್ರ ಬಂತು. ರಂಗದ ಮೇಲೆ ಬರುತ್ತಲೇ ರಾಚೋಟಿ ಸ್ವಾಮಿ ವೀರಾವೇಶದಿಂದ 'ವಂದೇ ಮಾತರಂ, ವಂದೇ ಮಾತರಂ, ವಂದೇ ಮಾತರಂ' ಎಂದು ಮೂರು ಸಾರಿ ಜೋರಾಗಿ ಹೇಳಿ ಪಾತ್ರಾಭಿನಯ ಮಾಡತೊಡಗಿದರು. ಎದುರಿಗೆ ಕುಳಿತಿದ್ದ ಇಸಾಮೋದ್ದಿನ್ ವಂದೇ ಮಾತರಂ ಕೇಳಿದೊಡನೆ ಕ್ಷುದ್ರನಾಗಿ ಎದ್ದು ನಿಂತು ಜೋರಾಗಿ ವಿರೋಧಿಸತೊಡಗಿದ. ಮತ್ತೆ ಗಲಾಟೆ ಪ್ರಾರಂಭವಾಯಿತು. ಪ್ರೇಕ್ಷಕರು ರಾಚೋಟಿ ಸ್ವಾಮಿಗೆ ಬೆಂಬಲ ವಿತ್ತಿದ್ದರಿಂದ ಇಸಾಮೋದ್ದಿನ್ ಸುಮ್ಮನಿರಬೇಕಾಯಿತು.

ಆತ ಸುಮ್ಮನಿದ್ದರೂ ಅವನ ಬೆಂಬಲಿಗರೂ ಮತ್ತು ಅವನ ಮಕ್ಕಳು ಗಲಾಟೆಯನ್ನು ಹಾಗೇ ಮುಂದುವರೆಸಿದ್ದರು. ನಾಟಕ ನಡದೇ ಇತ್ತು. ಅವರು ನಾಟಕ ಮಧ್ಯ ಮಧ್ಯ ಗಲಾಟೆ ಮಾಡುವುದು, ಹೆಣ್ಣುಮಕ್ಕಳಿಗೆ ಚುಡಾಯಿಸುವುದು ಮಾಡುತ್ತಿದ್ದರು. ಪ್ರೇಕ್ಷಕರು ಸಹ ರೋಸಿ ಹೋಗಿದ್ದರು. ಅಷ್ಟರಲ್ಲಿ ನಾಟಕದಲ್ಲಿ ಶ್ರೀ ರೇಣುಕರ ಬಿಜ್ಜಳನ ಗರ್ವಭಂಗ ಪ್ರಸಂಗ ನಡೆದಿತ್ತು. ಇಸಾಮೋದ್ದಿನನ ಬೆಂಬಲಿಗರ ಗಲಾಟೆಯಿಂದ ನಾಟಕಕ್ಕೆ ತೊಂದರೆಯಾಗತೊಡಗಿತ್ತು. ಪ್ರೇಕ್ಷಕರು ಗಲಿಬಿಲಿಯಾಗಿದ್ದರು. ಇದರಿಂದ ಕೋಪೋದ್ರೇಕರಾಗಿದ್ದ ಬಿಜ್ಜಳನ ಪಾತ್ರಧಾರಿ ವಿಶ್ವನಾಥಯ್ಯ ಚನ್ನಮಲ್ಲಯ್ಯ ಮಠಪತಿ ಅವರು ಈ ಉಪಟಳ ಸಹಿಸದೇ ತನ್ನ ಸೊಂಟದಲ್ಲಿದ್ದ ತಲವಾರ್‌ನ್ನು ಹೊರತೆಗೆದು ರಂಗ ಮಂಚದಿಂದ ವೀರಾವೇಶದಿಂದ ವಂದೇ ಮಾತರಂ ಎಂದು ಒಮ್ಮೆಲೆ ಜಿಗಿದು ಇಸಾಮೋದ್ದಿನ್‌ನ ಬೆಂಬಲಿಗರ ಮೇಲೆ ಮುಗಿಬಿದ್ದರು. ದೊಡ್ಡ ಗಲಾಟೆ ನಡೆಯಿತು. ಈ ಗಲಾಟೆಯಲ್ಲಿ ನಾಟಕ ನಿಂತುಹೋಯಿತು.

ಖಾಸಿಂ ರಜ್ವಿಯ ಬಲಗೈ ಬಂಟನಾಗಿದ್ದ ಇಸಾಮೋದ್ದಿನ್

ರಝಾಕರಾರರ ಮುಖಂಡನಾಗಿದ್ದನು. ಗೋರಟಾ ಅದರ ಸುತ್ತಮುತ್ತಿನ ಹಳ್ಳಿಗಳಲ್ಲಿ ನಡೆಯುವ ಸ್ವಾತಂತ್ರ ಚಳವಳಿಯನ್ನು ಹತ್ತಿಕ್ಕತೊಡಗಿದ್ದನು. ಸ್ವಾತಂತ್ರ್ಯ ಚಳವಳಿ ನಡೆದರೆ ಈತ ತಕ್ಷಣದಲ್ಲಿ ರಜಾಕಾರರಿಗೆ, ನಿಜಾಂ ಪೊಲೀಸರಿಗೆ ಸುದ್ದಿ ಮುಟ್ಟಿಸುತ್ತಿದ್ದನು. ನಿಜಾಮ ಪೊಲೀಸರು ಬಂದು ಅವರನ್ನು ಹಿಡಿದು ಬಡಿದು ಹಿಂಸಿಸುತ್ತಿದ್ದರು. ಎಲ್ಲೆಡೆ ಭಯಭೀತಿ ವಾತಾವರಣ ನಿರ್ಮಾಣವಾಯಿತು. ತನಗೆ ಆಗದ ಹಿಂದೂಗಳ ಮೇಲೆ ವಿನಾಕಾರಣ ಆರೋಪ ಹೊರಸಿ ಶಿಕ್ಷೆ ಕೊಡಿಸುವುದು ಊರಲ್ಲಿ ಸರ್ವೇಸಾಮಾನ್ಯವಾಗಿತ್ತು. ಹೀಗಾಗಿ ಜನಸಾಮಾನ್ಯರ ಬದುಕು ದುಸ್ತರವಾಯಿತು. ಜೀವ ಕೈಯಲ್ಲಿ ಹಿಡಿದು ಬದುಕುವಂತಾಯಿತು.

ಇಸಾಮೊದ್ದಿನ್‌ನ ಈ ವರ್ತನೆಯಿಂದ ನೊಂದ ಊರಿನ ಕೆಲ ಹಿರಿಯರು ಅವನನ್ನು ಕುರಿತು 'ಯಾಕಪ್ಪ ಇಸಾಮೊದ್ದೀನ್ ನೀನು ಇದೆಲ್ಲಾ ಯಾಕೆ ಮಾಡ್ತಿಯಾ? ನಾವು ನೀವೆಲ್ಲ ಅಣ್ಣ ತಮ್ಮಂದಿರ ಹಾಗೆ ಬಾಳಿದವರು. ಹೀಗೆ ಮಾಡುವುದು ಸರಿಯಲ್ಲ. ನಾವೆಲ್ಲ ಒಂದೇಯಾಗಿರೋಣ' ಎಂದು ಕೇಳಿದರೆ ಆತ ನಹೀ ಪಟೇಲಸಾಬ್ 'ಹಮ್ ರಹತೇ ನಹೀ ತುಮಕೋ ರಖತೇ ನಹೀ' ಎಂದು ಹೇಳುತ್ತಿದ್ದನಂತೆ. ಇಸಾಮೊದ್ದಿನನ ಕುಕೃತ್ಯಗಳು ತಾರಕಕ್ಕೇರಿದ್ದವು. ಅವನ ಹಿಂದೂ ವಿರೋಧಿ ನೀತಿಯಿಂದ ಗ್ರಾಮದ ವಾತಾವರಣ ಹದಗೆಟ್ಟು, ತಲ್ಲಣಗೊಂಡಿತ್ತು. ಗೋರಟಾ ಅಷ್ಟೇ ಅಲ್ಲ! ಸುತ್ತ ಹನ್ನೆರಡು ಹಳ್ಳಿಗಳಲ್ಲಿಯೂ ಇಂತಹದೇ ಭಯದ ವಾತಾವರಣ ನಿರ್ಮಾಣಗೊಂಡಿತ್ತು. ಅವನ ಅಟ್ಟಹಾಸ ಮೇರೆ ಮೀರಿತ್ತು. ಹಿಂದುಗಳ ಮಾರಣ ಹೋಮಕ್ಕೆ ಈತ ಸಂಚು ರೂಪಿಸಿದ್ದನು. ಸ್ವಾತಂತ್ರ್ಯ ಹೋರಾಟಗಾರರು ಇವನನ್ನು ಹೀಗೆ ಸುಮ್ಮನೆ ಬಿಟ್ಟರೆ ನಮ್ಮ ಸರ್ವನಾಶ ಮಾಡುತ್ತಾನೆಂದು ತಿಳಿದಿದ್ದರು. ಅವನಿಗೊಂದು ಗತಿ ಕಾಣಿಸಬೇಕೆಂದು ತೀರ್ಮಾನಿಸಿದ್ದರು. ಆ ಸಮಯಕ್ಕಾಗಿ ಕಾಯುತ್ತಿದ್ದರು.

### ತಿರಂಗ ಧ್ವಜ ಪ್ರಕರಣ:

ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂತಸದಲ್ಲಿ ದೇಶಾದ್ಯಂತ ದೇಶಪ್ರೇಮಿಗಳು ತಿರಂಗಾ ಧ್ವಜವನ್ನು ಹಾರಿಸಿ ಸಂಭ್ರಮ ಪಡುತ್ತಿದ್ದರು. ನಿಜಾಮ ತಿರಂಗಾ



ಧ್ವಜವನ್ನು ಹಾರಿಸುವುದನ್ನು ನಿಷೇಧಿಸಿದ್ದನು. ಸ್ವಾಮಿ ರಾಮಾನಂದ ತೀರ್ಥರ ಚಿತಾವಣಿಯಂತೆ ನಿಜಾಮ ಆಡಳಿತ ಪ್ರದೇಶದಲ್ಲಿ ಯುವ ದೇಶಪ್ರೇಮಿಗಳು ಅಲ್ಲಲ್ಲಿ ಕದ್ದುಮುಚ್ಚಿ ತಿರಂಗಾ ಧ್ವಜವನ್ನು ಹಾರಿಸುತ್ತಿದ್ದರು. ಗೋರಟಾದಲ್ಲಿಯೂ ಯುವ ಸ್ವಾತಂತ್ರ ಪ್ರೇಮಿಗಳು ತಮ್ಮ ತಮ್ಮ ಮನೆಯ ಮೇಲೆ ತಿರಂಗ ಧ್ವಜವನ್ನು ಹಾರಿಸಿದರು. ಮಾರುತಿ ಪರೀಟ ಪತಂಗದ ಮೇಲೆ ತಿರಂಗಾ ಧ್ವಜ ಹಾರಿಸಿದ್ದರು. ಇದನ್ನು ತಿಳಿದ ಇಸಾಮೊದ್ದಿನ್‌ನ ಬೆಂಬಲಿಗರು ಮಾರುತಿಯನ್ನು ಹಿಡಿದು ಹೊಡೆದರು. ಇನ್ನು ಯಾರಾದರೂ ತಿರಂಗ ಧ್ವಜ ಹಾರಿಸಿದರೆ ಅಂಥವರನ್ನು ಕತ್ತರಿಸಿ ಹಾಕುವುದಾಗಿ ಧಮಕಿ ಹಾಕಿದರು.

ಇದೇ ಸಮಯದಲ್ಲಿ ಪಕ್ಕದ ಹಾಲಗೋರಟಾ ಗ್ರಾಮದ ಹತ್ತಿರ ಆರ್ಯಸಮಾಜದ ಮುಖಂಡರಾದ ಹೊನ್ನಾಳಿಯ ಭಾವುರಾವ ಪಾಟೀಲ, ವಿಠೋಬಾ, ಮಾದೋಬಾ ದೊಂಡಿಬಾ, ಘೋರವಾಡೆ ಸಹೋದರರು ಮತ್ತು ಮಡಿವಾಳಪ್ಪ ಇಂದ್ರಾಳೆ ಇವರುಗಳು ಸೇರಿಕೊಂಡು ಬೇವಿನ ಮರದ ಮೇಲೆ ತಿರಂಗಾ ಧ್ವಜವನ್ನು ಹಾರಿಸಿದರು. ಈ ಸುದ್ದಿ ತಿಳಿದ ಕೂಡಲೇ ಇಸಾಮೊದ್ದಿನನು ದುಬಲಗುಂಡಿಯ ಪೈಗಾದ ಅಮೀನ್‌ಸಾಬನಿಗೆ ವರದಿ ಮುಟ್ಟಿಸಿದನು. ಅಮೀನ್‌ಸಾಬ್ ಬಂದು ತಿರಂಗಾ ಧ್ವಜ ಇಳಿಸಿದನು. ಧ್ವಜ ಹಾರಿಸಿದ್ದ ಆ ಮೂವರು ದೇಶಭಕ್ತರು ಎದುರು ಬಂದು ಅಮೀನ್‌ಸಾಬನ ಕುದರಿಯನ್ನು ಅಡ್ಡಗಟ್ಟಿದ್ದರು. 'ನಾನೇ ದುಬುಲಗುಂಡಿಯ ಅಮೀನ್‌ಸಾಬ ತಿರಂಗಾ ಝುಂಡಾವನ್ನು ಇಳಿಸಿರುವೆನು' ಎಂದು ರಸೀದಿ ಬರೆದುಕೊಡೆಂದು ಹೆದರಿಸಿ ರಸೀದಿಯನ್ನು ಪಡೆದರು. ಆ ರಸೀದಿಯನ್ನು ಅವರು ಭಾಲ್ಕಿಯಿಂದ ದೆಹಲಿ ನಾಯಕರಿಗೆ ಕಳುಹಿಸಿದರು.

ಮರುದಿನ ಅಮಿನ್‌ಸಾಬನು ಹೆಚ್ಚಿನ ಪೋಲಿಸರನ್ನು ಕರೆದುಕೊಂಡು ಹಾಳಗೋರ್ಟಾಕ್ಕೆ ಬಂದನು. ಅಲ್ಲಿ ಯಾರೂ ಸಿಗಲಿಲ್ಲ. ಅವರೆಲ್ಲ ಫರಾರ್ ಆಗಿದ್ದರು. ಅಲ್ಲಿಂದ ಹೊನ್ನಾಳಿಗೆ ಬಂದು ನೋಡಿದಾಗ ಅಲ್ಲಿಯೂ ಯಾರೂ ಸಿಗಲಿಲ್ಲ. ಭಾವುರಾವ ಪಟೇಲ ಮನೆಗೆ ಬೀಗ ಹಾಕಲಾಗಿತ್ತು. ಇಸಾಮೊದ್ದಿನನ್ನು ಹೊನ್ನಾಳಿಗೆ ಬರಹೇಳಿದ ಅಮಿನ್‌ಸಾಬ್ ತಿರಂಗಾ ಧ್ವಜ ಹಾರಿಸಲು ಇವನೇ

ಕುಮ್ಮಕ್ಕು ನೀಡಿದವನೆಂದು ಬಗೆದು ಇಸಾಮೋದ್ದೀನ್ ಮತ್ತು ಆತನ ಸಂಗಡಿಗರಾದ ಫಸ್ತಕೋಮ ಜನಗಳು ಕೂಡಿ 'ಹಾಡಿ ಹಗಲೇ' ಭಾವುರಾವ ಪಾಟೀಲರ ಮನೆಯನ್ನು ಲೂಟ್ ಮಾರ್ ಮಾಡಿದರು.

**ಭಾವುರಾವ ಮನೆ ಲೂಟಿ:**

ಅಮಿನ್‌ಸಾಬನ ಕೆಟ್ಟ ನಿರ್ಧಾರದ ಆದೇಶದಂತೆ ಭಾವುರಾವ ಪಾಟೀಲರ ಮನೆಯನ್ನು ಕಳ್ಳತನದಿಂದ ದೋಚಿಕೊಂಡು ಹೋದುದು ಇಸಾಮೊದ್ದೀನ್‌ನ ಜೀವಕ್ಕೆ ಮಾರಕವಾಗಿ ಪರಿಣಮಿಸಿತು. ಭಾವುರಾವ ಪಾಟೀಲ ಮತ್ತವರ ದೇಶಪ್ರೇಮಿ ತಂಡದವರು ಇದರ ಸೇಡನ್ನು ತೀರಿಸಿಕೊಳ್ಳಲು ಸಿದ್ಧರಾದರು. ಇಷ್ಟೆಲ್ಲಾ ಕುಕೃತ್ಯಕ್ಕೆ ಇಸಾಮೊದ್ದಿನ್‌ನೇ ಕಾರಣನಾಗಿರುವುದರಿಂದ ಅವನನ್ನು ಮುಗಿಸಬೇಕೆಂದು ನಿರ್ಧಾರ ಮಾಡಿದರು. ಅದಕ್ಕಾಗಿ ಸಂಚು ರೂಪಿಸಿ ಹೊಂಚು ಹಾಕತೊಡಗಿದರು. ಆದರೆ ಇದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ.

ನಿಜಾಮ ಪೊಲೀಸರ ಕೆಂಗಣ್ಣಿಗೆ ಗುರಿಯಾಗಿದ್ದ ಹೊನ್ನಳಿಯ ಭಾವುರಾವ ಪಾಟೀಲ ಗೋರಟಾದ ವಿಶ್ವನಾಥಯ್ಯ ಮಠಪತಿ, ಹಾಳಗೋರ್ಟಾದ ವಿಠೋಬಾ ಘೋರವಾಡೆ, ಮಡಿವಾಳಪ್ಪ ಇಂದ್ರಾಳೆ, ಬೇಲೂರಿನ ಸಿದ್ರಾಮ ಪಾಟೀಲ, ಘಾಟಬೋರಾಳದ ರಾಮಚಂದ್ರ ಇವರೆಲ್ಲ ಭೂಗತರಾಗಿ ಇಸಾಮೊದ್ದಿನ್‌ನ ಕೊಲೆಗೆ ಸಂಚು ರೂಪಿಸಿ ತಯಾರಿ ಮಾಡಿಕೊಂಡಿದ್ದರು. ಆ ಸಮಯಕ್ಕಾಗಿ ಕಾಯುತ್ತಿದ್ದರು.

ಇವರೆಲ್ಲ ಒಂದು ರಾತ್ರಿ ಯಾರಿಗೂ ತಿಳಿಯದ ಹಾಗೆ ಗೋರಟಾಕ್ಕೆ ಬಂದು ವೀರಶೆಟ್ಟೆಪ್ಪಾ ಪೋಲಿಸ್ ಪಾಟೀಲ ಮತ್ತು ಮಾದಪ್ಪ ಡುಮಣೆ ಸಾಹುಕಾರರಿಗೆ ಗುಪ್ತವಾಗಿ ಭೇಟಿಯಾಗಿ 'ನೀವು ಹೂಂ! ಎಂದರೆ ಇಸಾಮೊದ್ದಿನ್‌ನನ್ನು ಹೊಡೆದು ಹಾಕುತ್ತೇವೆಂದು ಹೇಳಿದರು. ಇದಕ್ಕೆ ಅವರಿಬ್ಬರೂ ಸುತಾರಾಮ ಒಪ್ಪಲಿಲ್ಲ. ಹಾಗೆಲ್ಲ ಮಾಡಬಾರದು. ಒಂದು ವೇಳೆ ನೀವು ನಮ್ಮ ಮಾತನ್ನು ಮೀರಿ ಇಸಾಮೊದ್ದಿನ್‌ನಿಗೆ ಹೊಡೆದು ಸಾಯಿಸಿದರೆ, ನಮ್ಮೂರು ಉಳಿಯುವುದಿಲ್ಲ. ನಾವೆಲ್ಲರೂ ದಾರುಣವಾಗಿ ಸಾಯಬೇಕಾಗುತ್ತದೆ ಎಂದು



ಎಚ್ಚರಿಸಿದರಂತೆ. ಅಲ್ಲಿಂದ ಇವರು ಬರಿಗೈಯಿಂದ ಬಂದರೂ ಕೂಡ ಅವರಲ್ಲಿ ಆತನ ಕೊಲೆ ಮಾಡುವ ಇರಾದೆ ಮತ್ತಷ್ಟೂ ಬಲಿಯತೊಡಗಿತ್ತು. ಅದಕ್ಕಾಗಿ ಇವರು ಹೊಂಚು ಹಾಕುತ್ತಲೇ ಇದ್ದರು. ಭೂಗತವಾಗಿಯೇ ತಿರುಗಾಡ ತೊಡಗಿದರು. ಆಗಾಗ ವಾಗ್ಧರಿ ಕ್ಯಾಂಪಿಗೆ ಹೋಗುತ್ತಲಿದ್ದರು.

**ಇಸಾಮೊದ್ದಿನ್‌ನ ಕಗ್ಗೊಲೆ:**

ಭಾವುರಾವ ಪಾಟೀಲರ ಮನೆಯನ್ನು ಲೂಟಿ ಮಾಡಿ ಬಂದ ನಂತರ ಇಸಾಮೊದ್ದಿನ್‌ನನಿಗೂ ಒಳಗೊಳಗೆ ಚಿಂತೆ ಕಾಡತೊಡಗಿತ್ತು. ಇದು ನನ್ನ ಜೀವಕ್ಕೆ ಕುತ್ತು ತರಬಹುದೆಂದು ಅಂದುಕೊಂಡಿದ್ದನು. ಭಾವುರಾವ ಪಾಟೀಲರ ಮನೆ ಲೂಟ್‌ಮಾರ್ ಮಾಡಿದ ನಂತರ ಸುತ್ತ ಹನ್ನೆರಡು ಹಳ್ಳಿಗಳಲ್ಲಿ ಭಯದ ವಾತಾವರಣ ಆವರಿಸಿತ್ತು. ಎಲ್ಲಾ ಕಡೆಗಳಲ್ಲೂ ರಝಾಕಾರರ ಹಾವಳಿಯೂ ಹೆಚ್ಚಾಗ ತೊಡಗಿತು. ಯಾವಾಗ ಏನಾಗುತ್ತದೋ ಎಂಬ ಭಯಭೀತಿ ಎಲ್ಲರಲ್ಲಿ ಆವರಿಸ ಹತ್ತಿತ್ತು. ಜನರು ಮನೆಯಿಂದ ಆಚೆಗೂ ಬರಲು ಭಯಪಟ್ಟಿಕೊಳ್ಳತೊಡಗಿದರು. ಇನ್ನು ಬೇರೆ ಊರುಗಳಿಗೆ ಹೋಗುವುದೆಂದರೆ ಕಷ್ಟಕರವಾಗಿ ಪರಿಣಮಿಸಿತ್ತು. ನಿತ್ಯ ಜೀವನಕ್ಕೆ ಬೇಕಾಗುವ ದಿನಸಿ ಸಾಮಾನುಗಳನ್ನು ತರಲು ಪೇಟೆಗಳಿಗೆ ಹೋಗಲು ಹೆದರುವಂತಹ ಸ್ಥಿತಿ ನಿರ್ಮಾಣವಾಯಿತು.

ಒಮ್ಮೆ ಗೋರಟಾ ಗ್ರಾಮಸ್ಥರು ಇಸಾಮೊದ್ದಿನ್‌ನ ಕುರಿತು 'ಹೊಲದಲ್ಲಿ ಬೆಳೆದ ದವಸ ಧಾನ್ಯಗಳನ್ನು ಪೇಟೆಗೆ ಒಯ್ದು ಮಾರಿಕೊಂಡು ಬರಲು ಕಷ್ಟಸಾಧ್ಯವಾಗಿದೆ. ಮನೆಗಳಲ್ಲಿ ನಿತ್ಯ ಬೇಕಾಗುವ ದಿನಸಿ ಸಾಮಾನುಗಳು ಕೂಡ ಮುಗಿದು ಹೋಗುತ್ತಿವೆ. ಮನೆಗೆ ಸಾಮಾನು ಬೇಕಾಗಿವೆ. ಅದರಲ್ಲಿಯೂ ಮುಂದೆ ಹೋಳಿ ಹುಣ್ಣಿಮೆ ಹಬ್ಬ ಬೇರೆ ಬರುತ್ತಿದೆ. ಏನು ಮಾಡಬೇಕೆಂದು ತೋಚದಂತಾಗಿದೆ. ನಮಗೆಲ್ಲಾ ಚಿಂತೆಯಾಗಿದೆ' ಎಂದು ಇಸಾಮೊದ್ದಿನ್‌ನ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು. ಇದಕ್ಕೆ ಇಸಾಮೊದ್ದಿನ್‌ನು ಏಕೆ ಚಿಂತೆ ಮಾಡುತ್ತೀರಿ ನಾನಿದ್ದೇನಲ್ಲ! ಹೆದರಿಕೆ ಏಕೆ? ನಡೆಯಿರಿ ನನ್ನ ಜೊತೆಗೆ. ನಾಳೆ ನೀವು ಎಷ್ಟು ಜನ ಬರುವವರಿದ್ದೀರಿ ಬಾಜಾರ ಮಾಡಲು ಕಲ್ಯಾಣಕ್ಕೆ

ಹೋಗೋಣ ಗಾಡಿಗಳನ್ನು ಕಟ್ಟೀರಿ ನಾನು ನಿಮ್ಮ ಜೊತೆಗೆ ಬರುತ್ತೇನೆಂದು ಹೇಳಿದನು.

ಇಸಾಮೋದ್ದಿನ್‌ನ ಭರವಸೆಯಿಂದ ಮರುದಿನ ಊರಿನ ಅನೇಕ ಜನರು ಎತ್ತಿನ ಬಂಡಿಗಳನ್ನು ಕಟ್ಟಿ ತಮ್ಮಲ್ಲಿದ್ದ ದವಸ ಧಾನ್ಯಗಳನ್ನು ಗಾಡಿಯಲ್ಲಿ ತುಂಬಿಕೊಂಡರು. ಹೀಗೆ ಬಜಾರ ಅಥವಾ ಸಂತೆಗೆ ಹೋಗಲು ಸುಮಾರು ೪೦ ಬಂಡಿಗಳು ತಯಾರಾದವು. ಇಸಾಮೊದ್ದಿನ್‌ನ ಜೊತೆಗೆ ಎಲ್ಲರೂ ಕಲ್ಯಾಣಕ್ಕೆ ಹೋದರು. ತಾವು ಹೊತ್ತು ತಂದಿದ್ದ ಧಾನ್ಯಗಳನ್ನೆಲ್ಲ ಎಲ್ಲರೂ ಮಾರಾಟ ಮಾಡಿದರು. ಮತ್ತು ತಮಗೆ ಬೇಕಾದ ದಿನಸಿ ವಸ್ತುಗಳನ್ನು ಖರೀದಿ ಮಾಡಿದರು. ಸಂಜೆಯಾಗಿದ್ದರಿಂದ ರಾತ್ರಿ ಕಲ್ಯಾಣದಲ್ಲಿಯೇ ಉಳಿದುಕೊಂಡು ಮರುದಿನ ನಸುಕಿನ ೪ ಗಂಟೆಗೆ ಮರಳಿ ಹೊರಡಲು ಬಂಡಿಗಳನ್ನು ಕಟ್ಟಿದರು.

ಇಸಾಮೊದ್ದಿನನನ್ನು ಮುಗಿಸಲು ಪಣತೊಟ್ಟು ಹೊಂಚು ಹಾಕುತ್ತಿದ್ದ ಭಾವುರಾವ ಪಟೇಲ ಸಂಗಡಿಗರಿಗೆ ಇಸಾಮೊದ್ದೀನನು ಬಾಜಾರ ಮಾಡಲು ಕಲ್ಯಾಣಕ್ಕೆ ಹೋಗಿದ್ದ ಸುದ್ದಿ ತಿಳಿದಿತ್ತು. ಅವರು ಅವನಿಗಾಗಿ ಮುಚಳಂಬಿಯ ಬುದ್ದೇನ್ ಹಳ್ಳದ ಹತ್ತಿರ ಕಾಯುತ್ತ ಅಡಗಿಕೊಂಡು ಕುಳಿತಿದ್ದರು.

ಗೋರಟಾದವರಂತೆ ಬಾಜಾರ ಮಾಡಲು ಕಲ್ಯಾಣಕ್ಕೆ ಬಂದಿದ್ದ ಕುಟೇಗಾಂವದ ಆರು ಬಂಡಿಗಳು ಗೋರಟಾದವರಿಗಿಂತ ಮೊದಲೇ ಬಿಟ್ಟಿದ್ದವು. ಈ ಗಾಡಿಗಳು ಮುಚಳಂಬಿಯ ಬುದ್ದೇನ ಹಳ್ಳದ ಹತ್ತಿರ ಬಂದಾಗ ಅಲ್ಲಿಯೇ ಅಡಗಿ ಕುಳಿತಿದ್ದ ಬಾವುರಾವ ಪಾಟೀಲ ಮತ್ತು ಸಂಗಡಿಗರಲ್ಲಿಯ ಘಾಟಬೋರಾಳದ ರಾಮಚಂದ್ರ ಎದುರಿಗೆ ಬಂದು ಗಾಡಿ ರೋಖೋ ಎಂದನು. ರಾಮಚಂದ್ರ 'ಕಹಾ ಕಾ ಹೈ ಗಾಡಿ ಬೋಲೊ' ಎಂದನು. ಇವರು ಹೆದರುತ್ತ 'ಕುಟೇಗಾಂವ ಕಾ ಹೈ ಸಾಬ್' ಎಂದರು. ಗಾಡಿಯೊಳಗಿದ್ದ ಕೊಬ್ಬರಿ ಮತ್ತು ಸಕ್ಕರೆಯ ಸರಗಳನ್ನು ತೆಗೆದುಕೊಂಡು ಗಾಡಿಗಳನ್ನು ಬಿಟ್ಟುಕೊಟ್ಟರು.

ಗೋರಾಟಾದ ಗಾಡಿಗಳು ಧನ್ನೂರು ಗ್ರಾಮಕ್ಕೆ ಬರಲು ಈ ಸುದ್ದಿಯನ್ನು ತಿಳಿಯಿತು. ದಾರಿಯಲ್ಲಿ ಕಳ್ಳರು ಗಾಡಿಗಳನ್ನು ಲೂಟಿ ಮಾಡುತ್ತಿದ್ದಾರೆಂದು ತಿಳಿದು ಇಸಾಮೊದ್ದಿನನು ಎಲ್ಲಾ ಗಾಡಿಯವರಿಗೆ ಸುರಕ್ಷತೆಗಾಗಿ ಗಾಡಿಗಳಲ್ಲಿ



ಕಲ್ಲುಗಳನ್ನು ತುಂಬಿಕೊಳ್ಳುವಂತೆ ಹೇಳಿದನು. ಅವರೆಲ್ಲರೂ ಕಲ್ಲುಗಳನ್ನು ತುಂಬಿಕೊಂಡು ಗೋರಟಾದತ್ತ ಹೊರಟರು. ಸುರಕ್ಷತೆಯ ದೃಷ್ಟಿಯಿಂದ ಇಸಾಮೊದ್ದಿನನ ಗಾಡಿಗಳ ಮಧ್ಯದಲ್ಲಿದ್ದನು. ಅವನ ಹಿಂದೆ ಇಪ್ಪತ್ತು ಮತ್ತು ಮುಂದೆ ಇಪ್ಪತ್ತು ಗಾಡಿಗಳಿದ್ದವು. ಮೊದಲೇ ಪ್ಲಾನ್ ಮಾಡಿ ಹೊಂಚು ಹಾಕಿ ಕುಳಿತ್ತಿದ್ದ ಪಾಟೀಲ ತಂಡವು ಎತ್ತಿನ ಕೊರಳ ಗಂಟೆಗಳ ಶಬ್ದ ಕೇಳಿ ಜಾಗ್ರತೆಗೊಂಡಿತು.

ನಸುಕಿನ ಜಾವದಲ್ಲಿ ಗೋರಟಾದ ಗಾಡಿಗಳು ಮುಚಳಂಬಿಯ ಬುದ್ದೇನ ಹಳ್ಳದ ಹತ್ತಿರ ಬರುತ್ತಿದ್ದಂತೆ ಅಡಗಿ ಕುಳಿತ್ತಿದ್ದ ಪಾಟೀಲ ತಂಡದವರು ಧುತ್ತೆಂದು ಗಾಡಿಗಳ ಎದುರಿಗೆ ಬಂದ ರಾಮಚಂದ್ರ ಘಾಟಬೋರಾಳ ಗಾಡಿ ರೊಖೋ ಎಂದು ಗಾಡಿಗಳನ್ನು ನಿಲ್ಲಿಸಿದರು. ಗಾಡಿಗಳಲ್ಲಿ ಇಸಾಮೊದ್ದಿನನನ್ನು ಹುಡುಕಹತ್ತಿದರು. ಈ ವಿಷಯವನ್ನು ಕೂಡಲೇ ತಿಳಿದ ಇಸಾಮೊದ್ದಿನ್ 'ಚೋರ್ ಆಯಾರೇ ಫತ್ತರ್ ಮಾರೋ' ಎಂದು ಏರಿದ ಧ್ವನಿಯಲ್ಲಿ ಹೇಳಿದನು. ಗಾಡಿಯವರೆಲ್ಲರೂ ಗಾಬರಿಬಿದ್ದು ಕಲ್ಲುಗಳನ್ನು ಹೊಡೆಯ ತೊಡಗಿದರು. ಇಸಾಮೊದ್ದಿನ್ ಈ ಗಾಡಿಗಳ ಮಧ್ಯದ ಗಾಡಿಯಲ್ಲಿರುವುದನ್ನು ತಿಳಿದುಕೊಂಡ ಪಾಟೀಲ ತಂಡದವರು ಕಲ್ಲು ಹೊಡೆಯುವ ಪ್ರತಿರೋಧವನ್ನು ಲೆಕ್ಕಿಸದೇ ಮೈಮೇಲೆ ಹೊದ್ದಿರುವ ಕಂಬಳಿಯನ್ನು ಒಂದೆರಡು ಪದರಗಳನ್ನು ಮಾಡಿಕೊಂಡು ಅದರಿಂದ ತೂರಿ ಬರುವ ಕಲ್ಲಿನ ರಕ್ಷಣೆಯನ್ನು ಮಾಡಿಕೊಂಡು ಇಸಾಮೊದ್ದಿನನ ಹತ್ತಿರಕ್ಕೆ ಬಂದರು.

ಇವರನ್ನು ಕಂಡ ತಕ್ಷಣ ಗಾಬರಿಬಿದ್ದ ಇಸಾಮೊದ್ದೀನ್ ತಡಬಡಿಸುತ್ತ ತನ್ನಲ್ಲಿದ್ದ ಎರಡು ನಳಿಯ ಬಿಜಲೋಟ ಬಾರ್‌ನ್ನು ತೆಗೆದುಕೊಂಡು ಅವರತ್ತ ತೋಟಾಗಳನ್ನು ಹಾರಿಸಿದನು. ಅವನ ದುರ್ದೈವಕ್ಕೆ ತೋಟಾಗಳು ಹಾರಲಿಲ್ಲ; ಸಿಡಿಯಲಿಲ್ಲ, ಇಸಾಮೊದ್ದೀನ್ ಈಗ ಧೈರ್ಯಗುಂದಿದನು. ಗಾಬರಿ ಬಿದ್ದನು. ಅವನ ಕೈಯಲ್ಲಿದ್ದ ಬಿಜಲೋಟ್‌ನ್ನು ಎಳೆದು ಕಸಿದುಕೊಂಡ ಹಾಳಗೋರ್ಟಾದ ವಿಠೋಬಾ ಘೋರವಾಡೆ ನಳಿಯನ್ನು ತಿರುವಿ ಬಿಜಲೋಟಿನ ತುಂಬಿನಿಂದ ಜೋರಾಗಿ ಇಸಾಮೊದ್ದಿನನ ತಲೆಗೆ ಹೊಡೆದನು. ಇಸಾಮೊದ್ದೀನ್ ನೆಲಕ್ಕುರುಳಿದನು. ಕೂಡಲೇ ಅವನಿಗೆ ಗುಂಡು ಹೊಡೆದರು. ನರಳುತ್ತ

ಇಸಾಮೊದ್ದಿನ್ ಸತ್ತು ಹೋದನು. ಇದನ್ನು ಕಂಡ ಬಂಡಿಯನ್ನು ಹೊಡೆಯುತ್ತಿದ್ದ ಮಹಮ್ಮದ್ ಎಂಬುವನು ಜೋರಾಗಿ ಚೀರಿ ಹೆದರಿ ಓಡಹತ್ತಿದ್ದನು. ಅವನನ್ನು ಹಿಡಿದ ತಂಡ ಹಿಗ್ಗಾ ಮುಗ್ಗಾ ಹೊಡೆದರು. ನೆಲಕ್ಕುರುಳಿದ ಇವನು ಸತ್ತನೆಂದು ಬಂಡಿಯಲ್ಲಿ ಎಳೆದು ತಂದು ಹಾಕಿದರು. ಆದರೆ ಅವನ ಜೀವ ಉಳಿದಿತ್ತು. ಭಾವುರಾವ ಪಾಟೀಲ ತಂಡದವರು 'ಜೈ ಹಿಂದ್ ಬೋಲೋ ಭಾರತ ಮಾತಾಕಿ ಜೈ' ಎಂದು ಘೋಷಣೆ ಮಾಡಿದರು. ಗಾಬರಿಬಿದ್ದು ಹೌಹಾರಿದ್ದ ಎಲ್ಲ ಬಂಡಿಯವರಿಗೆ ತಮ್ಮ ಪರಿಚಯವನ್ನು ಮಾಡಿಕೊಟ್ಟರು. ನೀವಿನ್ನು ಯಾರೂ ಇಲ್ಲಿರಬೇಡಿರಿ. ನಮ್ಮ ಗಾಡಿ ನಮ್ಮ ಮಾಲು ಎಂದು ಕೂಡಬೇಡಿರಿ. ನಿಮ್ಮ ನಿಮ್ಮ ಜೀವವನ್ನು ಉಳಿಸಿಕೊಳ್ಳಿರಿ. ಇಲ್ಲಿಂದ ಓಡಿ ಹೋಗಿರಿ ಎಂದು ಇವರೆಲ್ಲರಿಗೂ ಹೇಳಿ ಅಲ್ಲಿಂದ ಮಿಂಚಿನಂತೆ ಅವರೆಲ್ಲ ಫರಾರಿಯಾಗಿ ಹೋದರು.

ಇಸಾಮೊದ್ದಿನ್ ಕೊಲೆಯಾದ ಸುದ್ದಿ ಕೂಡಲೇ ಕಾಳ್ಗಿಚ್ಚಿನಂತೆ ಎಲ್ಲಾ ಕಡೆಗೆ ಹರಡಿತು. ಭಯಭೀತಿಯ ವಾತಾವರಣ ಸೃಷ್ಟಿಯಾಯಿತು. ಗಾಬರಿಬಿದ್ದ ಗೋರಟಾದ ಮುಸಲ್ಮಾನರು ನಿಜಾಮ ಪೋಲಿಸ್‌ರೊಂದಿಗೆ ಬುದ್ದೇನ್ ಹಳ್ಳಕ್ಕೆ ಬಂದರು. ಸತ್ತ ಇಸಾಮೊದ್ದೀನ್‌ನನ್ನು ಕಂಡು ಮರುಗಿದರು. ಕೊಲೆಗಡುಕರನ್ನು ಹಿಡಿದು ಕೊಂದು ಹಾಕಬೇಕೆಂದು ಬೊಬ್ಬೆ ಇರಿದರು.

ಇಸಾಮೊದ್ದಿನನ ಶವದ ಬಳಿ ಅವನ ಆಪ್ತ ಗೆಳೆಯ ರಾಮಶೆಟ್ಟೆಪ್ಪ ಚಿದ್ರಿ ಕುಳಿತಿದ್ದರು. ಅಮೀನ್‌ಸಾಬ್ ರಾಮಶೆಟ್ಟೆಪ್ಪ ಚಿದ್ರಿಯನ್ನು ವಿಚಾರಿಸಿದಾಗ ಅವರು ನಡೆದ ಘಟನೆಯನ್ನು ಮತ್ತು ಕೊಲೆ ಮಾಡಿದವರಾರೆಂಬುದನ್ನೂ ವಿವರಿಸಿ ಹೇಳಿದರು. ಸಾಹೇಬ್ರ! ನೀವು ಹೊಡಿರಿ ಬಡಿರಿ ಏನ್‌ಬೇಕಾದ್ರು ಮಾಡ್ರಿ. ಆದರ ಅವರ ಕೈಯಾಗ ಮಾತ್ರ ನನಗ ಕೊಡಬ್ಯಾಡ್ರೆಂದು ಚಿದ್ರಿ ಆಂಗಲಾಚಿ ಪರಿ ಪರಿಯಾಗಿ ಅಮೀನ್‌ಸಾಬ್‌ರನ್ನು ಕೇಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಗಾಡಿಯ ಮಾಲಿಕರೆಲ್ಲರೂ ಓಡಿ ಹೋಗಿದ್ದರು. ಇಡೀ ದಿನ ಪಂಚನಾಮೆ ನಡೆಯಿತು. ಆನಂತರ ಎಲ್ಲಾ ಗಾಡಿಗಳನ್ನು ಕಟ್ಟಿಕೊಂಡು ಇಸಾಮೊದ್ದಿನನ ಶವವನ್ನು ಗೋರಟಾಕ್ಕೆ ತಂದರು. ಮರುದಿನ ಶವ ಸಂಸ್ಕಾರಕ್ಕೆ ಸರ್ಕಾರದವರು ಹಸಿರು ನಿಶಾನೆ ತೋರಿಸಿದರು. ಮರುದಿನ ಇಸಾಮೊದ್ದಿನನ ಅಂತ್ಯಕ್ರಿಯೆ ನಡೆಯಿತು. ಸುತ್ತಲಿನ ಹಳ್ಳಿಗಳಿಂದ ಮುಸಲ್ಮಾನ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ



ಸೇರಿದ್ದರು. ಚಿದ್ರಿ ರಾಮಶೆಟ್ಟೆಪ್ಪರನ್ನು ಹನ್ನೆರಡು ದಿನ ಚಾವಡಿಯಲ್ಲಿ ಕೂಡಿ ಹಾಕಿ ವಿಚಾರಣೆ ನಡೆಸಿದರು. ಇವರು ನಿಜ ಸಂಗತಿಯನ್ನು ತಿಳಿಸಿದ್ದರಿಂದ ನಿರ್ದೋಶಿ ಎಂದು ತಿಳಿದು ಬಂದಿದ್ದರಿಂದ ಒಂದು ರಾತ್ರಿ ಚಿದ್ರಿಯವರನ್ನು ಪೋಲಿಸರು ಬಿಟ್ಟುಬಿಟ್ಟರು. ಎದ್ದೋ ಬಿದ್ದೋ ಎಂದು ಜೀವ ಕೈಯಲ್ಲಿ ಹಿಡಿದುಕೊಂಡು ಅನ್ನ ನೀರಿಲ್ಲದೇ ರಾಮಶೆಟ್ಟೆಪ್ಪ ಮೂರು ದಿನಗಳ ನಂತರ ನಿಜಾಮ ರಾಜ್ಯದಿಂದ ಪಾರಾಗಿ ಸೊಲ್ಲಾಪುರವನ್ನು ತಲುಪಿದರು.

## ಪ್ರಕ್ಷುಬ್ದ ಪರಿಸ್ಥಿತಿ:

ಇಸಾಮೊದ್ದಿನನ ಕೊಲೆಯಾದ ನಂತರ ಗೋರಟಾ ಸುತ್ತಲಿನ ವಾತಾವರಣ ಬಿಗುವಿನಿಂದ ಕೂಡಿತ್ತು. ಒಂದು ರೀತಿಯ ಭಯದ ವಾತಾವರಣ ನಿರ್ಮಾಣವಾಗಿತ್ತು. ರಝಾಕಾರರು ಯಾವ ಕಡೆಯಿಂದ ಬಂದು ಎರಗುತ್ತಾರೋ ಎಂಬ ಭಯ ಎಲ್ಲರಿಗೂ ಕಾಡತೊಡಗಿತ್ತು. ಏಕೆಂದರೆ ಇಸಾಮೊದ್ದೀನ್ ರಝಾಕಾರ ಲೀಡರ್ ಖಾಸೀಂ ರಜ್ವಿಯ ಪರಮಾಪ್ತನಾಗಿದ್ದನು. ಈ ಭಾಗದಿಂದ ನಿಜಾಮ ಸರ್ಕಾರಕ್ಕೆ ಮಾಹಿತಿ ತಿಳಿಸುತ್ತಿದ್ದ ವಿಶ್ವಾಸಿಕನಾಗಿದ್ದನು. ಗೋರಟಾ ಸುತ್ತಲಿನ ಹತ್ತು ಹನ್ನೆರಡು ಹಳ್ಳಿಗಳಲ್ಲಿ ಮುಸ್ಲಿಂ ಮುಖಂಡನಾಗಿದ್ದವನು. ಇಂಥವನ ಕೊಲೆಯಾಗಿದೆ ಎಂದರೆ ನಮಗೆ ರಝಾಕಾರರು ಸುಮ್ಮನೆ ಬಿಡುವುದಿಲ್ಲವೆಂಬುದು ಬಹುತೇಕ ಹಿಂದೂಗಳ ಅನಿಸಿಕೆಯಾಗಿತ್ತು.

ಭಯ ಭೀತಿಗೊಳಗಾಗಿ ಗೋರಟಾದ ಜನರು ಗ್ರಾಮವನ್ನು ತೊರೆಯ ಹತ್ತಿದ್ದರು. ಭವಿಷ್ಯದ ರಝಾಕಾರರ ದಾಳಿಗೆ ಹೆದರಿ ಗ್ರಾಮದ ಗಣ್ಯ ಶ್ರೀಮಂತರಾದ ಮಾದಪ್ಪ ಡುಮಣೆ ಗ್ರಾಮವನ್ನು ತೊರೆದು ಸೊಲ್ಲಾಪುರವನ್ನು ಸೇರಿದರು. ಅವರ ದೊಡ್ಡ ಮನೆಯನ್ನು ನೋಡಿಕೊಳ್ಳಲು ಆಳು ಮನುಷ್ಯರಿಗಿಟ್ಟಿದ್ದರು. ಡುಮಣೆ ಸಾಹುಕಾರ ವೀರಶೆಟ್ಟೆಪ್ಪ ವಂಕೆ ಅವರಿಗೂ ತಮ್ಮೊಂದಿಗೆ ಸೋಲಾಪುರಕ್ಕೆ ನಡೆಯಿರಿ ಎಂದು ಕೇಳಿದಾಗ ವೀರಶೆಟ್ಟೆಪ್ಪ ನಾನು ಸತ್ತರು ಪರವಾಗಿಲ್ಲ. ಆದರೆ ಹೇಡಿ ಎಂದು ಎನಿಸಿಕೊಳ್ಳುವುದಿಲ್ಲವೆಂದು ಹೇಳಿದರು. ಅವರು ಗೋರಟಾದಲ್ಲಿಯೇ ಉಳಿದರು. ಜನರಿಗೆ ಧೈರ್ಯ ತುಂಬಿದರು.

ಅಂದುಕೊಂಡಂತೆ ರಝಾಕಾರರ ವಕ್ರದೃಷ್ಟಿ ಗೋರಟಾದ ಮೇಲೆ

ಬೀಳತೊಡಗಿತು. ಅದೇ ಸಮಯದಲ್ಲಿ ಊರಿನ ಸಜ್ಜನ ಕೃಷಿಕ ಗುರಪ್ಪ ಬಿರಾದಾರ ಹೊಲಕ್ಕೆ ಹೋಗಿ ಮನೆಗೆ ಬರುವಾಗ ಹಿಂದೆ ಬಂದ ಮುಸಲ್ಮಾನರು ಬಂದೂಕಿನಿಂದ ಗೋಲಿ ಹೊಡೆದರು. ಗೋಲಿಯು ಬೆನ್ನಿನಿಂದ ಹೊಟ್ಟೆ ಸೀಳಿ ಹೋಯಿತು. ನೆಲಕ್ಕೆ ಬಿದ್ದ ಗುರಪ್ಪನನ್ನು ಎಳೆದೊಯ್ದು ಹಳ್ಳದ ನೀರಿನಲ್ಲಿ ಮುಳುಗಿಸಿಟ್ಟು ಮೇಲೆ ಬಂಡೆಗಲ್ಲುಗಳನ್ನು ಎಳೆದುಹೋದರು. ಇತ್ತ ಗುರಪ್ಪ ಮನೆಗೆ ಬಾರದಿದ್ದನ್ನು ಕಂಡು ಮನೆಯರೆಲ್ಲ ಚಿಂತೆಗೀಡಾದರು. ಅಣ್ಣ ಮಹಾರುದ್ರಪ್ಪ ಎಲ್ಲಾ ಕಡೆಗೂ ಹುಡುಕಿದನು. ಬಂಧು ಬಳಗ ನೆಂಟರಿಷ್ಟರನ್ನು ಭೆಟ್ಟಿಯಾಗಿ ಕೇಳಿದರು. ಎಲ್ಲಿಯೂ ಪತ್ತೆ ಹತ್ತಲಿಲ್ಲ.

ಒಂದು ದಿನ ವೀರಪ್ಪ ಅಕ್ಕಣ್ಣ ದನಗಳಿಗೆ ನೀರು ಕುಡಿಸಲೆಂದು ಹಳ್ಳದ ಮುಂದೆ ನಿಂತಾಗ ಮೀನುಗಳು ದೊಡ್ಡ ದೊಡ್ಡ ಮಾಂಸದ ತುಣುಕುಗಳನ್ನು ತರುವುದನ್ನು ಕಂಡು ಏನಿರಬಹುದೆಂದು ಮುಂದಕ್ಕೆ ಹೋಗಿ ನೋಡಲು ಶವ ಕಾಣಿಸಿತು. ಗುರಪ್ಪ ಕಾಣೆಯಾಗಿದ್ದ ಸಂಗತಿ ಇವನಿಗೆ ಗೊತ್ತಿತ್ತು. ಕೂಡಲೇ ಊರಿಗೆ ಬಂದು ಮಹಾರುದ್ರಪ್ಪನಿಗೆ ಸುದ್ದಿ ತಿಳಿಸಿದನು. ಪರಿವಾರದವರು ಗಾಬರಿಯಾಗಿ ಓಡುತ್ತ ಹಳ್ಳಕ್ಕೆ ಬಂದು ನೋಡಲು ಆಕಾಶವೇ ಕಳಚಿ ಬಿದ್ದಂಗಾಯ್ತು. ಅದು ಗುರಪ್ಪನ ಶವವಾಗಿತ್ತು. ಅವರ ರೋದನ, ಆಕ್ರಂದನ ಮುಗಿಲು ಮುಟ್ಟಿತ್ತು. ಶವವನ್ನು ನೀರಿನಿಂದ ಹೊರತೆಗೆದು ಊರಿಗೆತೆಗೆದುಕೊಂಡು ಹೋದಾಗ, ಚಾವಡಿಯಲ್ಲಿ ಪೊಲೀಸರಿದ್ದರು. ಅವರು ಶವವನ್ನು ಮನೆಗೆ ಒಯ್ಯಲು ಬಿಡಲಿಲ್ಲ. ಚಾವಡಿಗೆ ಒಯ್ದು ಪಂಚನಾಮೆ ಮಾಡಿದರು. ಶವದ ಪೋಸ್ಟ್‌ಮಾರ್ಟಮ್ ಮಾಡಲು ದುಬಲಗುಂಡಿಗೆ ಕಳುಹಿಸಿಕೊಟ್ಟರು. ಮರುದಿನ ಗುರಪ್ಪನ ಸಮಾಧಿಯನ್ನು ಮಾಡಲಾಯಿತು. ಸಜ್ಜನ ಸಾತ್ವಿಕವಾಗಿದ್ದ ಗುರಪ್ಪನನ್ನು ವಿನಾಕಾರಣ ಮುಸ್ಲಿಂರು ಕೊಂದು ಹಾಕಿದರು.

ರಝಾಕಾರರ ಹಾವಳಿ ಹೆಚ್ಚಾಗತೊಡಗಿತ್ತು. ಸಜ್ಜನರಿಗೆ ಕಾಲ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಎಲ್ಲ ಕಡೆಗಳಲ್ಲೂ ದಂಗೆ, ಕೊಲೆ, ಸುಲಿಗೆ, ಅತ್ಯಾಚಾರ, ಹಾಹಾಕಾರ ನಡೆಯಹತ್ತಿದವು. ಈ ಪ್ರಕ್ಷುಬ್ಧವಾದ ಪರಿಸ್ಥಿತಿಯನ್ನು ಮನಗಂಡು ಸುರಕ್ಷತೆಯ ದೃಷ್ಟಿಯಿಂದ ಮುಂದಾಲೋಚನೆಯಿಂದ ನಾಗಪ್ಪ ಹಳೆಂಬರೆ ಮತ್ತು ರೇವಣಯ್ಯ ಮಠಪತಿಯವರು ಮದ್ದು ಬಾರೂದ್ ಗೋಲಿಗಳನ್ನು ತರಲು ಮದ್ದಿನವಾಡಿಗೆ ರಾತ್ರೋರಾತ್ರಿ ಹೋಗಿ ಮದ್ದುಗುಂಡುಗಳನ್ನು ಗುಪ್ತವಾಗಿ ತಂದು ಡುಮಣೆನವರ ಮನೆಯಲ್ಲಿ ಬಚ್ಚಿಟ್ಟರು.



### ಗೋರಟಾ ಆಕ್ರಮಣ:

ಗೋರಟಾದ ಮೇಲೆ ಆಕ್ರಮಣವನ್ನು ಮಾಡಲು ಊರಲ್ಲಿರುವ ಮುಸಲ್ಮಾನರು ಮತ್ತು ಸುತ್ತಮುತ್ತಲಿನ ಹುಮನಾಬಾದ, ಭಾಲ್ಕಿ, ಬಸವಕಲ್ಯಾಣ, ಹುಲಸೂರು, ರಾಜೇಶ್ವರ, ದುಬಲಗುಂಡಿ, ರಾಜೋಳ, ವರವಟ್ಟಿ, ರಾಯಪಳ್ಳಿ, ನಾವದಗಿ, ಬೆಲ್ಲಳ್ಳಿ, ತೊಗಲೂರು, ಘಾಟಬೋರಾಳ ಮುಚಳಂಬ, ಕನಕಟ್ಟಾ, ರಾಚಪ್ಪ ಗೌಡಗಾಂವ, ಹುಣಚನಾಳ, ಕುಮಾರ ಚಿಂಚೋಳಿ, ಹಳ್ಳಿಖೇಡ(ಬಿ), ಖಟಕ ಚಿಂಚೋಳಿ, ಗಡಿಗೌಡಗಾಂವ ಮುಂತಾದ ಹತ್ತಾರು ಕಡೆಗಳಿಂದ ರಝಾಕಾರರು ಘೋರವಾಡಿಯಲ್ಲಿ ಒಂದೆಡೆ ಸೇರಿಕೊಂಡು ಮೀಟಿಂಗ್ ನಡೆಸಿದರು. ಗೋರಟಾದ ಮೇಲೆ ದಾಳಿಯನ್ನು ಮಾಡಲು ಸಂಚು ರೂಪಿಸಿದರು. ಸಾವಿರಾರು ಸಂಖ್ಯೆಯಲ್ಲಿ ರಝಾಕಾರರು ಸೇರಿಕೊಂಡು ಗೋರಟಾದ ದಾಳಿಯನ್ನು ನಡೆಸಲು ನಿರ್ಧರಿಸಿದರು. ಈ ಸುದ್ದಿ ಅಲ್ಲಲ್ಲಿ ಗುಸುಗುಸು ಹರಡತೊಡಗಿತು. ಗೋರಟಾದವರಿಗೆ ಗೊತ್ತಾಗಲಿಲ್ಲ. ಗೊತ್ತಿದ್ದವರು ಹೇಳಲಿಲ್ಲ.

ಘೋರವಾಡಿಯಲ್ಲಿ ನಿರ್ಧರಿಸಿದಂತೆ ೯ ಮೇ ೧೯೪೮ರಂದು ಮುಂಜಾನೆ ಸೂರ್ಯೋದಯ ಸಮಯದಲ್ಲಿ ರಝಾಕಾರರು ಗೋರಟಾದ ಮೇಲೆ ದಾಳಿ ಮಾಡಲು ನಾಲ್ಕು ಕಡೆಯಿಂದಲೂ ಮುತ್ತಿಗೆ ಹಾಕಿದರು. ಅಂದು ಶಾಲಿವಾಹನ ಶಕೆ ೧೮೭೦ರ ಚೈತ್ರ ಮಾಸ ಕೃಷ್ಣ ಪಕ್ಷ ಅಮವಾಸೆ ಸೂರ್ಯಗ್ರಹಣವಿತ್ತು. ಅದೇ ತಾನೆ ಮುಂಜಾನೆ ಮುಗಿದು ಕರಿ ದಿನ ಬಂದಿತ್ತು. ಜನರು ತಂತಮ್ಮ ಮನೆಗಳನ್ನು ಸ್ವಚ್ಛಗೊಳಸತೊಡಗಿದ್ದರು. ಇನ್ನು ಕೆಲವರು ಅಡುಗೆಯ ಸಿದ್ಧತೆಯಲ್ಲಿದ್ದರು. ರೈತಾಪಿ ಜನಗಳು ಎತ್ತು ದನಕರುಗಳನ್ನು ಬಿಡುತ್ತಿದ್ದರು. ಅಷ್ಟರಲ್ಲಿ ರಝಾಕಾರರು ದಾಳಿ ಮಾಡಲು ಗ್ರಾಮವನ್ನು ಸುತ್ತುವರಿದ ಸುದ್ದಿಯು ಕಾಳ್ಗಿಚ್ಚಿನಂತೆ ಹರಡಿತು. ಜನರು ದಿಗಿಲುಗೊಂಡು ಭಯದಿಂದ ಸಿಕ್ಕ ಕಡೆಗೆ

ಓಡತೊಡಗಿದರು. ಇನ್ನೂ ಕೆಲವರು ಮಾಳಿಗೆಯ ಮೇಲೇರಿ ನೋಡತೊಡಗಿದರು. ಘೋರವಾಡಿಯಿಂದ ತಂಡೋಪತಂಡವಾಗಿ ಬರುತ್ತಿದ್ದ ರಝಾಕಾರರು ಗ್ರಾಮದ ನಾಲ್ಕು ದಿಕ್ಕಿನಲ್ಲಿ ಸುತ್ತುವರೆದರು.

ಇದ್ದಕ್ಕಿದ್ದಂತೆ ಬಂದೆರಗಿದ ಈ ಆಪತ್ತಿನಿಂದ ತಪ್ಪಿಸಿಕೊಳ್ಳಲು ಜನರು ದಿಕ್ಕುಪಾಲಾಗಿ ಓಡತೊಡಗಿದರು. ಎದುರಿಗೆ ಕಾಣಿಸಿದ ದೊಡ್ಡ ದೊಡ್ಡ ಮನೆ, ಮಠ ಮಂದಿರಗಳಲ್ಲಿ ರಕ್ಷಣೆಗಾಗಿ ಸೇರ ತೊಡಗಿದರು. ಮಹಾದೇವನ ಮಂದಿರ, ಹಿರೇಮಠ, ಡುಮಣೆನ ಮನೆ, ವಂಕೆಯವರ ಮನೆಗಳಲ್ಲಿ ಜನರು ಸೇರಿಕೊಳ್ಳತೊಡಗಿದರು. ಹೆಚ್ಚಿನ ಜನರು ಡುಮಣೆಯವರ ಮನೆಯಲ್ಲಿ ಸೇರತೊಡಗಿದರು. ಇದು ಕೋಟೆಯಂತೆ ಗಟ್ಟಿಮುಟ್ಟಾಗಿ ಇದ್ದಿತ್ತು.

ಗ್ರಾಮವನ್ನು ಸುತ್ತುವರೆದ ರಝಾಕಾರರು ಊರ ಕಡೆಗೆ ಗೋಲಿಬಾರ ಮಾಡತೊಡಗಿದರು. ಗೋಲಿಬಾರಗಳ ಶಬ್ದವನ್ನು ಕೇಳಿದ ಜನರು ಸಿಕ್ಕ ಸಿಕ್ಕತ್ತ ಓಡತೊಡಗಿದರು. ರಝಾಕಾರರು ಬಂದಾರೆಂದು ಚೀರತೊಡಗಿದರು. ತಕ್ಷಣದಲ್ಲಿ ಡುಮಣೆಯವರ ಮನೆಯನ್ನು ಸೇರಿದ ದೇಶಪ್ರೇಮಿ ತರುಣರು ಪ್ರತಿದಾಳಿಗೆ ತಯಾರಿ ನಡೆಸಹತ್ತಿದ್ದರು. ಈ ಮೊದಲೇ ಮದ್ದುಗುಂಡುಗಳನ್ನು ತಂದಿಡಲಾಗಿತ್ತು. ಆದರೂ ಶಸ್ತ್ರಾಸ್ತ್ರಗಳು ತೀರ ಕಡಿಮೆ ಇದ್ದವು. ಒಂದೆರಡು ಬಂದೂಕುಗಳು ಮಾತ್ರ ಇದ್ದವು. ನಾಗಪ್ಪ ಹಳೆಂಬರೆ, ಕಾಶೆಪ್ಪಾ ಭಾಲ್ಕೆ, ಸಿದ್ರಾಮಪ್ಪ ಪಟ್ನೆ, ನರಸಪ್ಪ ನಿರೊಡೆ, ಮಹಾರುದ್ರಪ್ಪ ಪಟ್ನೆ, ನರಸಪ್ಪ ಥಮಗಳೆ ಮುಂತಾದ ವೀರಪುರುಷರು ರಝಾಕಾರರ ವಿರುದ್ಧ ಸೆಣಸಾಡಲು ಟೊಂಕಕಟ್ಟಿ ನಿಂತಿದ್ದರು.

ಗ್ರಾಮದ ಪೂರ್ವಕ್ಕೆ ಮುಸಲ್ಮಾನರ ತ್ಯಕ ಎಂಬ ತೋಪು ಇತ್ತು. ಇದರಲ್ಲಿ ದೊಡ್ಡ ದೊಡ್ಡ ಆಲ, ಹುಣಸೆ, ಮಾವಿನ ಮರಗಳಿದ್ದವು. ರಝಾಕಾರರು ಈ ಗಿಡಗಳಲ್ಲಿ ಮರೆಯಾಗಿ ಕುಳಿತು ಊರ ಕಡೆಗೆ ಗೋಲಿಬಾರ ಮಾಡತೊಡಗಿದರು. ಇವರಲ್ಲಿ ಹನುಮಾನ ಮಂದಿರ ಹತ್ತಿರವಿದ್ದ ನಿಜಾಮ ಪೋಲಿಸ ಠಾಣೆಯ ಪೋಲಿಸರು ಸೇರಿಕೊಂಡರು. ಅವರು ಡುಮಣೆಯವರ ಮನೆಯ ಕಡೆಗೆ ಗೋಲಿಬಾರ ಮಾಡತೊಡಗಿದರು. ಪ್ರತಿಯಾಗಿ ನಾಗಪ್ಪ ಹಳೆಂಬರೆ, ಕಾಶೆಪ್ಪ ಭಾಲ್ಕೆ ಮುಂತಾದ ವೀರರು ಬಂದೂಕಿನಿಂದ ಪ್ರತಿದಾಳಿ



ನಡೆಸಹತ್ತಿದ್ದರು. ಇನ್ನು ಕೆಲ ವೀರಪುರುಷರು ತಮ್ಮ ತಮ್ಮ ಮಾಳಿಗೆ ಮೇಲೆ ನಿಂತುಕೊಂಡು ರಝಾಕಾರರಿಗೆ ಕಲ್ಲು ಕಾವಣಿಗಳಿಂದ ಹೊಡೆಯತೊಡಗಿದರು. ನಾವೇನು ಕಡಿಮೆಯೆಂದು ಹೆಣ್ಣುಮಕ್ಕಳೂ ಸಹ ವೀರಗಚ್ಚೆಹಾಕಿಕೊಂಡು ಕಾವಣಿಗೆ ಕಲ್ಲುಗಳನ್ನು ಕೊಡಹತ್ತಿದ್ದರು. ನಡುನಡುವೆ 'ವಂದೇ ಮಾತರಂ', 'ಭಾರತ ಮಾತಾ ಕಿ ಜೈ' ಎಂಬ ಘೋಷಣೆಗಳು ಕೂಗುತ್ತಿದ್ದರು. ಮಧ್ಯಾಹ್ನದವರೆಗೆ ದಾಳಿ ಪ್ರತಿದಾಳಿ ಇದು ಹೀಗೆ ಮುಂದುವರೆದಿತ್ತು. ಈ ಎಲ್ಲಾ ವೀರ ಪುರುಷರ ಪ್ರತಿರೋಧದಿಂದಾಗಿ ಮಧ್ಯಾಹ್ನದವರೆಗೆ ರಝಾಕಾರರು ಎಷ್ಟೇ ಬಲ ಪ್ರಯೋಗಿಸಿದರೂ ಅವರಿಗೆ ಊರ ಒಳಗೆ ಬರಲು ಸಾಧ್ಯವಾಗಲಿಲ್ಲ.

ಇದು ಅಸಾಧ್ಯವೆಂದರಿತ ರಝಾಕಾರರು ಹತಾಶರಾಗಿ ಊರ ಸುತ್ತಲಿದ್ದ ಕಣಕಿ, ಹೊಟ್ಟಿನ ಬಣವಿ, ಕುಳಭಾನ್, ಬೇಲಿ, ತಿಪ್ಪೆ ಗುಂಡಿ ಮುಂತಾದವುಗಳಿಗೆ ಬೆಂಕಿ ಹಚ್ಚತೊಡಗಿದರು. ಬಿರು ಬೇಸಿಗೆ ಇದ್ದರಿಂದ ಇವೆಲ್ಲ ಬೆಂಕಿ ಹೊತ್ತಿಕೊಂಡು ಧಗಧಗ ಉರಿಯತೊಡಗಿದವು. ಎತ್ತರೆತ್ತರಕ್ಕೆ ಬೆಂಕಿಯ ಜ್ವಾಲೆಗಳು ಏಳತೊಡಗಿದ್ದವು. ದಟ್ಟವಾದ ಹೊಗೆ ಆವರಿಸಿತು. ಊರ ತುಂಬೆಲ್ಲ ದಟ್ಟವಾದ ಹೊಗೆಯು ತುಂಬಿಕೊಂಡಿತು. ಈ ಹೊಗೆಯ ಸಹಾಯದಿಂದ ರಝಾಕಾರರು ಊರೊಗಳಗೆ ಬಂದರು.

ಹಿರೇಮಠದ ಮಾಳಿಗೆಯ ಮೇಲಿಂದ ರಾಚೋಟಿ ಸ್ವಾಮಿ, ಹಾವಗೆಪ್ಪ ರಾಜೋಳೆ ಮುಂತಾದವರು ಕಣಕಿ ಭಣವಿ, ಬೇಲಿಗಳಿಗೆ ಬೆಂಕಿ ಹಚ್ಚುತ್ತಿದ್ದ ಪುಂಡ ರಝಾಕಾರರಿಗೆ ಕಲ್ಲಿನಿಂದ ಹೊಡೆಯುತ್ತಿದ್ದರು. ಬೆಂಕಿ ಜ್ವಾಲೆಗಳು, ಹೊಗೆ ದೊಡ್ಡದಾಗಿ ಮೇಲೆದ್ದು ಆವರಿಸಿದ್ದರಿಂದ ಅವರೆಲ್ಲ ಕೆಳಗಿಳಿದು ಬಂದರು. ಕೂಡಲೇ ರಝಾಕಾರರು ಹಿರೇಮಠದ ಮುಂದೆ ಬಂದು ಬಾಗಿಲ ತೆರೆಯುವಂತೆ ಬಡಿಯ ಹತ್ತಿದ್ದರು. ಬಾಗಿಲ ತೆರೆಯಲು ಮುಂದೆ ಬಂದ ರಾಚೋಟಿ ಸ್ವಾಮಿಯನ್ನು ಒಳಗಿದ್ದವರು ತಡೆದು ನಿಲ್ಲಿಸಿದರು. ಎಷ್ಟೋ ಹೊತ್ತು ಹಾಗೆಯೇ ರಝಾಕಾರರು ಬಾಗಿಲನ್ನು ತೆರೆಯುವಂತೆ ಬಡಿಯತ್ತಿದ್ದರು. ಬಾಗಿಲು ತೆಗೆಯದಿದ್ದುದರಿಂದ ರಝಾಕಾರರು ವಾಪಸ್ಸು ಹೋದರು. ಸ್ವಲ್ಪ ಹೊತ್ತು ಬಿಟ್ಟು ಮತ್ತೆ ಬಂದ ಬಾಗಿಲ ಬಡೆಯಹತ್ತಿದ್ದರು.

ಈಗವರು ಎಮ್ಮಿ ಮಸ್ತಾನನ್ನು ಕರೆದುಕೊಂಡು ಬಂದಿದ್ದರು. ಈ ಎಮ್ಮಿ ಮಸ್ತಾನನು ಈ ಹಿಂದೆ ಸ್ವಾಮಿ ಅವರ ಮನೆಯಲ್ಲಿ ಅನೇಕ ವರ್ಷ ದನಗಳನ್ನು ಕಾಯುವ ಕೆಲಸ ಮಾಡುತ್ತಿದ್ದನು. ಇವನನ್ನು ಮುಂದೆ ಮಾಡಿ ಮೋಸದಿಂದ ಬಾಗಿಲ ತೆರೆಯಿಸಿ ರಾಚೋಟಿ ಸ್ವಾಮಿಯವರನ್ನು ಕೊಂದು ಹಾಕುವ ಸಂಚು ರೂಪಿಸಿದ್ದರು. ಎಮ್ಮಿ ಮಸ್ತಾನ ಬಾಗಿಲ ಬಳಿ ಬಂದು ಯಪ್ಪಾ! ರಾಚಯ್ಯ ಸ್ವಾಮಿ! ನಾನು ಎಮ್ಮಿ ಮಸ್ತಾನ್ ಇದ್ದಿನ್ರೀ, ಅವ್ವೋರು ನಿಮಗೆ ಕರಕೊಂಡು ಬರಲಿಕ್ಕ ಕಳಸ್ಯಾರ್, ಅದಕ್ಕ ನಾ ಬಂದೀನಿ! ಜಲ್ದಿ ಬರ್ರೀ ಹೋಗರಿ! ಎಂದು ಬಾಗಿಲ ಬಡೆಯ ತೊಡಗಿದನು. ಆದಾಗ್ಯೂ ಒಳಗಿದ್ದ ರಾಚೋಟಿ ಸ್ವಾಮಿ ಸುಮ್ಮನೇ ಕುಂತಿದ್ದರು. ಎಮ್ಮಿ ಮಸ್ತಾನ ರಾಚೋಟಿ ಸ್ವಾಮಿ, ಯಪ್ಪಾ! ಸ್ವಾಮಿ ಬಾಗಿಲ ತೆಗಿರೆಂದು ಪದೇ ಪದೇ ಬಡಿಯುತ್ತಲೇ ಇದ್ದನು. ರಾಚೋಟಿ ಸ್ವಾಮಿಯವರಿಗೆ ಎಮ್ಮಿ ಮಸ್ತಾನನ ಧ್ವನಿ ಕೇಳಿ ವಿಶ್ವಾಸ ಮಾಡುವಂತಾಯಿತು. ಅವರು ಬಾಗಿಲ ತೆಗೆಯಲು ಮುಂದೆ ಬಂದರು. ಒಳಗಿದ್ದವರು ಬೇಡವೆಂದು ತಡೆದರು. ಮತ್ತೆ ಮಸ್ತಾನ್ ಬಾಗಿಲ ಬಡಿಯಹತ್ತಿದ್ದನು. ಬೇಡ ಬೇಡವೆಂದರೂ ಮಸ್ತಾನ್‌ನ ಮಾತಿಗೆ ವಿಶ್ವಾಸ ಮಾಡಿದ ರಾಚೋಟಿ ಸ್ವಾಮಿ ಎದ್ದು ಬಾಗಿಲ ತೆರೆದರು.

ಬಾಗಿಲ ತೆರೆಯುತ್ತಿದ್ದಂತೆ ರಝಾಕಾರರು ಸ್ವಾಮಿಯವರ ಹೊಟ್ಟೆಯೊಳಗೆ ತಲ್ವಾರ್‌ನಿಂದ ಇರಿದರು. ಇರಿದ ರಭಸಕ್ಕೆ ತಲ್ವಾರ್ ಹೊಟ್ಟೆಯೊಳಗಿಂದ ಬೆನ್ನು ಸೀಳಿಕೊಂಡು ಆಚೆ ಬಂದಿತು. ಒಮ್ಮೆಲೆ ರಾಚೋಟಿ ಸ್ವಾಮಿ 'ವಂದೇ ಮಾತರಂ', 'ವಂದೇ ಮಾತರಂ' ಎಂದೆನ್ನುತ್ತ ನೆಲಕ್ಕೆ ಕುಸಿದು ಬಿದ್ದರು. ಅವರ ಮೇಲೆ ಮುಗಿಬಿದ್ದ ರಝಾಕಾರರು ತಲ್ವಾರ್‌ನಿಂದ ಮನ ಬಂದಂತೆ ಪ್ರಹಾರ ಮಾಡಿದರು. ರಾಚೋಟಿ ಸ್ವಾಮಿ ಎಷ್ಟು ಸಾರಿ 'ವಂದೇ ಮಾತರಂ' ಎನ್ನುತ್ತಿದ್ದರೋ ಅಷ್ಟು ಸಲ ರಝಾಕಾರರು ಅವರನ್ನು ತಲ್ವಾರ್‌ನಿಂದ ಹೊಡೆಯುತ್ತಿದ್ದರು. ಕೊನೆಯಲ್ಲಿ 'ವಂದೇ ಮಾತರಂ' ಎನ್ನುತ್ತಲೇ ರಾಚೋಟಿ ಸ್ವಾಮಿಯವರು ಪ್ರಾಣವನ್ನು ಬಿಟ್ಟರು. 'ವಂದೇ ಮಾತರಂ' ಹಾಡುವುದನ್ನೇ ತಮ್ಮ ಉಸಿರಾಗಿರಿಸಿಕೊಂಡಿದ್ದ ರಾಚೋಟಿ ಸ್ವಾಮಿಯವರು ತಮ್ಮ ವಿಧವೆ ತಾಯಿ ಸಿದ್ದವ್ವ ಶರಣಯ್ಯ ಸ್ವಾಮಿ ಅವರಿಗೆ ಏಕೈಕ ಸುಪುತ್ರರಾಗಿದ್ದರು. ರಾಚೋಟಿ ಸ್ವಾಮಿ ಶವವನ್ನು



ಪರಖಾನೆಯಲ್ಲಿ ಎಳೆದುಹಾಕಿ ಮೇಲೆ ಹುಲ್ಲು ಹಾಕಿ ರಝಾಕಾರರು ಬೆಂಕಿ ಹಚ್ಚಿದರು.

ಹಿರೇಮಠದೊಳಗಿದ್ದ ಹಾವಗೆಪ್ಪಾ ರಾಜೋಳೆ ಮುಂತಾದವರಿಗೂ ರಝಾಕಾರರು ಮನಬಂದಂತೆ ಹೊಡೆದರು. ಚಾಕುವಿನಿಂದ ತಿವಿದರು. ಮೂರ್ಛೆ ಹೋದ ಹಾವಗೆಪ್ಪ ಸತ್ತನೆಂದು ಅಲ್ಲೆ ಬಿಟ್ಟರು. ಸ್ವಲ್ಪ ಹೊತ್ತಿನ ನಂತರ ಪ್ರಜ್ಞೆ ಬಂದು ಬದುಕುಳಿದರು. ರಾಚೋಟಿ ಸ್ವಾಮಿ ಪ್ರಕಾಂಡ ಪಂಡಿತರಾಗಿದ್ದರು. ದೇಶದ ಸ್ವಾತಂತ್ರಕ್ಕಾಗಿ ಬಲಿದಾನರಾದರು. ಹುತಾತ್ಮ ರಾಚೋಟಿ ಸ್ವಾಮಿ ಕಗ್ಗೊಲೆಯಾಗಿದ್ದುದು ತಾಯಿ ಸಿದ್ದವ್ವಳಿಗೆ ಎರಡ್ಮೂರು ದಿನಗಳ ನಂತರ ಗೊತ್ತಾಯಿತು. ಶವವನ್ನು ನೋಡಿ ತಾಯಿ ಸಿದ್ದವ್ವ ದುಃಖ ತಡೆಯಲಾರದೇ ನೆಲಕ್ಕೆ ಕಡಕೊಂಡು ಬಿದ್ದಳು. ಬೋರಾಡಿ ಅತ್ತಳು. ಇದ್ದೊಬ್ಬ ಮಗನನ್ನು ಕಳೆದುಕೊಂಡು ದುಃಖಾಗ್ನಿಯಲ್ಲಿ ಬೆಂದು ಹೋದಳು. ಹೀರೇಮಠದ ಹಿತ್ತಲಲ್ಲಿ ರಾಚೋಟಿ ಸ್ವಾಮಿಯವರ ಅಂತ್ಯಸಂಸ್ಕಾರವನ್ನು ನೆರವೇರಿತು. ಮೊದಲ ಹುತಾತ್ಮರೆನಿಸಿದ ರಾಚೋಟಿಸ್ವಾಮಿಯನ್ನು ಕಳೆದುಕೊಂಡು ಸಾಂಸ್ಕೃತಿಕ ಲೋಕ ಬಡವಾಯಿತು. ಇತ್ತ ಹೊಲದಿಂದ ಮನೆಯ ಕಡೆ ಬರುತ್ತಿದ್ದ ಶಿವಪ್ಪ ಶಾಂತಪ್ಪ ನಿಂಬಾಯಿಯನ್ನು ಗಾಡಿ ಅಡ್ಡಗಟ್ಟಿ ಹಿಡಿದ ರಝಾಕಾರರು ಗುಂಡಿಟ್ಟು ಕೊಂದರು. ಕಾಲಿಗೆ ಹಗ್ಗಕಟ್ಟಿ ಎಳೆದೊಯ್ದು ಕಣಕಿ ಬಣವಿಯಲ್ಲಿ ಹಾಕಿ ಬೆಂಕಿ ಹಚ್ಚಿದರು.

ಮಾರ್ತೆಪ್ಪ ಕೋಣೆ ರಝಾಕಾರರು ಬಂದ ಸುದ್ದಿ ಕೇಳಿ ಗಾಬರಿಯಿಂದ ಡುಮಣೆನ ಮನೆಯಲ್ಲಿ ಸೇರಿಕೊಳ್ಳಬೇಕೆಂದು ಮಾಳಿಗೆಯಿಂದ ಮಾಳಿಗೆಗೆ ಹತ್ತಿ ಹೋಗುವಾಗ ರಝಾಕಾರರು ಹೊಡೆದ ಬಂದೂಕು ಗೋಲಿ ತಗುಲಿ ಸಾವನ್ನಪ್ಪಿದರು. ಮಾಳಿಗೆ ಮೇಲಿಂದ ಬಿದ್ದ ಶವವನ್ನು ಎಳೆದು ತಂದು ಡುಮಣೆ ಅವರ ಮನೆಯಲ್ಲಿ ಹಾಕಿದರು. ಜೀವ ಕೈಯಲ್ಲಿ ಹಿಡಿದುಕೊಂಡು ರಕ್ಷಣೆಗಾಗಿ ಡುಮಣೆನವರ ಮನೆಯ ಕಡೆಗೆ ಓಡೋಡಿ ಬರುತ್ತಿದ್ದ ಮಲಶೆಟ್ಟೆಪ್ಪ ಶಿವಲಿಂಗಪ್ಪ ಜಗಶೆಟ್ಟಿ ಇವರಿಗೆ ರಝಾಕಾರರು ಬಿಟ್ಟ ಗೋಲಿ ತಗುಲಿ ಪ್ರಾಣ ಬಿಟ್ಟರು. ಶವವನ್ನು ಡುಮಣೆನ ಮನೆಯೊಳಗೆ ತಂದು ಹಾಕಿದರು.

ಮನೆಯಲ್ಲಿ ಅಡಗಿ ಕುಳಿತಿದ್ದ ಶಿವಪ್ಪ ಬೀರಪ್ಪ ಮೇತ್ರೆ ಅವರ ಮನೆಗೆ

ದಾಳಿಯಿಟ್ಟ ರಝಾಕಾರರು ಅವನನ್ನ ಹೊಡೆಯ ತೊಡಗಿದರು. ನನ್ನ ಹೊಡೆಯಬೇಡಿರೆಂದರು. ಕರುಣೆಬಾರದ ರಝಾಕಾರ ಬೆಳ್ಳಿ ಬಂಗಾರವನ್ನು ಕಸಿದುಕೊಂಡು ಗುಂಡಿಟ್ಟು ಕೊಂದುಹಾಕಿ ಬೆಂಕಿ ಹಚ್ಚಿದರು. ಸಾತ್ವಿಕ ಜೀವಿ ದೂಳಪ್ಪ ಶಿವಪ್ಪ ಕಣಜೆ ರಝಾಕಾರರು ಬಂದು ನನಗೇನು ಮಾಡುವರು? ಮನೆಯೊಳಗಿರುವ ಬೆಳ್ಳಿ ಬಂಗಾರ ಹಣ ಕೊಂಡೊಯ್ಯುವರಷ್ಟೇ! ನನಗೇನು ಮಾಡುವರೆಂದು ಮನೆಯಲ್ಲಿಯೇ ಕುಳಿತುಕೊಂಡಿದ್ದರು. ಮನೆಗೆ ನುಗ್ಗಿದ ರಝಾಕಾರರನ್ನು, ಮನೆ ಖುಲ್ಲಾ ಇದೆ ಏನೂ ಬೇಕಾದರೂ ಒಯ್ಯಿರೆಂದು ಧೂಳಪ್ಪ ಹೇಳಿದರು. ಮನೆಯನ್ನು ಕೊಳ್ಳೆ ಹೊಡೆದ ರಝಾಕಾರರು ಬರುವಾಗ ಧೂಳಪ್ಪನನ್ನು ಹೊಡೆಯಹತ್ತಿದ್ದರು. ಹೊಡಿಯಬೇಡಿರೆಂದು ಧೂಳಪ್ಪ ಗೋಳ್ಯಾಡಿ ಅತ್ತು ಕರೆದು ಅಂಗಲಾಚಿದರೂ ಬಿಡದ ರಝಾಕಾರರು ಧೂಳಪ್ಪನನ್ನು ಗುಂಡಿಕ್ಕಿ ಕೊಂದು ಹಾಕಿದರು. ಮನೆಯಲ್ಲಿಯೇ ಬೆಂಕಿ ಹಚ್ಚಿ ಸುಟ್ಟು ಹಾಕಿದರು.

ಗುರಪ್ಪ ಶಿವಪ್ಪ ಕಣಜೆ ದೊಡ್ಡ ಒಕ್ಕಲಿಗರು. ಗೋರಖನಾಥ ದೇವರ ಅನನ್ಯ ಭಕ್ತ. ದಾನ ಧರ್ಮ ಪರೋಪಕಾರ ಜೀವಿ. ಬಡ ಬಗ್ಗರಿಗೆ ಹಿಂದೂ ಮುಸ್ಲಿಂರೆನ್ನದೇ ಎಲ್ಲರಿಗೂ ಬೇಡಿ ಬಂದವರಿಗೆ ದವಸ ಧಾನ್ಯಗಳನ್ನು ನೀಡುತ್ತಿದ್ದ ಉದಾರಿ ಬಡವರ ಬಂಧು. ಇಂತಹ ಸಂಭಾವಿತ ಮನುಷ್ಯ ಗುರಪ್ಪ ಕಣಜೆ ಅವರ ಮನೆಹೊಕ್ಕ ರಝಾಕಾರರು ಮನೆಯನ್ನು ದೋಚಿ ಅವರನ್ನು ಕೊಂದು ಹಾಕಿ ಮಹಡಿಯಲ್ಲಿ ಬೆಂಕಿ ಹಚ್ಚಿದರು. ಸಾಧು ಸಂತರಂತೆ ಸದಾಕಾಲ ಏಕತಾರಿ ಹಿಡಿದು ಭಜನೆಗಳಲ್ಲಿ ಹಾಡುತ್ತಿದ್ದ ಶರಣ ಜೀವಿ ಎನಿಸಿದ ಭೀಮಣ್ಣ ಮಾದಪ್ಪ ರಾಜೋಳೆ ಅವರ ಮನೆ ಹೊಕ್ಕ ರಝಾಕಾರರು ಮನಬಂದಂತೆ ಹೊಡೆದು ಕೊಂದು ಹಾಕಿದರು. ಇವರ ಪಕ್ಕದ ಮನೆಯಲ್ಲಿದ್ದ ಇವರ ಅಣ್ಣ ಬಸಪ್ಪ ಚೆನ್ನಪ್ಪ ರಾಜೋಳೆ ಸೀದಾ ಸಾದಾ ಮುಗ್ಧ ಸ್ವಭಾವದ ಬಡರೈತನು. ಇವನನ್ನು ರಝಾಕಾರರು ಹೊಡಿ ಬಡಿ ಮಾಡಹತ್ತಿದ್ದರು. ಕೈ ಕಾಲಿಗೆ ಬಿದ್ದು ಬೇಡಿಕೊಂಡರು. ಬಿಡದ ರಝಾಕಾರರು ಬಸಪ್ಪನನ್ನು ಜಂಬೆ ಇರಿದು ಹೊಂದು ಹಾಕಿದರು. ಶವವನ್ನು ತಮ್ಮನ ಶವದತ್ತ ಎಳೆದು ಬಿಸಾಕಿ ಎರಡೂ ಶವಗಳಿಗೆ ಬೆಂಕಿ ಹಚ್ಚಿದರು.

ಶರಣಪ್ಪ ಸಂಗಪ್ಪ ಕನಕಟ್ಟೆ, ಆಜಾನು ಬಾಹು ಹೊಂದಿದ್ದ ವ್ಯಕ್ತಿ. ನಾಲ್ಕಾರು



ಜನರು ಮೈಮೇಲೆ ಬಿದ್ದರೂ ಅವರನ್ನು ಹಣ್ಣು ಗಾಯ ನೀರು ಗಾಯ ಮಾಡಿಬಿಡುವ ವ್ಯಕ್ತಿ. ರಜಾಕಾರರ ಕಣ್ಣು ತಪ್ಪಿಸಿ ಎಲ್ಲಾದರೂ ಅಡಗಿಕೊಂಡು ಕುಳಿತು ಬಿಡೋಣವೆಂದು ಸರ ಸರ ನಡೆದಿದ್ದ ಶರಣಪ್ಪಗೆ ಹಿಂದಿನಿಂದ ಬಂದ ರಝಾಕಾರರು ಗುಂಡು ಹೊಡೆದಾಗ ನೆಲಕ್ಕೆ ಬಿದ್ದನು. ಇನ್ನೂ ಜೀವವಿತ್ತು. ಅವನ ಕಾಲಿಗೆ ರುಮಾಲು ಕಟ್ಟಿ ದರದರನೇ ಎಳೆದೊಯ್ದು ಮೊಕ್ತೆದಾರರ ಹೊಲದ ಗುಡಿಸಲಲ್ಲಿ ಹಾಕಿ ಗುಡಿಸಲಿಗೆ ಬೆಂಕಿ ಹಚ್ಚಿ ಹೋದರು.

ಶ್ಯಾಮರಾವ ಮಾಣಿಕಪ್ಪ ಪಟ್ನೆ ತಮ್ಮ ಮನೆಯಿಂದ ಇಳಿದು ಬಂದು ಎಲ್ಲಿಗಾದರೂ ಓಡಿ ಹೋಗೋಣವೆಂದು ಓಡ ಹತ್ತಿದನು. ಹಿಂದಿನಿಂದ ಬಂದ ರಝಾಕಾರರು, ಗುಂಡು ಹೊಡೆದರು. ಶ್ಯಾಮರಾವ ಅಲ್ಲಿ ಕುಸಿದು ನೆಲಕ್ಕೆ ಬಿದ್ದಾಗ ಆತನ ಪ್ರಾಣ ಪಕ್ಷಿ ಹಾರಿ ಹೋಗಿತ್ತು. ಅಲ್ಲಿಯೇ ಸಮೀಪದಲ್ಲಿದ್ದ ಕುಳಬಾನಕ್ಕೆ ಬೆಂಕಿ ಹಚ್ಚಿದ ರಝಾಕಾರರು ಅದರಲ್ಲಿ ಶವವನ್ನು ಬಿಸಾಕಿ ಹೋದರು.

ರಾಮರಾವ ಕುಲಕರ್ಣಿ ಗ್ರಾಮದ ಗಣ್ಯ ಪಂಡಿತರಾಗಿದ್ದರು. ಸದಾಚಾರ ಸಂಪನ್ನರು. ವಿದ್ಯಾವಂತರಾಗಿದ್ದ ಇವರು ಮರಾಠಿ, ಹಿಂದಿ, ಉರ್ದು, ಇಂಗ್ಲೀಷ್ ಮತ್ತು ಕನ್ನಡ ಮುಂತಾದ ಭಾಷೆಗಳನ್ನು ಬಲ್ಲವರಾಗಿದ್ದರು. ಗ್ರಾಮದಲ್ಲಿ ಶಾಲೆ ನಡೆಸುತ್ತಿದ್ದರು. ಅವರ ಗರಡಿಯಲ್ಲಿ ಶಿಕ್ಷಣ ಪಡೆದವರು ದೊಡ್ಡ ದೊಡ್ಡ ಹುದ್ದೆಯಲ್ಲಿದ್ದರು. ಲೋಕನಾಯಕ ಭೀಮಣ್ಣ ಖಂಡ್ರೆ, ಬಾಬುರಾವ ಹೊನ್ನಳ್ಳಿ, ಹಣುಮಂತರಾವ ಗೌಡಗಾಂವ ಮುಂತಾದ ಹೆಸರಾಂತ ವಕೀಲರು ಇವರ ಹತ್ತಿರ ಶಿಕ್ಷಣ ಪಡೆದವರಾಗಿದ್ದರು. ಬಿ.ಎ. ಪದವಿಧರರಾಗಿದ್ದರೂ ದೊಡ್ಡ ಬೇಸಾಯಗಾರರಾಗಿದ್ದರು. ಇಂತಹ ಘನವ್ಯಕ್ತಿತ್ವ ಹೊಂದಿದ್ದ ರಾಮರಾವ ಕುಲಕರ್ಣಿ ಅವರ ಮನೆಯ ಮೇಲೆ ರಝಾಕಾರರು ಎರಗಿದರು. ಕುಲಕರ್ಣಿ ಅವರ ಮೇಲೆ ಪ್ರಹಾರ ಮಾಡಿದರು. ಎಳೆದುಕೊಂಡು ಹೋಗುವಾಗ ಗಾಬರಿಯಾಗಿ ನೆಲಕ್ಕೆ ಬಿದ್ದರು. ಕಾಲಿಗೆ ಹಗ್ಗವನ್ನು ಕಟ್ಟಿ ಎಳೆದೊಯ್ದು ಕುಳಬಾನಕ್ಕೆ ಬೆಂಕಿಹಚ್ಚಿ ಅದರಲ್ಲಿ ಹಾಕಿ ಹೋದರು. 'ದೇಶ ಸೇವೆಯ ಖಣಿ ಮಾತೃಭೂಮಿಗೆ ಧಣಿ'ಯಾಗಿದ್ದ ಕುಲಕರ್ಣಿಯವರನ್ನು ನಿರ್ದಯವಾಗಿ ಮುಗಿಸಿದರು.

ನಾರಾಯಣರಾವ ಮಾಣಿಕರಾವ ಮುಕ್ತೇದಾರ ನ್ಯಾಯವಾದಿಗಳಾಗಿದ್ದರು. ಲಕ್ಷ್ಮಿಗುಡಿಯ ಹತ್ತಿರ ಇವರ ದೊಡ್ಡ ಮನೆ ಇತ್ತು. ನೌಕರ್ ಕರ್ಜ್‌ನಾಮಾ ಇತ್ಯಾದಿ ಕಾಗದ ಪತ್ರಗಳನ್ನು ಬರೆದು ಕೊಡುತ್ತಿದ್ದ ವಿದ್ಯಾವಂತರಾಗಿದ್ದರು. ಲಕ್ಷ್ಮಿಮಂದಿರದ ನಂದಾದೀವಿಗೆ ನಡೆಸುತ್ತಿದ್ದರು. ಕಾಗದ ಪತ್ರಗಳನ್ನು ಬರೆದು ಕೊಟ್ಟ ರೈತರಿಂದ ಒಂದು ರೂಪಾಯಿಯನ್ನು ಪಡೆದು ಅದನ್ನು ನಂದಾದೀಪ ಸೇವೆಗೆ ಸಲಿಸುತ್ತಿದ್ದರು. ಬಡವರ ತಂದೆಯಾಗಿದ್ದರು. ಮುಸ್ಲಿಂರು ಇವರ ಮೇಲೆ ಗೌರವನ್ನು ಹೊಂದಿದ್ದರು. ಇಂತಹ ಬಡವರ ಬಂಧು ನಾರಾಯಣರಾವ ಮೊಕ್ತೇದಾರರನ್ನು ರಜಾಕಾರರು ಗುಂಡಿಕ್ಕಿ ಕೊಂದು ಬೆಂಕಿಯಲ್ಲಿ ಹಾಕಿದರು.

ಬಸಪ್ಪ ಅಮೃತಪ್ಪ ಮಾಲಿಪಾಟೀಲ ಸದ್ಗುಣಿಗಳು, ದಯಾಪರರು, ಊರಲ್ಲಿ ಬಡ ಬಗ್ಗರ ಬಗ್ಗೆ ಕಾಳಜಿವುಳ್ಳವರಾಗಿದ್ದರು. ಎಲ್ಲರೊಂದಿಗೆ ಗೌರವದಿಂದಿದ್ದರು. ಊರಲ್ಲಿಯ ಮುಸ್ಲಿಮರು ಸಹ ಇವರೊಂದಿಗೆ ಗೌರವದಿಂದಿದ್ದರು. ಉರ್ದು ಮತ್ತು ಮೋಡಿ ಬರಹಗಳನ್ನು ಬಲ್ಲವರಾಗಿದ್ದರು. ಇವರನ್ನು ರಝಾಕಾರರು ಹಿಡಿದು ತಂದು ಲಕ್ಷ್ಮೀ ಗುಡಿಯ ಮುಂದೆ ಹೊಡೆಯತೊಡಗಿದರು. ಪಾಟೀಲರು ನನ್ನನ್ನು ಹೊಡೆಯಬೇಡಿರಿ ನಾನು ಯಾರಿಗೂ ಅನ್ಯಾಯ ಮಾಡಿಲ್ಲ ಎಂದು ಗೊಗರೆದರೂ ಕೇಳದ ರಝಾಕಾರರು ಅವರನ್ನು ತಲವಾರ್‌ನಿಂದ ಹೊಡೆಯಹತ್ತಿದರು. ಎರಡ್ಮೂರು ಸಲ ಹೊಡೆದರೂ ಅವರು ಸಾಯಲಿಲ್ಲ. ಅವರಲ್ಲಿದ್ದ ಊರಿನ ರಝಾಕಾರನೊಬ್ಬನು 'ಈ ಗೌಡ ಭೂಸುಣಿಕ ಮುತ್ಯಾನ ಶಿಷ್ಯ. ಮಂತ್ರ ತಂತ್ರ ಬಲ್ಲವನು. ಅದಕ್ಕಾಗಿ ಅವನ ರಟ್ಟೆಯಲ್ಲಿ ಒಂದು ಕಡಗವಿದೆ. ಅದನ್ನು ತೆಗೆಯಿರಿ ಎಂದು ಹೇಳಿದನು. ಆ ಕಡಗವನ್ನು ತೆಗೆದು ತಲವಾರ್‌ನಿಂದ ಒಂದು ಏಟು ಕೊಟ್ಟಾಗ ಬಸಪ್ಪ ಮಾಲಿಪಾಟೀಲ ಜೈಲಕ್ಷ್ಮೀ ಮಾತಾ ಎನ್ನುತ್ತ ಪ್ರಾಣ ಬಿಟ್ಟರು. ಅಲ್ಲಿಯೇ ಅವರನ್ನು ಬೆಂಕಿಯಲ್ಲಿ ಹಾಕಿದರು.

ಮಾಲಿಗೌಡ ಸಿಕ್ಕ ಇನ್ನು ಪೋಲೀಸ್ ಗೌಡ ಎಲ್ಲಿ ಎಂದು ರಝಾಕಾರರು ಪೋಲಿಸ್‌ಗೌಡರ ಮನೆಯೊಳಗೆ ಹೊಕ್ಕರು. ಮನೆ ತುಂಬ ಹೆಣ್ಣುಮಕ್ಕಳು ಕಿಕ್ಕಿರಿದು ತುಂಬಿದ್ದರು. ರಝಾಕಾರರು ಬರುವುದನ್ನು ನೋಡಿ ಎಲ್ಲರೂ ಗಾಬರಿಗೊಂಡರು. ರಝಾಕಾರರು ಗೌಡ ಎಲ್ಲಿ ಎಂದು ಗದರಿಸಿದರು. ಬಸಪ್ಪ



ಭೀಮರಾವ ಪೋಲಿಸ್ ಪಾಟೀಲ ಸೀರಿ ಉಟ್ಟುಕೊಂಡು ಹೆಣ್ಣುಮಕ್ಕಳಲ್ಲಿ ಅಡಗಿ ಕುಳಿತಿದ್ದರು. ರಝಾಕಾರರು ಎಲ್ಲ ಹೆಣ್ಣುಮಕ್ಕಳ ಕೊರಳಲ್ಲಿರುವ ಬಂಗಾರವನ್ನು ಕಡಿದುಕೊಳ್ಳುವಾಗ ಗೌಡರನ್ನು ಗುರುತಿಸಿ ಹಿಡಿದೆಳೆದು ಜೋರಾಗಿ ಹೊಡೆದರು. ಇವರ ಸಹೋದರ ಅಣಿರುದ್ರಪ್ಪ ಗೌಡರನ್ನು ಪತ್ತೆ ಹಚ್ಚಿದ ರಝಾಕಾರರು ಹೊಡೆದು ಇಬ್ಬರು ಸಹೋದರನ್ನು ಎಳೆದುಕೊಂಡು ನಡೆದರು. ಗೌಡರ ತಾಯಿ ಗ್ಯಾನಮ್ಮ ಗೌಡತಿಯು ರಝಾಕಾರರ ಕಾಲಿನ ಮೇಲೆ ಬಿದ್ದ ನನ್ನ ಮಕ್ಕಳನ್ನು ಬಿಟ್ಟು ಬಿಡಿರಿ. ಅವರು ಯಾವ ತಪ್ಪು ಮಾಡಿಲ್ಲ ಎಂದು ಅಳುತ್ತ ದುಃಖದಿಂದ ಅಂಗಲಾಚಿ ಬೇಡಿಕೊಂಡರು. ಅವರು ಬಿಡಲಿಲ್ಲ. ಎದ್ದು ಮನೆಯೊಳಗೆ ಹೋಗಿ ನಲವತ್ತು ತೊಲಿಯ ಬಂಗಾರದ ಗಂಟನ್ನು ತಂದು ಅಳುತ್ತ ರಝಾಕಾರರ ಕೈಗಿತ್ತು ಮಕ್ಕಳನ್ನು ಬಿಟ್ಟು ಬಿಡಿರೆಂದು ಮತ್ತೆ ಕಾಲಿಗೆ ಬಿದ್ದು ಅಂಗಲಾಚಿದರೂ ಅವರು ಬಿಡಲಿಲ್ಲ. ಬಂಗಾರದ ಗಂಟನ್ನು ತೆಗೆದುಕೊಂಡ ರಝಾಕಾರರು ಬಸಪ್ಪ ಮತ್ತು ಅಣಿರುದ್ರಪ್ಪ ಇಬ್ಬರೂ ಸಹೋದರರನ್ನು ಬಿಟ್ಟು ಬಿಡದೇ ಅವರ ಕಾಲುಗಳನ್ನು ಹಿಡಿದುಕೊಂಡು ದನಗಳನ್ನು ಎಳೆದುಕೊಂಡು ಹೋಗುವಂತೆ ದರದರನೇ ಎಳೆದುಕೊಂಡು ಲಕ್ಷ್ಮಿ ಗುಡಿಯ ಕಡೆಗೆ ನಡೆದರು. ತಾಯಿ ಗ್ಯಾನವ್ವ ಗೌಡತಿ ಎದೆಬಡೆದುಕೊಂಡು ಬೋರ್ಯಾಡಿ ಅತ್ತಳು. ಎಲ್ಲಾ ಪರಿವಾರದವರು ಹೆಣ್ಣುಮಕ್ಕಳು ಜೋರಾಗಿ ಅಳತೊಡಗಿದರು. ಅವರ ಆಕ್ರಂದನ ಮುಗಿಲು ಮುಟ್ಟಿತ್ತು. ಬಸಪ್ಪ ಮತ್ತು ಅಣಿರುದ್ರಪ್ಪ ಪಾಟೀಲ ಸಹೋದರನ್ನು ಲಕ್ಷ್ಮಿ ಗುಡಿಯ ಮುಂದೆ ಎಳೆತಂದು ಲಕ್ಷ್ಮಿ ಕಾರ್ಯದಲ್ಲಿ ಕೋಣಗಳನ್ನು ಕಡಿಯುವಂತೆ ಇಬ್ಬರನ್ನು ತಲ್ವಾರ್‌ನಿಂದ ಕತ್ತರಿಸಿ ಹಾಕಿದರು. ಅವರ ರಕ್ತವನ್ನು ಲಕ್ಷ್ಮಿಯ ಗುಡಿಯ ಮೇಲೆ ಚೆಲ್ಲಾಡಿದರು. ಅಷ್ಟೇ ಅಲ್ಲಾ! ಗುಡಿಯ ಗೋಡೆಯ ಮೇಲೆ ಆ ರಕ್ತದಿಂದ 'ಪಾಕಿಸ್ಥಾನ ಜಿಂದಾಬಾದ ರಝಾಕಾರ ಜಿಂದಾಬಾದ ಘಸ್ತ್‌ಕೋಮ ಜಿಂದಾಬಾದ' ಎಂದು ಬರೆದು ಶವಗಳಿಗೆ ಬೆಂಕಿ ಹಚ್ಚಿದರು.

ರಝಾಕಾರರು ಕೈಗೆ ಸಿಕ್ಕವರನ್ನು ಕೊಂದು ಹಾಕುತ್ತಿದ್ದರಲ್ಲವೇ ಹೆಣ್ಣುಮಕ್ಕಳನ್ನು ಹಿಂಸಿಸಿ ಅತ್ಯಾಚಾರ ಎಸಗುತ್ತಿದ್ದರು. ಬ್ರಾಹ್ಮಣ ಸುಸಂಸ್ಕೃತ ಆಚಾರವಂತರಾಗಿದ್ದ ರಾಮಭಟ್ಟಜೀ ಅವರ ಮನೆಯನ್ನು ಹೊಕ್ಕ ರಝಾಕಾರರು

ಅವರನ್ನು ಹಿಂಸಿಸಿ ಮನೆಯನ್ನು ದೋಚಿದರಲ್ಲದೇ ಭಟ್ಟಜೀಯವರ ಹೆಂಡತಿ ಮಾತೋಶ್ರೀ ವಿಮಲಾಬಾಯಿ ಅವರ ಮೇಲೆ ಅತ್ಯಾಚಾರವೆಸಗಿದರು. ರಝಾಕಾರರ ಬರ್ಬರವಾದ ಈ ಪೈಶಾಚಿಕ ಕೃತ್ಯವನ್ನು ತಾಳಲಾರದೇ ಆ ಮಹಾತಾಯಿ ಅಸುನೀಗಿದರು. ಇಂತಹ ಅನೇಕ ಘಟನೆಗಳು ನಡೆದು ಬೆಳಕಿಗೆ ಬಾರದೇ ಹೋಗಿವೆ.

ಬಸಮ್ಮ ಭೀಮಣ್ಣ ಅಕ್ಕಣ್ಣಾ ಅವರು ಗರ್ಭಿಣಿಯಾಗಿದ್ದರು. ತನ್ನ ಅಣ್ಣಂದಿರಾದ ಬಸಪ್ಪ ಮತ್ತು ಅಣಿರುದ್ರಪ್ಪ ಪೋಲಿಸ್ ಪಾಟೀಲರನ್ನು ರಝಾಕಾರರು ಹಿಡಿದೆಳೆದುಕೊಂಡು ಹೋಗಿ ಲಕ್ಷ್ಮಿ ಗುಡಿಯ ಮುಂದೆ ಬರ್ಬರವಾಗಿ ಕೊಂದು ಹಾಕಿದ ಘಟನೆಯಿಂದ ಜರ್ಜಿತಳಾಗಿದ್ದಳು. ಈ ಆಘಾತದಿಂದ ಆ ಸೋದರಿಗೆ ಅಕಾಲಿಕ ಹೆರಿಗೆಯಾಗಿ ಅಸುನೀಗಿದಳು. ಎಳೆಮಗು ತಬ್ಬಲಿಯಾಯಿತು.

ಶಂಕ್ರೆಪ್ಪ ಪತಂಗೆ ಪ್ರಾಣ ರಕ್ಷಣೆಗಾಗಿ ತಮ್ಮ ಮನೆಯ ಹಿಂದಿದ್ದ ಫಕೀರರ ಮನೆಯಲ್ಲಿ ಅವಿತು ಕುಳಿತಿದ್ದರು. ಅಲ್ಲಿಗೆ ತುರುಕರು ಬಂದು ಇಲ್ಲಿಗೆ ಯಾರಾದರೂ ಹಿಂದೂಗಳು ಬಂದಿದ್ದಾರೇನು ಎಂದು ಗದರಿಸಿ ಕೇಳಿದಾಗ ಓರ್ವ ಮುಸ್ಲಿಂ ಹೆಂಗಸು ಒಬ್ಬನು ಬಂದು ಮುಚ್ಚಿಕೊಂಡು ಕುಂತಾನೆಂದು ಹೇಳಿದಳು. ಇದನ್ನು ಕೇಳಿದೊಡನೆ ಶಂಕ್ರಪ್ಪ ಗಾಬರಿ ಬಿದ್ದು ಮನೆಯ ಕಡೆಗೆ ಓಡಿಹೋದುದ್ದನ್ನು ನೋಡಿದ ರಝಾಕಾರರು ಅಟ್ಟಿಸಿಕೊಂಡು ಅವರ ಮನೆಯನ್ನು ಹೊಕ್ಕರು. ಶಂಕ್ರಪ್ಪರನ್ನು ಹೊಡೆಯತೊಡಗಿದರು. ತಲ್ವಾರ್‌ನಿಂದ ಹೊಡೆಯುವಾಗ ಶಂಕ್ರಪ್ಪ ಕೈಯಿಂದ ಅಡ್ಡಗಟ್ಟಲು ತಲ್ವಾರ್ ಪೆಟ್ಟು ತಗುಲಿ ಬಲಗೈ ಬೆರಳುಗಳು ಕಡಿದು ಜೋತು ಬಿದ್ದವು. ಕೊರಳಿಗೆ ಹೊಡೆದಾಗ ಬಲಭಾಗದ ಕೊರಳು ಕತ್ತರಿಸಿ ರಕ್ತದ ಕೋಡಿ ಹರಿಯತೊಡಗಿತು. ನೆಲಕ್ಕೆ ಬಿದ್ದ ಶಂಕ್ರಪ್ಪ ಸತ್ತನೆಂದು ತಿಳಿದ ರಝಾಕಾರರು ಕೊಟ್ಟಿಗೆಯಲ್ಲಿದ್ದ ಕಡ್ಲಿ ಹೊಟ್ಟಿನ ಮೇಲೆ ಎಳೆದು ಹಾಕಿ ಬೆಂಕಿ ಹಚ್ಚಿದರು. ಬೆಂಕಿಯಲ್ಲಿ ತಾನಾಗಿಯೇ ಸುಟ್ಟು ಸಾಯುತ್ತಾನೆಂದು ಹೋದರು. ದೇವರ ದಯೆ! ರಾತ್ರಿ ೧೨ ಗಂಟೆಗೆ ಶಂಕ್ರೆಪ್ಪರಿಗೆ ಸ್ಮೃತಿ ಬಂದು ಎದ್ದಾಗ, ಅರ್ಧ ಕತ್ತರಿಸಿದ ಗೋಣ ಎಡಕ್ಕೆ ವಾಲಿದ್ದು ತಿಳಿಯಿತು. ಕತ್ತರಿಸಿದ ಬೆರಳುಗಳು ಕಂಡಾಗ ಹೊಟ್ಟೆಯಲ್ಲಿ ಬೆಂಕಿಬಿದ್ದಿತು. ಅಸಾಧ್ಯ ನೋವು ಎತ್ತ ಹೋಗಬೇಕೆಂದು



ದಿಕ್ಕು ತೋಚದಾಯಿತು. ಹೊನ್ನಳಿಯ ಮಾವನ ಮನೆಯ ನೆನಪಾಯಿತು. ಹೊನ್ನಳ್ಳಿಗೆ ಹೊರಟರು. ದಾರಿ ತಪ್ಪಿ ಮತ್ತೆಲ್ಲಿಗೋ ಹೋದರು. ನೀರಡಿಕೆಯಾಗಿತ್ತು. ನೀರು ಹುಡುಕಿದಾಗ ಸಿಂಧಿ ಗಿಡದ ಬನದಲ್ಲಿಯ ಒಂದು ತಗ್ಗಿನಲ್ಲಿ ಗೊಜ್ಜು ನೀರು ಕಂಡಿತ್ತು. ಕುಡಿಯಲು ಹೋದಾಗ ಕೈ ನಿಸ್ತೇಜನವಾಗಿತ್ತು. ಬಗ್ಗಿ ಬಾಯಿಹಚ್ಚಿ ಆ ಹೊಲಸು ನೀರನ್ನು ಕುಡಿದರು. ಮೈಯಲ್ಲಾ ರಕ್ತ, ಕೆಸರು ರಾಡಿಯಿಂದ ಹೊಲಸಾಗಿತ್ತು. ಎದ್ದೋ ಬಿದ್ದೋ ಹೊನ್ನಾಳಿ ತಲುಪಿದರು. ಅವರ ಮಾವ ಗುಪ್ತವಾಗಿ ಅವರನ್ನು ಬೀದರ ದವಾಖಾನೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿದರು. ಕೆಲದಿನಗಳ ಉಪಚಾರದಿಂದ ಬದುಕುಳಿದ ಶಂಕ್ರೆಪ್ಪ ಪತಂಗೆ ಸೋಲಾಪುರ ಸೇರಿದರು.

ಅಂದು ಬೆಳಗ್ಗೆ ಪ್ರಾರಂಭವಾದ ರಝಾಕಾರರ ಹತ್ಯಾಕಾಂಡ ರಾತ್ರಿ ೮ ಗಂಟೆವರೆಗೆ ಅವ್ಯಾಹತವಾಗಿ ನಡೆಯಿತು. ಕತ್ತಲಾಗುತ್ತಿದ್ದಂತೆ ರಝಾಕಾರರು ದೋಚಿದ ಸಂಪತ್ತುಗಳನ್ನು ಹೊತ್ತುಕೊಂಡು ಪಕ್ಕದ ಘೋರವಾಡಿಗೆ ಮರಳಿ ಹೋದರು. ರಝಾಕಾರರು ಹಚ್ಚಿದ ಬೆಂಕಿ ಊರ ತುಂಬೆಲ್ಲ ವ್ಯಾಪಿಸಿ ಧಗಧಗ ಉರಿಯತೊಡಗಿತ್ತು. ರಝಾಕಾರರು ಹೋದರೆಂಬ ಸುದ್ದಿ ತಿಳಿದಾಗ ಉಸಿರು ಬಿಗಿ ಹಿಡಿದುಕೊಂಡು ಅಡಗಿ ಕುಳಿತಿದ್ದ ಗ್ರಾಮದ ಸಾವಿರಾರು ಜನರು ಹೊರಬರತೊಡಗಿದರು. ಮುಂದೇನು? ಎಂಬ ಪ್ರಶ್ನೆಯು ಎಲ್ಲರಿಗೂ ಕಾಡತೊಡಗಿತ್ತು.

ಮತ್ತೆ ನಾಳೆಯು ಇದಕ್ಕಿಂತ ಅಧಿಕ ಸಂಖ್ಯೆಯಲ್ಲಿ ರಝಾಕಾರರು ಗೋರಟಾಕ್ಕೆ ಬರುವರೆಂಬ ಗಾಳಿ ಸುದ್ದಿಯು ಕಾಡ್ಗಿಚ್ಚಿನಂತೆ ಊರಲ್ಲಿ ಹರಡಿತು. ಜನರು ಮತ್ತಷ್ಟು ಭಯಭೀತರಾದರು ಬದುಕುಳಿದರೆ ನಾಕೆಂದು ಊರು ಬಿಡುವುದೇ ಲೇಸೆಂದು ನಿರ್ಧರಿಸಿದರು.

ನಾಗಪ್ಪ ಹಳೆಂಬರೆ ಮುಂತಾದ ವೀರಯೋಧರು ಹಿರಿಯರು ವೀರಶೆಟ್ಟೆಪ್ಪ ವಂಕೆ ಅವರು ಹತ್ತಿರ ಎಲ್ಲರೂ ಸೇರಿ ಮುಂದಿನ ನಡೆ ಕುರಿತು ಚರ್ಚೆ ನಡೆಸಿದರು. ಜೀವ ಉಳಿಸಿಕೊಳ್ಳುವುದೇ ಸೂಕ್ತವೆಂದರು. ನಮ್ಮಲ್ಲಿ ಶಸ್ತಾಸ್ತ್ರಗಳೂ ಇಲ್ಲ, ಎದುರಿಸುವವರೂ ಇಲ್ಲ! ಅದಕ್ಕಾಗಿ ಊರು ಬಿಡುವ ತೀರ್ಮಾನ ಮಾಡಿದರು.

ವೀರಶೆಟ್ಟೆಪ್ಪ ವಂಕೆ ಅವರು ಯಾರು ಎಲ್ಲಿಗಾದರೂ ಹೋಗಿ ಜೀವ ಉಳಿಸಿಕೊಳ್ಳಿರಿ, ಬದುಕಿದ್ದರೆ ಮುಂದೆ ಭೇಟಿಯಾಗೋಣವೆಂದು ಭಾರವಾದ ಹೃದಯದಿಂದ ಹೇಳಿದರು. ಜನರು ತಮ್ಮ ಮನೆಗಳಿಗೆ ಹೋಗಿ ಅಳಿದುಳಿದ ದುಡ್ಡು, ವಡವೆ ವಸ್ತ್ರಗಳನ್ನು ತೆಗೆದುಕೊಳ್ಳಲು ಆಗದೇ ಪ್ರಾಣ ರಕ್ಷಣೆಗಾಗಿ ಉಟ್ಟ ಬಟ್ಟೆಯ ಮೇಲೆ ಊರನ್ನು ತೊರೆಯಹತ್ತಿದರು. ಎಲ್ಲಿಗೆ ಹೋಗಬೇಕೆಂಬುದು ಸಹ ಗೊತ್ತಾಗದಂತಹ ಸ್ಥಿತಿಯಲ್ಲಿ ಜನರು ಕಾಳಗತ್ತಲೆಯಲ್ಲಿ ಗುಂಪು ಗುಂಪಾಗಿ ತಂಡೋಪತಂಡವಾಗಿ ಗೊತ್ತು ಗುರಿಯಿಲ್ಲದೇ ದುಃಖಾಗ್ನಿಯನ್ನು ಮಡಿಲಲ್ಲಿ ಕಟ್ಟಿಕೊಂಡು ಕಣ್ಣೀರು ಕೋಡಿ ಹರಿಸುತ್ತ ಹೆಜ್ಜೆ ಹಾಕತೊಡಗಿದರು.

ಗಂಡ ಎಲ್ಲೋ ಹೆಂಡತಿ ಮಕ್ಕಳೆಲ್ಲೋ, ಸತ್ತವರೆಲ್ಲೋ? ಒಬ್ಬರ ಸುದ್ದಿ ಒಬ್ಬರಿಗಿಲ್ಲದಂಗಾಗಿತ್ತು. ಪರಿಸ್ಥಿತಿ ಸತ್ತವರ ಹೆಣಗಳು ತಬ್ಬಲಿಗಳಾಗಿ, ಅನಾಥವಾಗಿ ಅಲ್ಲೇ ಬಿದ್ದುಕೊಂಡಿದ್ದವು. ಕರುಳ ಹಿಂಡುವ ಇಂತಹ ಕೆಟ್ಟ ಸಮಯ ದುಶ್ಮಾನರಿಗೂ ಬರಬಾರದು. ನಡುರಾತ್ರಿ ಹತ್ತಾರು ಹರದಾರಿ ಹೋದರೂ ಗೋರಟಾದ ಹತ್ತಿಕೊಂಡು ಉರಿಯುವ ಬೆಂಕಿಯ ಜ್ವಾಲೆಗಳು ಕಾಣುತ್ತಿದ್ದವಂತೆ. ಅದನ್ನು ನೋಡಿದ ಸಂತ್ರಸ್ತರ ಹೃದಯ ಎಷ್ಟು ನೊಂದಿರಬೇಕು? ಊಹಿಸಲಸಾಧ್ಯ.

ಮರುದಿನ ಮತ್ತೆ ರಝಾಕಾರರು ಅಧಿಕ ಸಂಖ್ಯೆಯಲ್ಲಿ ಬಂದು ಗೋರಟಾದ ಮೇಲೆ ದಾಳಿ ಮಾಡಿದರು. ಜನರು ಗ್ರಾಮವನ್ನು ತೊರೆದಿದ್ದರಿಂದ ಇವರಿಗೆ ಪ್ರತಿರೋಧ ಎದುರಾಗಲಿಲ್ಲ. ರಝಾಕಾರರು ಸ್ಥಿತಿವಂತರಾದ ಹಿಂದೂಗಳ ಒಂದೂ ಮನೆಯನ್ನು ಬಿಡದೇ ಕೊಳ್ಳೆಹೊಡೆದು ಉಧ್ವಸ್ಥಗೊಳಿಸಿದರು. ಬೆಂಕಿ ಹಚ್ಚಿ ಸುಟ್ಟು ಹಾಕಿದರು. ಅಟ್ಟಹಾಸ ಮೆರೆದರು. ಧನಲಕ್ಷ್ಮಿ ವಾಸವಾಗಿದ್ದ ಗೋರಟಾ ಸ್ಮಶಾನವಾಗಿ ಹೋಯಿತು.

ಈ ರಝಾಕಾರ ಹತ್ಯಾಕಾಂಡದಲ್ಲಿ ಹುತಾತ್ಮರಾದವರು ಇಂತಿದ್ದಾರೆ. ಸರ್ವಶ್ರೀ ರಾಜೋಟಿ ಶರಣಯ್ಯ ಸ್ವಾಮಿ, ಬಸಪ್ಪ ಅಮೃತಪ್ಪ ಮಾಲಿಪಾಟೀಲ, ರಾಮರಾವ ರಾಘವೇಂದ್ರರಾವ ಕುಲಕರ್ಣಿ, ಬಸಪ್ಪ ಭೀಮರಾವ ಪೋಲಿಸ್



ಪಾಟೀಲ, ಅಣಿರುದ್ರಪ್ಪ ಭೀಮರಾವ ಪೋಲಿಸ್ ಪಾಟೀಲ, ಗುರುಬಸಪ್ಪ ಬಸವಂತ್ರಾಯ ಬಿರಾದಾರ, ಚೆನ್ನಪ್ಪ ಶಿವಪ್ಪ ಬಿರಾದಾರ, ನಾರಾಯಣರಾವ ಮಾಣಿಕರಾವ ಮೊಕ್ತೆದಾರ, ಗುರಪ್ಪ ಶಿವಪ್ಪ ಕಣಜೆ, ಮಾರುತೆಪ್ಪ ಶಿವಪ್ಪ ಕೋಣೆ, ಮಲಶೆಟ್ಟಿ ಶಿವಲಿಂಗಪ್ಪ ಜಗಶೆಟ್ಟೆ, ಭೀಮಣ್ಣ ಮಾದಪ್ಪ ರಾಜೋಳೆ, ಶಾಮರಾವ ಮಾರುತ್ತೆಪ್ಪ ಪಟ್ನೆ, ಬಸಪ್ಪ ಚೆನ್ನಪ್ಪ ರಾಜೋಳೆ, ವಿಮಲಾಬಾಯಿ ರಾಮಭಟಜೀ, ಶಿವಪ್ಪ ಸಂಗಪ್ಪ ನಿಂಬೈ ಶಿವಪ್ಪ ಬೀರಪ್ಪ ಮೇತ್ರೆ, ಮತ್ತು ಶಂಕ್ರಪ್ಪ ಪತಂಗೆ, ಹಾವಗೆಪ್ಪ ರಾಜೋಳೆ, ಶಂಕ್ರಪ್ಪ ಅಂಬೆಸಂಗೆ ಮುಂತಾದವರು ಬರ್ಬರವಾದ ಮರಣಾಂತಿಕ ಹಲ್ಲೆಗೊಳಗಾದವರು.

ವೀರಯೋಧ ನಾಗಪ್ಪ ಹಳೆಂಬರೆ, ಕಾಶೆಪ್ಪ ಭಾಲ್ಕೆ, ಮಾರುತಿ ಮಡಿವಾಳ, ಸಿದ್ರಾಮಪ್ಪ ಪಟ್ನೆ, ವಿಠೋಬಾ ನಿರೊಡೆ, ಮಹಾರುದ್ರಪ್ಪ ಪಟ್ನೆ, ನರಸಪ್ಪ ಥಮಗಳೆ, ಹಾವಗೆಪ್ಪ ರಾಜೋಳೆ ಮುಂತಾದವರು ರಝಾಕಾರರ ವಿರುದ್ಧ ಕೆಚ್ಚೆದೆಯ ಕಲಿಗಳಾಗಿ, ಪ್ರಾಣದ ಹಂಗನ್ನು ತೊರೆದು ಹೋರಾಡಿದ ವೀರಪುರುಷರಾಗಿದ್ದಾರೆ. ಇವರು ಇಲ್ಲದಿದ್ದರೆ ಗೋರಟಾ ಪರಿಸ್ಥಿತಿ ಇನ್ನೂ ಭೀಕರವಾಗಿರುತ್ತಿತ್ತು.

ಮೇ ೯ರ ರಾತ್ರಿಯಲ್ಲಿ ಗ್ರಾಮ ತೊರೆದ ನೂರಾರು ಜನರು ಭಾಲ್ಕಿಯಿಂದ ರೈಲು ಹತ್ತಿ ಪರಳಿಗೆ ತಲುಪಿದರು. ಅಲ್ಲಿಂದ ಹಿಂಗೋಲಿ ಮಾರ್ಗವಾಗಿ ಅಕೋಲಾ ಜಿಲ್ಲೆಯ ನಾಥಮಂಗಳೂರು ತಾಲೂಕಿನ ಕೌಟಾಳ ಎಂಬ ಗ್ರಾಮವನ್ನು ತಲುಪಿದರು. ಅಲ್ಲಿ ಇವರು ಶ್ರೀ ಬಳವಂತರಾವ ಗೋರಟೆ ಅವರ ಮನೆಯಲ್ಲಿ ನಿರಾಶ್ರಿತರಾಗಿ ಆಶ್ರಯವನ್ನು ಪಡೆದರು. ಬಳವಂತರಾವರವರ ಧರ್ಮಪತ್ನಿ ಶಿವಮ್ಮನವರು ಗೋರಟಾದ ಶರಣಪ್ಪ ಗೌರೆ ಅವರ ಸಹೋದರಿಯಾಗಿದ್ದರು. ಇವರ ಮನೆಯಲ್ಲಿ ೬ ತಿಂಗಳ ಕಾಲ ಗೋರಟಾ ಮತ್ತು ಭಾಲ್ಕಿಯ ನೂರಾರು ಜನರು ನಿರಾಶ್ರಿತರಾಗಿ ಉಳಿದುಕೊಂಡಿದ್ದರು. ಬಳವಂತರಾವ ದಂಪತಿಗಳು ಮತ್ತು ಹಿರಿಯಣ್ಣ ಯಶವಂತಪ್ಪ ಗೋರಟೆ ದಂಪತಿಗಳು ನಿರಾಶ್ರಿತರನ್ನು ತುಂಬಾ ಕಾಳಜಿ ಮತ್ತು ಅಕ್ಕರೆಯಿಂದ ನೋಡಿಕೊಂಡರು. ಇವರ ಉಪಕಾರ ಗೋರಟಾದ ಜನತೆ ಎಂದೂ ಮರೆಯುವಂತಿಲ್ಲ.

ಸೋಲಾಪುರದ ಟೀಕೇಕರ ವಾಡಿಯಲ್ಲಿಯ ಗುರುಕುಲದಲ್ಲಿ ಗೋರಟಾ ಸಿದ್ಧವೀರಸ್ವಾಮಿ ಬನಹಟ್ಟಿ ಅವರ ಮಾರ್ಗದರ್ಶನ ಗೋರಟಾ ಶ್ರೀ ಸುರೇಶ ಸ್ವಾಮಿ ಹಿರೇಮಠ ಗೋರಟಾದ ನೂರಾರು ನಿರಾಶ್ರಿತರಿಗೆ ಆಶ್ರಯವನ್ನು ನೀಡಿದ್ದರು. ಮೇಹಕರ ಮಠದ ಶ್ರೀ ಷ.ಬ್ರ. ರಾಚೋಟಿ ಶಿವಾಚಾರ್ಯರು, ಬೇಮಳಖೇಡ ಮಠದ ಶ್ರೀ ಷ.ಬ್ರ. ಗುರುಪಾದ ಶಿವಾಚಾರ್ಯರು ಅನೇಕ ರೀತಿಯಿಂದ ನಿರಾಶ್ರಿತರ ಯೋಗ ಕ್ಷೇಮವನ್ನು ನೋಡಿಕೊಂಡರು. ವಾಗ್ದರಿ ಕ್ಯಾಂಪ ಮತ್ತು ಪುಣೆಯ ಖೇಡಗಾಂವ ಮುಂತಾದ ನಿರಾಶ್ರಿತರ ಶಿಬಿರಗಳಲ್ಲಿ ಗ್ರಾಮದ ಜನರು ಆಶ್ರಯ ಪಡೆದುಕೊಂಡಿದ್ದರು.

ಗೋರಟಾದ ರಝಾಕಾರರ ಹತ್ಯಾಕಾಂಡವನ್ನು ನಡೆದ ನಂತರ ಮುಂದಿನ ಎರಡ್ಮೂರು ತಿಂಗಳುಗಳ ಕಾಲ ನಿತ್ಯ ನೂರಾರು ಜನ ರಝಾಕಾರರು, ಸ್ಥಳೀಯ ಮುಸ್ಲಿಮರು, ಫಸ್ತಕೋಮ ಜನಗಳು ಊರಲ್ಲಿಯ ಪ್ರತಿಯೊಂದು ಹಿಂದೂ ಮನೆಗಳನ್ನು ಕೊಳ್ಳೆ ಹೊಡೆದು ಬೆಳ್ಳಿ ಬಂಗಾರ, ದವಸ ಧಾನ್ಯಗಳನ್ನು ತುಂಬಿಕೊಂಡು ಹೋಗುತ್ತಲಿದ್ದರು. ಮನೆಗಳಿಗೆ ಬೆಂಕಿ ಹಚ್ಚಿ ಸುಟ್ಟರು. ಬಾವಿಗಿಳಿದು ಆಭರಣಗಳನ್ನು ತೆಗೆದುಕೊಂಡು ಹೋದರು. ಮನೆಗಳ ಬಾಗಿಲ, ಕಿಟಕಿ, ಮೇಲಿದ್ದ ತಗಡ ಮುಂತಾದ ಸಾಮಾನುಗಳನ್ನು ಗಾಡಿ ತುಂಬಿಕೊಂಡು ಹೋದರು. ಊರಲ್ಲಿದ್ದ ತುರುಕರು ಪಕ್ಕದ ಘೋರವಾಡಿಯಲ್ಲಿ ಹೊಸ ಬಸ್ತಿಯನ್ನು ಮಾಡಿಕೊಂಡು ಉಳಿದರು.

ನಿಜಾಮ ಸಂಸ್ಥಾನದಲ್ಲಿ ಭಾರತ ಸರ್ಕಾರದ ಪ್ರತಿನಿಧಿಯಾಗಿದ್ದ ಕೆ.ಎಂ. ಮುನ್ಶಿರವರು ಹೈದ್ರಾಬಾದ ವಕೀಲರ ತಂಡದೊಂದಿಗೆ ಗೋರಟಾಕ್ಕೆ ಭೇಟಿಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಪ್ರತ್ಯಕ್ಷ ಕಂಡು ಒಂದು ವರದಿಯನ್ನು ಸಿದ್ಧಪಡಿಸಿ ಭಾರತ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ತಮ್ಮ "The End of an Area" (ಪುಟ, ೧೪೧, ೧೩೧, ೧೬೨) ಎಂಬ ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ. **"ಗೋರಟಾ ರಝಾಖಾರರ ದಾಳಿಗೆ ತುತ್ತಾಗಿ ತತ್ತರಿಸಿದೆ. ಅಲ್ಲಿ ೨೦೦ಕ್ಕೂ ಅಧಿಕ ಜನ ಪ್ರಾಣ ಕಳೆದುಕೊಂಡರೇ ಸಾವಿರಾರು ದನಜಾನುವಾರುಗಳು ಬೆಂಕಿಗಾಹುತಿಯಾಗಿವೆ. ನನ್ನ ಅಂದಾಜಿನ ಪ್ರಕಾರ ೭೦ ಲಕ್ಷ ರೂಪಾಯಿಗಳ ಆಸ್ತಿಪಾಸ್ತಿಗಳ ಹಾನಿಯಾಗಿದೆ ಮತ್ತು ಪಂಚನಾಮೆಗೆ ಸಹಿ ಹಾಕಲು ಅಲ್ಲಿ ಯಾರೂ ಇರಲಿಲ್ಲವೆಂದು"** ಅವರು ಹೇಳಿದ್ದಾರೆ. ಸ್ವಾತಂತ್ರ್ಯ ಬಂದು ೭೫ ವರ್ಷ ಕಳೆದರೂ ಈವರೆಗೂ ಪರಿಹಾರವಾಗಿ ಒಂದು ಪೈಸೆಯೂ ಗೋರಟಾ ಗ್ರಾಮಕ್ಕೆ ಸಿಗಲಿಲ್ಲ.



ಸುಮಾರು ಆರು ತಿಂಗಳುಗಳ ಕಾಲ ಊರಲ್ಲಿ ಯಾರೂ ಇಲ್ಲದೆ ಇರುವುದರಿಂದ ಗೋರಟಾ ಅಕ್ಷರಸಃ ಸ್ಮಶಾನ ಸದೃಶ್ಯವಾಗಿತ್ತು. ಸತ್ತ ದನಕರುಗಳ ದುರ್ವಾಸನೆಯಿಂದ ಊರ ಮೇಲೆ ಕಾಗೆ, ರಣಹದ್ದುಗಳು ಹಾರಾಡುವಂತಾಯಿತು.

### ಮುಚಳಂಬಿ ದಾಳಿ:

ಗೋರಟಾ ಮತ್ತು ಮುಚಳಂಬ ಅಕ್ಕಪಕ್ಕದ ಊರುಗಳು ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಬಿಡಿಸಲಾರದ ಸಂಬಂಧಗಳನ್ನು ಹೊಂದಿದೆ. ಗೋರಟಾದಂತೆ ಮುಚಳಂಬಿಯಲ್ಲೂ ರಜಾಕಾರರು ಉಗ್ರವಾಗಿ ದಾಳಿ ಮಾಡಿ ಗ್ರಾಮದ ಗಣ್ಯರಾಗಿದ್ದ ಶರಣಪ್ಪ ಪಾಟೀಲ ಅವರ ಮನೆಯ ಮೇಲೆ ಆಕ್ರಮಣವನ್ನು ಮಾಡಿ ಬೆಂಕಿ ಹಚ್ಚಿದರು. ಈ ದಳ್ಳೂರಿಯಲ್ಲಿ ಶರಣಪ್ಪ ಪಾಟೀಲ, ಪತ್ನಿ ಗುರಮ್ಮ ಪಾಟೀಲ, ಮಕ್ಕಳಾದ ಕು. ಮಹಾದೇವಿ, ಕು. ಶಾರದಾಬಾಯಿ, ಸಹೋದರ ಕಾಶೆಪ್ಪ ಪಾಟೀಲ, ಅವರ ಪತ್ನಿ ಲಕ್ಷ್ಮೀಬಾಯಿ ಪಾಟೀಲ ಮತ್ತು ಅವರ ಆಳುಮಗ ಅಪ್ಪಣ್ಣ ಹಂಚೆ ಇವರುಗಳು ಆ ಭಯಾನಕ ಬೆಂಕಿಯಲ್ಲಿ ಸುಟ್ಟುಹೋದರು. ಜೀವರಕ್ಷಣೆಗಾಗಿ ಓಡಿಹೋಗುತ್ತಿದ್ದ ಕಂಟೆಪ್ಪ ಕಾಮಶೆಟ್ಟಿ, ಮಹಾದಪ್ಪ ಕರಬಟ್ಟೆ ಮತ್ತು ವೀರಶೆಟ್ಟಿ ಅಲ್ಲದೆಪ್ಪ ಇವರನ್ನು ತೊಗಲೂರು ದಾರಿಯಲ್ಲಿ ಅಡ್ಡಗಟ್ಟಿದ ರಝಾಕಾರರು ಕೊಂದು ಹಾಕಿದರು. ಈ ಎಲ್ಲ ಮಹನೀಯರು ದೇಶಕ್ಕಾಗಿ ಹುತಾತ್ಮರಾದರು. ಗೋರಟಾದಂತೆ ಮುಚಳಂಬಿಯು ಸಹ ಕ.ಕ. ವಿಮೋಚನಾ ಚಳವಳಿಯಲ್ಲಿ ಮಹತ್ವದ ಯೋಗದಾನವನ್ನು ನೀಡಿದೆ.

### ಅಪರೇಷನ್ ಪೋಲೋ:

ಹೈದ್ರಾಬಾದ ನಿಜಾಮ ಸಂಸ್ಥಾನದಲ್ಲಿ ರಝಾಕಾರರ ಕ್ರೌರ್ಯ, ಹಿಂಸೆಗಳು ಮುಗಿಲು ಮುಟ್ಟಲು ಎಚ್ಚತ್ತುಕೊಂಡ ಭಾರತ ಸರ್ಕಾರ ನಿಜಾಮನ ಸಂಸ್ಥಾನದ ವಿರುದ್ಧ ಮಿಲಿಟರಿ ಕಾರ್ಯಾಚರಣೆಗೆ ಮುಂದಾಯಿತು. ಅಂದಿನ ಕೇಂದ್ರ ಗೃಹಮಂತ್ರಿಗಳಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲರು ನಿಜಾಮನ ವಿರುದ್ಧ ಮಿಲಿಟರಿ ಕಾರ್ಯಾಚರಣೆಗೆ ಅಧಿಕೃತ ಘೋಷಣೆಯನ್ನು ಮಾಡಿದರು. ಇದನ್ನು 'ಆಪರೇಷನ್ ಪೋಲೊ' ಹೆಸರಿನಿಂದ ಕರೆಯಲಾಯಿತು.

ಭಾರತೀಯ ಸೇನೆಯ ಲೆಫ್ಟಿನೆಂಟ್ ಜನರಲ್ ರಾಜೇಂದ್ರಸಿಂಹ ಮತ್ತು ಮೇಜರ್ ಜನರಲ್ ಜೆ.ಹೆಚ್. ಚೌಧರಿ ಅವರ ಮುಂದಾಳತ್ವದಲ್ಲಿ ನಿಜಾಮನ ವಿರುದ್ಧ ೧೯೪೮ ಸೆಪ್ಟೆಂಬರ್ ೧೩ರಂದು ಆಪರೇಷನ್ ಪೋಲೊ ಮಿಲಿಟರಿ ಕಾರ್ಯಾಚರಣೆಯನ್ನು ಸೋಲಾಪುರ ಮತ್ತು ವಿಜಯವಾಡ ಎರಡೂ ಕಡೆಗಳಿಂದಲೂ ಏಕಕಾಲಕ್ಕೆ ಪ್ರಾರಂಭಿಸಲ್ಪಟ್ಟಿತು. ಹೈದ್ರಾಬಾದ ಕಡೆಗೆ ಏಕಕಾಲದಲ್ಲಿ ಸಾಗಿದ ಮಿಲಿಟರಿ ಕಾರ್ಯಾಚರಣೆಯಿಂದ ನಿಜಾಮ ಸೇನೆ ತತ್ತರಿಸಿ ಹೋಯಿತು. ಕೇವಲ ಮೂರೇ ದಿನಗಳಲ್ಲಿ ಭಾರತದ ಸೇನೆ ರಝಾಕಾರರ ಹುಟ್ಟಡಗಿಸಿತು. ನಿಜಾಮ ಸೈನ್ಯ ಸೋತು ಶರಣಾಯಿತು. ಸೆಪ್ಟೆಂಬರ್ ೧೭ರಂದು ಸಾಯಂಕಾಲ ನಿಜಾಮ ಸೇನೆಯ ಮುಖ್ಯಸ್ಥ ಎಲ್. ಏಡ್ರೂಸ್ ಭಾರತೀಯ ಸೇನೆಗೆ ಅಧಿಕೃತವಾಗಿ ಶರಣಾದನು. ಕಾರ್ಯಾಚರಣೆಯಲ್ಲಿ ಅಂದಾಜು ೮೦೦ ರಝಾಕಾರರು ಹತರಾದರು.

ಪರಾಭವದ ನಂತರ ನಿಜಾಮ ಭಾರತ ಒಕ್ಕೂಟದೊಡನೆ ವಿಲೀಕ್ಕೆ ಸಹಿ ಹಾಕಿದನು. ಈಗ ರಝಾಕಾರರೊಂದಿಗೆ ನನಗೆ ಯಾವ ಸಂಬಂಧವಿಲ್ಲೆಂದು ಘೋಷಿಸಿದನು. ಸೆಪ್ಟೆಂಬರ್ ೧೯ರಂದು ರಝಾಕಾರ ಮುಖ್ಯಸ್ಥ ಖಾಸೀಂ ರಜ್ವಿ ಮತ್ತಿತ್ತರ ಇತ್ತೇಹಾದುಲ್ ಪ್ರಮುಖರ ಬಂಧನವಾಯಿತು. ಮೆ॥ಜ॥ ಜೆ.ಎನ್. ಚೌದರಿಯವರನ್ನು ಮಿಲಿಟರಿ ಗೌರ್‍ನರ ಪದವಿಗೆ ನಿಜಾಮನೇ ನೇಮಕ ಮಾಡಿ ತಾನು ನಾಮಪತ್ರ ಗೌವರ್ನರ್‌ನಾಗಿ ಉಳಿದನು. ನಿಜಾಮನ ಶರಣಾಗತಿಯೊಂದಿಗೆ ಭಾರತದ ಸರ್ಕಾರದ ಒಕ್ಕೂಟ ರಚನೆಯು ಪರಿಪೂರ್ಣವಾಯಿತು.

ಈ ಸ್ವಾತಂತ್ರ್ಯ ನಮಗೆ ಸುಮ್ಮನೆ ಸಿಗಲಿಲ್ಲ. ನಮ್ಮ ಹಿರಿಯರು ನೆತ್ತರು ಸುರಿಸಿ ಪ್ರಾಣ ಬಲಿದಾನವನ್ನು ನೀಡಿ ಪಡೆದುದಾಗಿದೆ. ಈ ಜಯದೊಂದಿಗೆ ಈ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಾವಿರಾರು ಜನ ಮಹನೀಯರ ಪರಿಶ್ರಮ ಸಾರ್ಥಕವಾಯಿತು. ಎಲ್ಲೆಡೆ ತಿರಂಗಾ ಧ್ವಜ ರಾರಾಜಿಸಿದವು.

## ಮರಳಿಜನ್ಮ ಭೂಮಿಗೆ

೧೭ ಸಪ್ಟೆಂಬರ್ ೧೯೪೮ರಂದು ಕಲ್ಯಾಣ ಕರ್ನಾಟಕ ಸ್ವಾತಂತ್ರ್ಯ ಪಡೆದುಕೊಂಡ ಸಂತಸದ ಸುದ್ದಿ ದೇಶಾದ್ಯಂತ ಬಿತ್ತರವಾಯಿತು. ಈ ಸುದ್ದಿ ತಿಳಿದ ಗೋರಟಾದ ಸಂತ್ರಸ್ತರ ಸಂತೋಷಕ್ಕೆ ಪಾರವೇ ಇರಲಿಲ್ಲ. ಗ್ರಾಮವನ್ನು



ತೊರೆದು ಹೋಗಿದ್ದ ಜನರು ೬ ತಿಂಗಳ ನಂತರ ಅಂದರೆ ಅಕ್ಟೋಬರ ತಿಂಗಳಲ್ಲಿ ಮರಳಿ ಊರಿಗೆ ಬಂದರು.

ಗ್ರಾಮದ ಅವಸ್ಥೆ ಹೇಳತೀರದಾಗಿತ್ತು. ಊರಿನ ತುಂಬೆಲ್ಲ ಮುಳ್ಳಿನ ಗಿಡಗಂಟೆ ಹುಲ್ಲು ಬೆಳೆದುಕೊಂಡಿತ್ತು. ಒಂದು ರೀತಿಯಲ್ಲಿ ಪಡಿಹಾಕಿದ ಹೊಲದಂತೆ ಕಾಣುತ್ತಿತ್ತು. ಯಾವ ಮನೆಗೂ ಬಾಗಿಲ ಕಿಟಕಿಗಳಿರಲಿಲ್ಲ. ಮನೆಯ ಒಳಗೂ ಹೊರಗೂ ಮತ್ತು ಮೇಲ್ಭಾಗದಲ್ಲಿ ಹುಲ್ಲು ಮುಳ್ಳು ಬೆಳೆದಿದ್ದವು. ಹೇಗೆ ಜೀವನ ಮಾಡಬೇಕೆಂದು? ಗಲಿಬಿಲಿಗೊಂಡ ಜನರಿಗೆ ದಿಕ್ಕೆ ತೋಚದಂಗಾಯಿತು. ಬಸಣ್ಣಪ್ಪ ಕಣಜೆ ಮನೆ ನೋಡಿ ಗಾಬರಿಯಾಗಿ ಎದೆಯೊಡೆದು ಸತ್ತನು. ಇವರ ತಂದೆ ಗುರಪ್ಪನು ಈ ಮುಂಚೆ ಹತನಾಗಿದ್ದನು.

ಸ್ಮಶಾನ ಸದೃಶ್ಯವಾಗಿದ್ದ ಮನೆಗಳನ್ನು ನೋಡಿ ದಿಕ್ಕೆಟ್ಟು ಹೋಗಿದ್ದ ಜನರು ದೇವರ ಮೇಲೆ ಭಾರವನ್ನು ಹಾಕಿ ಕಾಯಕ ಮಾಡುತ್ತ ಕಷ್ಟ ಸಹಿಷ್ಣುಕರಾಗಿ ನಿಧಾನವಾಗಿ ಮೊದಲಿನಂತೆ ಬದುಕನ್ನು ಕಟ್ಟಿಕೊಳ್ಳತೊಡಗಿದರು. ಹಿಂದಿನ ಕರಾಳ ಘಟನೆಯ ಕಹಿ ನೆನಪುಗಳನ್ನು, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತ ಅವುಗಳನ್ನು ಮರೆಯತೊಡಗಿದರು. ಬದುಕಿನಲ್ಲಿ ಜೀವನೋತ್ಸಾಹವನ್ನು ತಂದುಕೊಳ್ಳುತ್ತ ಭಾರತಾಂಬೆಯ ಮುಡಿಗೆ ಹೂವು ತಂದರು.

ಗೋರಟಾ ರಝಾಕಾರ ಹತ್ಯಾಕಾಂಡದ ವಾರ್ತೆಯನ್ನು ಕೇಳಿ ಪಂಡಿತ ಜವಾಹರಲಾಲ್ ನೆಹರೂ, ಸರ್ದಾರ್ ಪಟೇಲ, ರಾಜಗೋಪಾಲಚಾರಿ ಮುಂತಾದ ರಾಷ್ಟ್ರೀಯ ನಾಯಕರು ಮಮ್ಮುಲ ಮರಗಿದರು. ಕಲ್ಯಾಣ ಕರ್ನಾಟ ಸ್ವಾತಂತ್ರ್ಯ ಶಿಲ್ಪಿ ಸ್ವಾಮಿ ರಾಮಾನಂದ ತೀರ್ಥ, ಭೂದಾನ ಚಳವಳಿಯ ನೇತಾರ ವಿನೋಬಾ ಭಾವೆ. ಕೆ.ಎಂ.ಮುನ್ಷಿ ಮುಂತಾದ ಗಣ್ಯರು ಗೋರಟಾ ಗ್ರಾಮಕ್ಕೆ ಆಗಮಿಸಿ ಜನರಿಗೆ ಸಾಂತ್ವನದ ಜೊತೆಗೆ ಧೈರ್ಯ ಸ್ಥೈರ್ಯ ತುಂಬಿದರು.

**ಭುಲಾಯಿ ಪದ:**

ಕರುಳ ಹಿಂಡುವ ಕರುಣಾಜನಕ ಗೋರಟಾದ ರಝಾಕಾರ

ಹತ್ಯಾಕಾಂಡದ ಚರಿತ್ರೆಯನ್ನು ನಮಗೆ ಕಟ್ಟಿಕೊಟ್ಟಿದ್ದೇ ಈ ಭುಲಾಯಿ ಪದ. ಇದು ದೇಶದ ಚಾರಿತ್ರಿಕ ಗ್ರಂಥಗಳೆಲ್ಲ ಒಂದಾಗಿದೆ. ನಮ್ಮ ಪೂಜ್ಯ ತಂದೆ ಪಂ. ವಿರೂಪಾಕ್ಷಯ್ಯ ಸ್ವಾಮಿ ಹಾಗೂ ಚಿಕ್ಕಪ್ಪ ವೇ॥ ವಿರೂಪಾಕ್ಷಯ್ಯ ಶಿ. ಮಠಪತಿಯವರು ಕೂಡಿ ರಚಿಸಿದ ಮಹಾನ್ ಕೃತಿ. ಊರಿಗೆ ಮರಳಿ ಬಂದ ನಂತರ ಇರ್ವರೂ ಕೂಡಿ ಮುಂಜಾನೆ ಗ್ರಾಮದಲ್ಲಿ ಧರ್ಮಭಿಕ್ಷೆಗೆಂದು ಹೋದಾಗ ರಝಾಕಾರ ಹತ್ಯಾಕಾಂಡದ ನಡೆದ ಘಟನೆಗಳನ್ನು ಒಂದೆಡೆ ಸೇರಿಸಿ ಬರೆದ ಕೃತಿಯೇ ಭುಲಾಯಿ ಪದ. ಹಳ್ಳಿಗಳಲ್ಲಿ ನಾಗರ ಪಂಚಮಿಯ ಹಬ್ಬದಲ್ಲಿ ಹೆಣ್ಣುಮಕ್ಕಳು ಕೈ ಕೈ ಹಿಡಿದು, ವೃತ್ತಾಕಾರವಾಗಿ ಮಾನವ ಸರಪಳಿಯನ್ನು ರಚಿಸಿಕೊಂಡು ಕೈಗಳನ್ನು ಜೀಕುತ್ತ ತಿರುಗುತ್ತ ಹಾಡುವ ಪದಗಳನ್ನು ಭುಲಾಯಿ ಪದವೆಂದು ಕರೆಯುತ್ತಾರೆ. ಗೋರಟಾ ರಝಾಕಾರ ಹತ್ಯಾಕಾಂಡವನ್ನು ಎಳೆಎಳೆಯಾಗಿ ಬಿಚ್ಚಿಡುವ ಭುಲಾಯಿ ಪದ ಓದುತ್ತ ಹೋದರೆ ದುಃಖ ಉಮ್ಮಳಿಸಿ ಬರುತ್ತದೆ. ಕಣ್ಣೀರು ತಾನೇ ಸುರಿಯುತ್ತವೆ. ಅಂತಹ ಕರುಣಾಜನಕವಾದ ಈ ಘಟನೆ ಹೊಂದಿದ್ದ ಭುಲಾಯಿ ಪದ ಎಲ್ಲರೂ ಓದಬೇಕು.

ಇದು ೧೯೫೬ರಲ್ಲಿ ಪ್ರಥಮ ಮುದ್ರಣ ಕಂಡಿದೆ. ಇಲ್ಲಿಯವರೆಗೆ ಐದು ಮುದ್ರಣಗಳನ್ನು ಕಂಡಿದೆ. ಈ ಭುಲಾಯಿ ಪದ ಬೀದರ ಜಿಲ್ಲೆಯ ಮೊಟ್ಟಮೊದಲ ಕನ್ನಡ ಕೃತಿಯೆಂದು ಹೇಳಲಾಗುತ್ತಿದೆ. ಗೋರಟಾದ ರಝಾಕಾರ ಹತ್ಯಾಕಾಂಡದ ಕಣ್ಣೀರಿನ ಕತೆಯನ್ನು ನಮ್ಮೆಲ್ಲರಿಗೂ ತಿಳಿಯಪಡಿಸಿದ ಪೂಜ್ಯ ಉಭಯ ವಿರೂಪಾಕ್ಷಯ್ಯನವರಿಗೆ ನಾವೆಲ್ಲರೂ ಋಣಿಯಾಗಿರಬೇಕು.

**ಹುತಾತ್ಮ ಸ್ಮಾರಕ:**

ಗೋರಟಾದಲ್ಲಿ ಹುತಾತ್ಮ ಸ್ಮಾರಕವನ್ನು ನಿರ್ಮಾಣ ಮಾಡಬೇಕೆಂಬುದು ನನ್ನ ಬಹುದಿನಗಳ ಸಂಕಲ್ಪವಾಗಿತ್ತು. ಗೋರಟಾದ ರಝಾಕಾರ ಹತ್ಯಾಕಾಂಡದಲ್ಲಿ ಹುತಾತ್ಮರಾದ ಮಹನೀಯರ ಮತ್ತು ನಿಜಾಮ ಆಡಳಿತ ವಿರುದ್ಧ ಈ ಭಾಗದ ಸ್ವಾತಂತ್ರಕ್ಕಾಗಿ ನಡೆದ ಹೋರಾಟಗಳಲ್ಲಿ ಹೋರಾಡಿದ ಗೋರಟಾದ ವೀರ ಪುರುಷರ ಸಂಸ್ಮರಣಾರ್ಥವಾಗಿ ಹುತಾತ್ಮ ಸ್ಮಾರಕ ಜೊತೆಗೆ ಈ ಭಾಗದ ಸ್ವಾತಂತ್ರ ಶಿಲ್ಪಿಗಳಾದ ಸರ್ದಾರ್ ವಲ್ಲಭಬಾಯಿ ಪಟೇಲರ ಮತ್ತು ಸ್ವಾಮಿ ರಾಮಾನಂದ ತೀರ್ಥರ ಮೂರ್ತಿಗಳನ್ನು ಸ್ಥಾಪಿಸಬೇಕೆಂಬುದು ಅನೇಕ ವರ್ಷಗಳ ಕನಸಾಗಿತ್ತು.



ನನ್ನ ಈ ಸಂಕಲ್ಪಕ್ಕೆ ಪ್ರೇರಣೆ ಎಂದರೆ ನನ್ನ ಪೂಜ್ಯ ತಂದೆಯವರಾದ ಪಂ. ವಿರೂಪಾಕ್ಷಯ್ಯ ಸ್ವಾಮಿಯವರು ಅವರು ಕಾರ್ಯಕ್ರಮಕ್ಕೆ ಹೋದಲೆಲ್ಲಾ ಗೋರಟಾದ ಸಾಂಸ್ಕೃತಿಕ ಹಿರಿಮೆಯನ್ನು ಮತ್ತು ರಝಾಕಾರ ಹತ್ಯಾಕಾಂಡಗಳ ಬಗ್ಗೆ ತಪ್ಪದೇ ಹೇಳುತ್ತಿದ್ದರು. ಅಣ್ಣ ಡಾ॥ ಸಿದ್ಧರಾಮಯ್ಯ ಸ್ವಾಮಿ ಗೋರಟಾ ಅವರು ಈ ವಿಷಯಗಳ ಕುರಿತು ಲೇಖನಗಳನ್ನು ಬರೆದು ಜಾಗೃತಿಯನ್ನು ಮೂಡಿಸಿದ್ದರು. ಇದು ನನ್ನ ಮೇಲೆ ಪರಿಣಾಮವನ್ನು ಬೀರತೊಡಗಿದ್ದವು. ಪರಿಣಾಮ ಹಿರಿಯರ ಸವಿನೆನಪಿಗಾಗಿ ಜನ್ಮಭೂಮಿಯಲ್ಲಿ 'ಹುತಾತ್ಮ ಸ್ಮಾರಕ' ವನ್ನು ನಿರ್ಮಾಣ ಮಾಡಬೇಕೆಂದು ಸಂಕಲ್ಪವನ್ನು ಮಾಡಿ ಕಾರ್ಯೋನ್ಮುಖನಾದೆ.

ವಿದ್ಯಾರ್ಥಿ ದೆಸೆಯಲ್ಲಿರುವಾಗ ಅಂದರೆ ೧೯೯೨–೯೩ರಲ್ಲಿ 'ಹುತಾತ್ಮ ಸ್ಮಾರಕ ಹೋರಾಟ ಸಮಿತಿ'ಯನ್ನು ರಚಿಸಲಾಯಿತು. ಆ ಮುಖಾಂತರ ಅದಕ್ಕೆ ಹೋರಾಟದ ಸ್ವರೂಪವನ್ನು ನೀಡಲಾಯಿತು. ಅನೇಕ ಸಾರಿ ಶಾಸಕರು, ಸಂಸದರು, ಸಚಿವರು ಹೀಗೆ ಮುಂತಾದ ಜನಪ್ರತಿನಿಧಿಗಳನ್ನು ಭೇಟಿಯಾಗಿ ಮನವಿಗಳನ್ನು ಸಲ್ಲಿಸುವ ಕಾರ್ಯಮಾಡತೊಗಿದವು. ಹೈದ್ರಾಬಾದ ಕರ್ನಾಟಕ ವಿಮೋಚನಾ ದಿನಾಚರಣೆಯನ್ನು ರಾಜ್ಯಸರ್ಕಾರ ಮಾಡಲು ನಿರ್ಧರಿಸಿದ ನಂತರ ಈ ಕಾರ್ಯಕ್ಕೆ ಹೆಚ್ಚಿನ ಬಲ ಬಂದಿತು. ಜಿಲ್ಲೆಯ ಎಲ್ಲಾ ಪತ್ರಕರ್ತರು ಇದನ್ನು ಪ್ರಚಾರಗೊಳಿಸಿ ಈ ಸಂಕಲ್ಪಿತ ಕಾರ್ಯಕ್ಕೆ ಹೆಚ್ಚಿನ ಶಕ್ತಿಯನ್ನು ತುಂಬಿದರು.

೧೯೯೮ರಲ್ಲಿ ರಾಜ್ಯ ಸರ್ಕಾರ ಹೈದ್ರಾಬಾದ ಕರ್ನಾಟಕ ವಿಮೋಚನಾ ಸುವರ್ಣ ಮಹೋತ್ಸವವನ್ನು ಆಚರಿಸಿದ ಸಂದರ್ಭದಲ್ಲಿ ಹುತಾತ್ಮ ಸ್ಮಾರಕಗಳ ನಿರ್ಮಾಣಕ್ಕೆ ಸರ್ಕಾರವನ್ನು ಆಗ್ರಹಿಸಲಾಯಿತು. ಈ ಸುಸಂದರ್ಭದಲ್ಲಿ ೧೭ ಸಪ್ಟೆಂಬರ ೧೯೯೮ ರಂದು ನಾಡಿನ ಕನ್ನಡ ಪತ್ರಿಕೆಗಳು ಅದರಲ್ಲಿ ಕನ್ನಡ ಪ್ರಭ ಪತ್ರಿಕೆಯು ವಿಶೇಷ ಪುರವಣಿಯನ್ನು ಹೊರತಂದಿತು. ತಾತ್ಕಾಲಿನ ಜಿಲ್ಲಾ ವರದಿಗಾರರಾಗಿದ್ದ ಕ.ಮ.ರವಿಶಂಕರ ಗೋರಟಾದ ಬಗ್ಗೆ ದೊಡ್ಡ ಲೇಖನವನ್ನು ಬರೆದು ಜಾಗೃತಿಯನ್ನು ಮೂಡಿಸಿದರು.

ಹುತಾತ್ಮ ಸ್ಮಾರಕ ಹೋರಾಟ ಸಮಯ ಪರಿಶ್ರಮದ ಫಲವಾಗಿ ಬೀದರ

ಜಿಲ್ಲಾಡಳಿತವು (೩೦.೧೧.೨೦೦೧) ಗೋರಟಾದಲ್ಲಿ ಹುತಾತ್ಮ ಸ್ಮಾರಕ ನಿರ್ಮಾಣ ಮಾಡುವ ಬಗ್ಗೆ ಸುತ್ತೋಲೆಯನ್ನು ಹೊರಡಿಸಿತ್ತು. ಗ್ರಾಮ ಪಂಚಾಯತಿಯ ಅಜಾಗರೂಕತೆಯಿಂದ ಅದು ಕೈತಪ್ಪಿ ಹೋಯಿತು. ನಮ್ಮ ಹೋರಾಟವು ಹಾಗೆಯೇ ಮುಂದುವರೆದಿತ್ತು. ನಾಡಿನ ಎಲ್ಲಾ ಪತ್ರಿಕೆಗಳು ಇದರ ಕುರಿತು ಜಾಗೃತಿಯನ್ನು ಮೂಡಿಸಿದ್ದವು. ವಿಜಯವಾಣಿಯ ವಿಭಾಗೀಯ ಸಂಪಾದಕರಾದ ಶ್ರೀ ಸದಾನಂದ ಜೋಶಿ ನಮ್ಮ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತುಕೊಂಡು ಶಕ್ತಿಯನ್ನು ತುಂಬಿದರು.

೨೦೧೪ರಲ್ಲಿ ನಾವೆಲ್ಲ ಹತಾಶರಾಗಿ ಕುಳಿತಾಗ ರಾಜ್ಯ ಬಿಜೆಪಿ ಯುವ ಮೋರ್ಚಾದವರು ಗೋರಟಾದಲ್ಲಿ ಹುತಾತ್ಮ ಸ್ಮಾರಕ ನಿರ್ಮಾಣ ಮಾಡಲು ಮುಂದೆ ಬಂದಿರುವ ಸ್ವಪ್ನ ಸಾಕಾರಕ್ಕೆ ಮೂಹೂರ್ತ ಕೂಡಿ ಬಂದಿತು. ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಅಶೋಕ ಹೊಕ್ರಾಣಿ ಮತ್ತು ರಾಜ್ಯಾಧ್ಯಕ್ಷರಾಗಿದ್ದ ಶ್ರೀ ಟಿ. ಮುನಿರಾಜು ಗೌಡ ಅವರು ನಮ್ಮ ಮನವಿಯನ್ನು ಸ್ಪಂದಿಸಿ ಗೋರಟಾದಲ್ಲಿ ಹುತಾತ್ಮ ಸ್ಮಾರಕ ಮತ್ತು ಸರ್ದಾರ ವಲ್ಲಭಭಾಯಿ ಪಟೇಲರ ಮೂರ್ತಿ ಸ್ಥಾಪನೆ ಕಾರ್ಯವನ್ನು ಕೈಗೊಂಡು ನಮ್ಮ ಬಹುದಿನದ ಸಂಕಲ್ಪಕ್ಕೆ ಸಾಕಾರಕ್ಕೆ ನಾಂದಿಹಾಡಿದರು. ಅವರ ಅವಿರತ ಪ್ರಯತ್ನದ ಫಲವಾಗಿ ೧೭ ಸಪ್ಟೆಂಬರ ೨೦೧೪ರಂದು ಬಿಜೆಪಿಯ ಅಂದಿನ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ವರ್ತಮಾನ ಕೇಂದ್ರ ಗೃಹಮಂತ್ರಿಗಳಾದ ಸನ್ಮಾನ್ಯ ಶ್ರೀ ಅಮಿತ ಷಾ ಅವರ ಅಮೃತ ಹಸ್ತದಿಂದ ಗೋರಟಾದಲ್ಲಿ ಹುತಾತ್ಮ ಸ್ಮಾರಕದ ಭೂಮಿ ಪೂಜೆಯನ್ನು ಐತಿಹಾಸಿಕವಾಗಿ ನೆರವೇರಿಸಲ್ಪಟ್ಟಿತು. ಆಗ ಊರಿನವರ ಸಂತಸಕ್ಕೆ ಪಾರವೇ ಇರಲಿಲ್ಲ.

❑

॥ ಓಂ ಶ್ರೀ ಗೋರಟಾ ಗೋರಖನಾಥಾಯ ನಮಃ ॥

## ಭುಲಾಯಿಪದ

– ರಚನೆ: ಪಂ. ವಿರೂಪಾಕ್ಷಯ್ಯ ಸ್ವಾಮಿ ಗೋರಟಾ

ವೇ॥ ವಿರೂಪಾಕ್ಷಯ್ಯ ಶಿ. ಮಠಪತಿ

ಶ್ರೀ ಗೋರಖನಾಥ ವೈರಾಗ್ಯ ಶಾಲಿವಂತ,
ಭಕ್ತರಿಗೆ ಒಲಿಯೋ ಸನ್ಯಸ್ಥ ॥ ಕೋಲೆಣ್ಣ ಕೋಲ ॥ ॥೧॥
ಹೈದರಾಬಾದಿನ ಬೀದರ ಜಿಲ್ಲಾ, ರಝಾಕಾರ ಪುಂಡರೆಲ್ಲ, ದಂಡೆತ್ತಿ
ಬಂದಾರೋ ಗೋರಟಿ ಮ್ಯಾಲಾ ॥ಕೊ॥ ॥೨॥
ಗೋರಟಿ ಸುದ್ದಿಯನ್ನು, ಕೇಳಿರಿ ನೀವಿನ್ನು,
ತಿಳಿದ ಮಟ್ಟಿಗೆ ಹೇಳುವೆ ನಾನು ॥ಕೊ॥ ॥೩॥
ಗೋರಟಿ ಗ್ರಾಮ ಖಾಸ, ಧನಲಕ್ಷ್ಮಿಯವಾಸ,
ಇದರ ಮೇಲೆ ತುರಕರ ಮನಸ ॥ಕೊ॥ ॥೪॥
ಹಂದಿನೆಂಟು ನೂರಾ ಎಪ್ಪತ್ತು ಶಾಲಿವಾಹನ ಶತಾಬ್ದಿಯ ಕ್ರಾಂತಿ–
ಯಾಯಿತೋ ಗೋರಟಿಯಲ್ಲಿ ॥ಕೊ॥ ॥೫॥
ಮಿತಿಚೈತ್ರ ಅಮವಾಸಿ ದಿನ, ಮುಂಜಾನೆ ಸೂರ್ಯಗ್ರಹಣ
ನೇಮಸ್ತ ಮಾಡ್ಯಾರೋ ಆ ದಿನ ॥ಕೊ॥ ॥೬॥
ಹುಮನಾಬಾದ ರಾಜೇಶ್ವರ, ಕಲ್ಯಾಣ ಜಹಗೀರ,
ನೆರೆದಾರೋ ರಜಾಕಾರ ॥ಕೊ॥ ॥೭॥
ಕಂಬಾರ ಚಿಂಚೊಳ್ಳಿ, ನಾವದಗಿ ಬೆಲ್ಲಳ್ಳಿ,
ಹೊಂಟಾರೋ ಎಲ್ಲಾರು ಗೋಳಿ ॥ಕೊ॥ ॥೮॥

ಹುಣಸನಾಳ, ವರವಟ್ಟಿ ತುರುಕರಿಗಿಲ್ಲ
ಚಿಂದೊಟ್ಟಿ ಗೋರಟಿ ಹೋಗುದು ಮುಂಜಾನೆ ಘಟ್ಟಿ ॥ಕೊ॥ ॥೯॥
ಘೋರವಾಡಿ ಮುಖ್ಯ ಕೇಂದ್ರ, ಲಂಗ್ಯಾ ತುರುಕರ ಜೋರ
ಮಾಡ್ಯಾರೋ ಅಲ್ಲಿ ಕರಾರ ॥ಕೊ॥ ॥೧೦॥
ತೊಗಲೂರ, ಮುಚಳಂಬಿ, ಬೊರೊಳ, ಮೊರಂಬಿ,
ಏನಿಲ್ಲದೆ ಉರದರೋ ಮೈತುಂಬಿ ॥ಕೊ॥ ॥೧೧॥
ಖಾಸಿಮ ರಜವಿಯವನು, ಬೋಧಾ ಮಾಡಿದಿವರನ್ನು, ಎಲ್ಲಾರು
ಕೂಡಿ ಮುಕ್ಕ್ಯಾರ ಮಣ್ಣು ॥ಕೊ॥ ॥೧೨॥
ಮುಂಜಾನೆಂಟು ತಾಸಿಗೆ, ದನಕರು ಬಿಡುವದರೊಳಗೆ,
ಸುರು ಮಾಡ್ಯಾರ ಗೋಲಿ ಬಾರಾ ॥ಕೊ॥ ॥೧೩॥
ಊರೊಳಗಿನ ಜನರೆಲ್ಲ, ಏರ್‍ಯಾರೋ ಮಾಳಿಗಿ ಮ್ಯಾಲಾ,
ಮುಂದಿನ ಆಸೆ, ಒಬ್ಬರಿಗಿಲ್ಲ ॥ಕೊ॥ ॥೧೪॥
ಜೀವ ಹೋದರ ಪರವಿಲ್ಲ, ಓಡಿ ಹೋಗುವರಲ್ಲ, ಹೀಗೆಂದು
ನುಡುದಾರೋ ಹಿಂದೂರೆಲ್ಲ ॥ಕೊ॥ ॥೧೫॥
ಈ ಶಬ್ದ ತುರುಕರು ಕೇಳಿ, ಹಾಕ್ಯರೋ ಮತ್ತಿಷ್ಟು ಗೋಲಿ,
ಮಳಿ ಸುರದಂಗ ಬಂದೂಕ ಗೋಲಿ ॥ಕೊ॥ ॥೧೬॥
ಡುಮಣೆ ಸಾಹುಕಾರರ, ಮಾಳಿಗಿಮ್ಯಾಲ ಬಿಜಲೊಟಬಾರ ಕಲ್ಲು
ಕವಣಿಯ ಜೋರ ॥ಕೊ॥ ॥೧೭॥
ಈ ಕ್ರಾಂತಿ ಕಾರ್ಯದೊಳಗೆ, ಹೆಣ್ಣುಮಕ್ಕಳು ಆವಾಗ,
ಟೊಂಕ ಕಟ್ಟಿ ನಿಂತರು ಮೇಲೆ ॥ಕೊ॥ ॥೧೮॥
ಹೆಣ್ಣು ಮಕ್ಕಳು ಕಲ್ಲು ಕೊಡುವರು, ಗಂಡಸರು ಹೊಡಿಯುವರು,
ಮೂರು ತಾಸು ಹಟಸಿದರು ॥ಕೊ॥ ॥೧೯॥
ಹಿರೇಮಠದ ಮಾಳಿಗಿಮ್ಯಾಲೆ, ತರುಣ ಜನರು ಆಲ್ಲೆ
ಕವಣಿಯ ಕಲ್ಲು ಜೋರ ಮ್ಯಾಲೆ ॥ಕೊ॥ ॥೨೦॥
ಹತಿಯಾರಿದ್ದಿಲ್ಲಿವರಲ್ಲಿ ಬರೆ ಕಾವಣಿ ಜೋರಿಲಿ,
ಬರಗುಡದಿಲ್ಲ ಒಬ್ಬರಿಗಿ ಬದಲಿ ॥ಕೊ॥ ॥೨೧॥



ಏಳೆಂಟು ಮಂದಿ ಜೆತ್ತ ಮಾಡೆರ ಏಕಾಂತ,
ಓಡಿ ಹೋಗುವದು ವ್ಯರ್ಥ ॥ಕೊ॥ ॥೨೨॥
ಇದೇ ಅಭಿಮಾನಕ್ಕೆ ಬಿದ್ದು, ಜೀವ ಹೋದರು ಹೋಯಿತೆಂದು
ರಾಚಯ್ಯ ಸ್ವಾಮಿ ಮುಂದೆ ಬಂದು ॥ಕೊ॥ ॥೨೩॥
ರಾಚೋಟಿಸ್ವಾಮಿ ಇವರು, ಗೋರಟಿ ಮಠಪತಿಯವರು
ತುರುಕನಿಗೆ ಒಂದೇಟು ಕೊಟ್ಟಿದ್ದರು ॥ಕೊ॥ ॥೨೪॥
ಪೆಟ್ಟ ತಿಂದ ತುರುಕನ ಹೆಸರು ಎಮ್ಮಿ ಮಸ್ತಾನ,
ಹೆಚ್ಚಿನ ಸಿಟ್ಟು ತೆಗೆದಿದಾನ ॥ಕೊ॥ ॥೨೫॥
ಕೂತ ಜಾಗ ಬಿಟ್ಟು ಎದ್ದು ಮಠದ ಸಮೀಪ ಬಂದು
ಬೇಲಿಗೆ ಹಚ್ಚಿದ ಬೆಂಕಿ ತಂದು ॥ಕೊ॥ ॥೨೬॥
ಉರಿಯು ಬಹಳ ಎದ್ದಿತ್ತು ದನದನ ಉರಿಯುತ್ತ
ಊರಸುತ್ತ ಹರಿದಾಡಿತ್ತು ॥ಕೊ॥ ॥೨೭॥
ಉರಿಯನ್ನು ನೋಡಿದವರು, ಗಾಬರಿಗೊಂಡಿದರು,
ಡುಮಣೆನ ದೊಡ್ಡಿ ಸೇರಿದರು ॥ಕೊ॥ ॥೨೮॥
ದೊಡ್ಡಿ ಮೇಲಿದ್ದವರು, ಎಂಟು ಹತ್ತು ಶೂರ ಜನರು,
ಬಿಜಲೋಟ ಹತಿಯಾರಾದವರು ॥ಕೊ॥ ॥೨೯॥
ನಾಗಪ್ಪ, ಹಳೆಂಬರ ಈತನು ಬಹದ್ದೂರ,
ಮಹಡಿ ಮೇಲಿನವನ ಜೋರ ॥ಕೊ॥ ॥೩೦॥
ತುರುಕರು ಸೇರಿ ಊರೊಳಗೆ, ಮನಸಿಗೆ ಬಂದ್ಹಾಂಗ,
ನಡೆಸಿದರೋ ಹೆಚ್ಚಿನ ದಂಗ ॥ಕೊ॥ ॥೩೧॥
ಸಿಕ್ಕಷ್ಟು ಜನರಿಗೆ, ಹೊಡದಾರೋ ಜಗಿಜಗಿ,
ಒಬ್ಬರ ಸುದ್ದಿ ಇಲ್ಲದಂಗಾಗಿ ॥ಕೊ॥ ॥೩೨॥
ಆವಾಗ್ಗೆ ರಝಾಕಾರರು, ಹಿರೇಮಠಕ್ಕೆ ಬಂದಿದ್ದರು
ಬಾಗಿಲ ತೆರೆಯೆಂದಿದರು ॥ಕೊ॥ ॥೩೩॥
ತೆರೆಯಿರಪ್ಪ ಬಾಗಿಲ, ನಿಮಗೇನು ಮಾಡುವದಿಲ್ಲ,
ಹೀಗಂತರ ರಝಾಕಾರರೆಲ್ಲ ॥ಕೊ॥ ॥೩೪॥

ಮಾಡುವರೇನು ಇಲ್ಲಿ ಮನಸ್ಸಿಗೆ ತಿಳಿದಾನಲ್ಲಿ,
ರಾಚಯ್ಯಾ ಸ್ವಾಮಿ ಬಂದಾನಲ್ಲಿ ॥ಕೊ॥ ॥೩೫॥
ಬಾಗೀಲ ತೆರೆಯುವಷ್ಟರಲ್ಲಿ ಹೊಡೆದಾರೋ
ಬರ್ಚಿಲಿ, ನಟ್ಟಿತ್ತೋ ಹೊಟ್ಟೆಯಲ್ಲಿ ॥ಕೊ॥ ॥೩೬॥
ಅಯ್ಯೋ ಶಿವ ಭಗವಂತ, ವ್ಯಾಳೆ ಹೆಂತಾದು ಬಂತ,
ಅಯಿತೋ ಈ ದಿನ ಘಾತ ॥ಕೊ॥ ॥೩೭॥
ಎಮ್ಮಿಯ ಮಸ್ತಾನನು, ಅಂಗಳಾಗ ಹಾಕಿದನು,
ಮೈಯೆಲ್ಲ ಗಾಯ ಮಾಡಿದನು ॥ಕೊ॥ ॥೩೮॥
ಏ ಅಯ್ಯ ಮಗನ, ಕಲ್ಲು ಹೊಡೆದವ ನೀನ,
ಹೊಡೆಯುವೆನು ಜೀವ ಹೋಗೋತನ ॥ಕೊ॥ ॥೩೯॥
ರಾಚಯ್ಯ ನೆಲಕ್ಕೆ ಬಿದ್ದು, ತರುಕನಿಗೆ ಸಿಟ್ಟಿಗೆದ್ದು,
ಬೈದಾನೋ ಮನಸ್ಸಿಗ ಬಂದು ॥ಕೊ॥ ॥೪೦॥
ಈ ಶಬ್ದ ತುರುಕ ಕೇಳಿ, ಎದ್ದಾನೋ ಜೋರಿಲಿ,
ಮತ್ತೊಂದು ಹೊಡೆದಾನೋ ಬೆನ್ನಿನಲ್ಲಿ ॥ಕೊ॥ ॥೪೧॥
ಹೊಟ್ಯಾಗಾಗ್ಯಾದೋ ಬೆಂಕಿ ಬುಕ್ಕುತಾನೋ
ಮಣ್ಣುಫಕ್ಕಿ, ಬಡಕೊಂಡನ ಕೈ ಕಾಲು ತಿಕ್ಕಿ ॥ಕೊ॥ ॥೪೨॥
ವಂದೇ ಮಾತರಮ್ಮೆಂದು, ಘೋಷಣೆ ಮಾಡ್ಯಾನೋ ಬಿದ್ದು,
ಜೀವ ಹೋಯಿತು ಆಗ ಅವಂದು ॥ಕೊ॥ ॥೪೩॥
ದೇಶಸೇವೆಯ ಋಣಿ, ಮಾತೃ ಭೂಮಿಗೆ – ಧಣಿ,
ಸುಜ್ಞೇರು ಹೇಳಿದೀ ವಾಣಿ ॥ಕೊ॥ ॥೪೪॥
ಶಂಕರಪ್ಪ ಪತಂಗೆ, ಇವನಿಗೆ ಹೊಡದಾರಾಗೆ,
ಇವನ ಸುದ್ದಿ ಕೇಳಿರೀಗೆ ॥ಕೊ॥ ॥೪೫॥
ಗುಂಡಮಂದಿ ಬಂದಾವೆಂದು, ತುರುಕರ ಮನಿಗೆ ಬಂದು,
ಹೆಣ್ಣುಮಕ್ಕಳಿಗೆ ಕೈಕಾಲು ಬಿದ್ದು ॥ಕೊ॥ ॥೪೬॥
ಏ ಎವ್ವಾ ನಮ್ಮವ್ವ, ಮಗನಂತೆ ನಾನವ್ವ,
ಉಳಿಸಿಕೊಳ್ಳರೇ ನನ್ನ ಜೀವ ॥ಕೊ॥ ॥೪೭॥



ಮುಸುಲ್ಮಾನರ ಹೆಂಗಸರು, ಅವನನ್ನು ಕರೆದೊಯಿದಿದರು,
ಮನೆಯೊಳಗೆ ಅಡಗಿಸಿದರು ॥ಕೊ॥ ॥೪೮॥
ತುರುಕರು ಅಲ್ಲಿಗೆ ಬಂದು ಕೇಳುತಾರೋ ಜೆಬ್ರಿಲಿಂದು,
ಹಿಂದೂಗ ಇಟ್ಟರೇನು ತಂದು ॥ಕೊ॥ ॥೪೯॥
ಅದರೊಳಗೆ ಒಂದು ಹೆಂಗಸ, ಹೇಳ್ಯಾಳೋ
ಬಹು ಸೊಗಸ, ಮನೆಯೊಳಗಹನ ಒಬ್ಬ ಗಂಡಸ ॥ಕೊ॥ ॥೫೦॥
ಎಲ್ಲಿಟ್ಟಿರಿ ತೋರಿಸೆಂದು ಮನೆಯೊಳಗೆ ಬಂದು,
ಬಚ್ಚಿಟ್ಟಿದ್ದವನಿಗೆ ಹೊಡೆದಾರೊಂದು ॥ಕೊ॥ ॥೫೧॥
ಎಳಕೊಂಡು ತಂದಾರೋ ಹೊರಗ ಕಡಕೊಂಡು ಬಿದ್ದಾನೋ ನೆಲಕ
ಎದಿಮ್ಯಾಲೇ ಕೂತಾನೋ ತುರುಕ ॥ಕೊ॥ ॥೫೨॥
ಅಯ್ಯೋ ಶಿವ ಮಹಾದೇವ ಗತಿ ಏನೋ ಗುರುದೇವ,
ಎನಗೇ ತೊರಿಸೋ ಭಕ್ತ ಬಾಂಧವ ॥ಕೊ॥ ॥೫೩॥
ಶಂಕರೆಪ್ಪನಿಗೆ ಪೆಟ್ಟಾ ಹಾಕ್ಯಾರೋ ತಲವಾರಾ ಏಟಾ,
ಕಡದಾವೋ ಕೈಕಾಲು ಬಟ್ಟಾ ॥ಕೊ॥ ॥೫೪॥
ಮತ್ತೊಬ್ಬ ಹಿಂದೆ ಬಂದು, ಹೊಡದಾನೋ
ಬರ್ಚಿಲಿಂದು ಬಿದ್ದಾನೋ ಆಮ್ಯಾಲೆ ॥ಕೊ॥ ॥೫೫॥
ಅಲ್ಲಿಂದವನಿಗೆ ಪೆಟ್ಟು, ಹಾಕ್ಯಾರೋ ಬೇಕಾದಷ್ಟು,
ಜೀವ ಹೋಯಿತೆಂದು ಹೋಗ್ಯಾರೋ ಹೊಂಟು ॥ಕೊ॥ ॥೫೬॥
ತಾಸ ಹೊತ್ತಿನಾ ಮ್ಯಾಲೆ, ಸ್ಮೃತಿ ಬಂತೋ ದೇಹದ ಮ್ಯಾಲೆ,
ಮನಿಗೆ ಹೋಗ್ಯಾನೋ ಆ ಮ್ಯಾಲೆ ॥ಕೊ॥ ॥೫೭॥
ದೇವರ ಮನಿಯೊಳಗೆ ಅಡಗಿಕೂತಾನೋ ಆಗೆ,
ದೇವರ ಧ್ಯಾನ ಮನದೊಳಗೆ ॥ಕೊ॥ ॥೫೮॥
ತುರುಕರು ಬಂದಿದ್ದರು, ಮನೆಯೊಳಗೆ ಸೇರಿದ್ದರು,
ಪ್ರತ್ಯಕ್ಷ ಅವನಿಗೆ ನೋಡಿದರು ॥ಕೊ॥ ॥೫೯॥
ಎಳ ತಂದಾರೋ ಅಂಗಳಾಗ, ಹಾಕ್ಯಾರೋ ಕಣಕಿಯೊಳಗ,
ಹಚ್ಚ್ಯಾರೋ ಬೆಂಕಿ ಆಗ ॥ಕೊ॥ ॥೬೦॥

ಆಮೇಲೆ ರಝಾಕಾರರು, ಜೀವ ಹೋಯಿತೆಂದಿದರು,
ಮನೆ ಹೊರಗೆ ಒಗೆದರು ॥ಕೊ॥ ॥೬೧॥
ಗುರುವಿನ ಕೃಪೆಯಿಂದ, ಉರಿಯೊಳಗಿಂದ,
ಶಂಕರೆಪ್ಪ ಬದುಕಿ ಬಂದ ॥ಕೊ॥ ॥೬೨॥
ಬಸಪ್ಪ ಇವರು, ಮಾಲಿಯ ಗೌಡರು,
ಸೀರಿಯ ಉಟ್ಟು ಕೂತಿದ್ದರು ॥ಕೊ॥ ॥೬೩॥
ತುರುಕರು ಬಂದಿದ್ದರು, ಎಳಕೊಂಡು
ತಂದಿದಾರು ಲಕ್ಷ್ಮಿಗುಡಿ ಮುಂದೆ ಕೊಂದಿದರು ॥ಕೊ॥ ॥೬೪॥
ಬಸಪ್ಪ ಪೊಲೀಸಗೌಡ, ಅಣ್ಣ ತಮ್ಮಂದಿರು ಜೋಡ,
ತುರುಕರು ಇಲ್ಲಿಗೆ ಬಂದಾರೋ ದೌಡ ॥ಕೊ॥ ॥೬೫॥
ಗೌಡ ಹಿರಿಯಣ್ಣನು, ಸೀರಿ ಉಟ್ಟುಕೊಂಡಿದನು,
ತಾಯಿಯ ಬಳಿಯಲ್ಲಿ ಕೂತಿದ್ದನು ॥ಕೊ॥ ॥೬೬॥
ಮೋಸ ಮಾಡಿ ತುರುಕರು ಗೌಡನ ಬಳಿ ಬಂದಿದ್ದರು,
ಕೈ ಹಿಡಿದು ಎಳದಿದರು ॥ಕೊ॥ ॥೬೭॥
ಗೌಡನ ತಾಯಿಯವಳು ಬೇಡಿದ ದ್ರವ್ಯ ಕೊಟ್ಟಿದ್ದಳು,
ಜೀವದಾನ ಬೇಡಿದಳು ॥ಕೊ॥ ॥೬೮॥
ನಿನ್ನ ಮಗನಿಗೆ ಹೊಡೆಯುವುದಿಲ್ಲ,
ಮಗನಂತೆ ನಾವೆಲ್ಲ, ಹೀಗಂತರ ತುರುಕರೆಲ್ಲ ॥ಕೊ॥ ॥೬೯॥
ಗೌಡನ ಕೈಹಿಡಿದು, ಎಳಕೊಂಡು ಹೊರಗೆ ತಂದು,
ಹೊಡದಾರೋ ಬಂದೂಕಲಿಂದು ॥ಕೊ॥ ॥೭೦॥
ತಾಯಿ ಎದ್ದಾಳಲ್ಲಿಂದು, ಧಾವಿಸಿ ಮುಂದೆ ಬಂದು,
ಶವ ನೋಡಿ ಕಂಡಕೊಂಡು ಬಿದ್ದು ॥ಕೊ॥ ॥೭೧॥
ಇವನಿಗೆ ನೋಡುವಷ್ವರಲ್ಲಿ, ಸಣ್ಣವನಿಗೂ ಹೊಡದಾರಲ್ಲಿ,
ತಾಯಿ ನೋಡ್ಯಾಳೊ ಕಣ್ಣಿಲಿ ॥ಕೊ॥ ॥೭೨॥
ದುಃಖಿಸುತ್ತ ಬಿದ್ದಳು, ಶವದ ಮೇಲೆ ಉರುಳಿದಳು,
ಮಗನ ಧ್ಯಾನ ಮನದೊಳು ॥ಕೊ॥ ॥೭೩॥



ಗುರುಪಾದಪ್ಪ ಪೊಲೀಸಗೌಡ, ಗಾಬರಿಯಾಗಿ ಓಡ್ಯಾನ ದೌಡ,
ಕಡದಾರೋ ಇವನಿಗೆ ತುಂಡ ॥ಕೊ॥ ॥೭೪॥
ರಾಮರಾವ ಕುಲಕರ್ಣಿ, ದೇಶ ಸೇವೆಯ ಋಣಿ,
ಮಾತೃಭೂಮಿಗೆ ಧಣಿ ॥ಕೊ॥ ॥೭೫॥
ನಾರಾಯಣ ಮೊಕ್ತೇದಾರ, ಚನ್ನಪ್ಪ ಬಿರಾದಾರ,
ಇವರಿಗೆ ಹೊಡದಾರೋ ಠಾರ ॥ಕೊ॥ ॥೭೬॥
ಗೋರಟಿ ಊರೊಳಗೆ, ಹೊಡದಿದ ಜನರಿಗೆ,
ಲೆಕ್ಕ ಹತ್ತಿಲ್ಲೋ ಆವಾಗ ॥ಕೊ॥ ॥೭೭॥
ನಡೆದಾದೋ ದಂಗೆ ಜೋರ, ರಾತ್ರಿ ಮೂರನೇ ಪ್ರಹರ,
ಆಗ್ಯಾರೋ ಎಲ್ಲರು ಫರಾರ ॥ಕೊ॥ ॥೭೮॥
ಗೋರಟಿ ಉರಿಯುವದೆಲ್ಲ, ಹನ್ನೆರಡು ಮೈಲಿನ ಮ್ಯಾಲ
ಕಾಣ್ಯಾದೋ ಅವರಿಗೆಲ್ಲ ॥ಕೊ॥ ॥೭೯॥
ನೋಡಿದ ಜನರೆಲ್ಲ, ನುಡಿತಾರೋ ಹೀಗೆಲ್ಲ,
ಹೀಗೆಂದು ಅಗ್ನಿ ನೋಡಿಲ್ಲ ॥ಕೊ॥ ॥೮೦॥
ಗೋರಟಿ ಸುದ್ದಿ ತಾರ, ದೇಹಲಿಗೆ ಹೋಗ್ಯಾವೋ ನೂರ,
ನೆಹರೂ ಸರ್ದಾರರು ತೆಗೆದಾರ ಕಣ್ಣ ನೀರ ॥ಕೊ॥ ॥೮೧॥
ಈ ಮಂದಿ ಆಡವಿ ಬಿದ್ದು, ಹೋಗ್ಯಾರೋ ಮುಂಬಯಿ ಹಿಡಿದು,
ಆರು ತಿಂಗಳ ಅಲ್ಲೇಯಿದ್ದು ॥ಕೊ॥ ॥೮೨॥
ಪುಣೆ, ಸೋಲಾಪುರ, ಹುಟಗಿ, ವಿಜಾಪೂರ,
ಗೋರಟಾ ಮಂದಿ ಭರಪೂರ ॥ಕೊ॥ ॥೮೩॥
ಟಿಕ್ಕೆ ಕರವಾಡಿಯಲ್ಲಿ, ಸದ್ಧರ್ಮ ಗುರುಕುಲದಲ್ಲಿ,
ಓಡಿ ಹೋದವರ ವ್ಯವಸ್ಥಾ ಅಲ್ಲಿ ॥ಕೊ॥ ॥೮೪॥
ಗುರುಕುಲ ಸ್ಥಾಪಕರು, ಸಿದ್ಧವೀರಸ್ವಾಮಿ
ಬನಹಟ್ಟಿಯವರು, ಅನ್ನ ಛತ್ರ ಇಟ್ಟಿದ್ದರು ॥ಕೊ॥ ॥೮೫॥

ಸಂಸ್ಥೆ ಸಂಚಾಲಕರು, ಸುರೇಶ ಸ್ವಾಮಿವರು,
ಜನತಾ ಸೇವೆ ಮಾಡಿದರು ॥ಕೊ॥ ॥೮೬॥

ಮೇಹಕರ ಪಟ್ಟದ್ದೇವರು, ಗುರು ರಾಚೋಟೇಶ್ವರರು,
ಬಹು ಸಾಹಸ ನೀಡಿದರು ॥ಕೊ॥ ॥೮೭॥

ಗುರುಕುಲ ಕಾರ್ಯಕರ್ತರು,
ಕಾಶೀನಾಥ ಸ್ವಾಮಿಗಳು, ಇವರು ಶ್ರಮಪಟ್ಟಿದ್ದರು ॥ಕೊ॥ ॥೮೮॥

ವರಹಾಡ ಪ್ರಾಂತದೊಳಗೆ, ಕವತಳ ಗ್ರಾಮದೊಳಗೆ,
ಈ ಜನರು ಹೋಗ್ಯಾರಲ್ಲಿಗೆ ॥ಕೊ॥ ॥೮೯॥

ಕವತಳ ಬಳವಂತಪ್ಪ, ಅಣ್ಣನಾದ ಯಶವಂತಪ್ಪ,
ಈರ್ವರು ಸಹಾಯ ನೀಡಿದರು ॥ಕೊ॥ ॥೯೦॥

ಲಾತೂರ ಖಾಸಿಮನು, ಜೊಕುಮಾರನಂತಿವನು,
ರಝಾಕಾರಾಗಿ ಉರಿದಿದ್ದನು ॥ಕೊ॥ ॥೯೧॥

ನಿಜಾಮ ರಾಜ್ಯದೊಳಗೆ ಹೆಣ್ಣುಮಕ್ಕಳಿಗೆ,
ಅತ್ಯಾಚಾರ ಮಾಡಿದರಾಗೇ ॥ಕೊ॥ ॥೯೨॥

ಭಾರತಾಂಬೆ ನೋಡಿದಳಾಗ ವನಿತೆಯರ ಮಾನಭಂಗ,
ಸುರುಮಾಡ್ಯಾಳೋ ಸೇಡು ಮುಸಲರಮ್ಯಾಲ ॥ಕೊ॥ ........... ॥೯೩॥

ರಾಜಸ ರಾಕ್ಷಸ ರಾವಣನಂತೆ ಈ ಅರಸ,
ಅವನಂತೆ ಆಗುವದು ಸತ್ಯಾನಾಶ ॥ಕೊ॥ ॥೯೪॥

ನೆಹರು, ರಾಜಾಜಿಯವರು, ವಲ್ಲಭಬಾಯಿ ಪಟೇಲರು,
ಮೂವರು ರಾಯ ಮಾಡಿದರು ॥ಕೊ॥ ॥೯೫॥

ಈ ಕೊಲೆಯ ಸುದ್ದಿ ಹೋಗಿ, ನೆಹರೂ ಮನದೊಳಗೆ ಮರುಗಿ,
ಹಿಂದೂಸ್ಥಾನ ಸೈನ್ಯ ತಯಾರಾಗಿ ॥ಕೊ॥ ॥೯೬॥



ಹದಿಮೂರ ಸಪ್ಟೆಂಬರ, ಮಿಲಟ್ರಿಯು ತಯ್ಯಾರ,
ನಿಜಾಮ ಸುತ್ತ ಹಾಕ್ಯಾರೋ ಘೇರ ॥ಕೊ॥ ॥೯೭॥

ಉಸ್ಮಾನಾಬಾದಿಯಲ್ಲಿ, ರಝಾಕಾರ ಮಂದಿ ಅಲ್ಲಿ,
ಬಂದಾದೋ ಮಿಲ್ಟ್ರೀ ಜೋರಿಲಿ ॥ಕೊ॥ ॥೯೮॥

ಐದು ನಿಮಿಷದೊಳಗೆ, ಈ ರಝಾಕಾರರಿಗೆ,
ಹಾಕ್ಯಾರೋ ಕಣಕಿ ಸುಡೀನ ಹಾಗೆ ॥ಕೊ॥ ॥೯೯॥

ಅಲ್ಲಿಂದ ವಿಜಯ ಗೆದ್ದು, ನಳದುರ್ಗಕ್ಕೆ ಬಂದು,
ಬಿಟ್ಟಾರೋ ಬಾಂಬ ಒಂದು ॥ಕೊ॥ ॥೧೦೦॥

ಅಲ್ಲಿದ್ದ ತುರುಕರೆಲ್ಲ, ಅಂತಾರೋ ಅಲ್ಲಾ ! ಅಲ್ಲಾ !
ಖಾಸಿಮ ರಜವಿ ಮ್ಯಾಲಕಲ್ಲ ॥ಕೊ॥ ॥೧೦೧॥

ಕಲ್ಯಾಣ ಜಹಗೀರ, ಅಲ್ಲಿದ್ದ ರಝಾಕರ, ಘುನ್ನ ಟೋಪಿ
ಹಾರ್ಯಾವೋ ಫರಾರ ॥ಕೊ॥ ॥೧೦೨॥

ರಾಸೂರ, ಹುಮನಾಬಾದಿ, ಬೀದರ, ಜಹರಾಬಾದಿ,
ಹೋಗ್ಯಾರೋ ಹೈದರಾಬಾದಿ ॥ಕೊ॥ ॥೧೦೩॥

ಮೂರು ದಿವಸದೊಳಗೆ, ನಿಜಾಮ ರಾಜ್ಯದೊಳಗೆ,
ತ್ರಿರಂಗಿ ಧ್ವಜ ಮೆರದಿತಾಗೆ ॥ಕೊ॥ ॥೧೦೪॥

ರಾಮಚಂದ್ರನಂತೆ ಇವರು ರಝಾಕಾರರಿಗೆ ನೆಹರೂ,
ನಿರ್ಮೂಲ ಮಾಡಿದರು ॥ಕೊ॥ ॥೧೦೫॥

ಗೋರಟಿ ಜನರಿಗೆ, ನೆಹರೂಜೀ ಆವಾಗೆ,
ಆಜ್ಞೆ ಮಾಡಿದರಾವಾಗೆ ॥ಕೊ॥ ॥೧೦೬॥

ಹೈದರಾಬಾದ ವಿಜಯವಾಯಿತ್ತು
ವಿಜಯ ದಶಮಿಯ ಬಂತು ಧ್ವಜ ಏರಿತ್ತು ॥ಕೊ॥ ॥೧೦೭॥

ಸರ್ವಧಾರಿ ಸಂವತ್ಸರ, ಪದ ಮುಗಿಯಿತು
ಗುರುವಾರ ಕವಿಕೃತ ವಿರೂಪಾಕ್ಷಾ ವೀರರು ॥ಕೊ॥ ॥೧೦೮॥

❑

## ಗ್ರಂಥ ಋಣ


೧. ಭುಲಾಯಿ ಪದ : ವಿರೂಪಾಕ್ಷಯ್ಯ ಸ್ವಾಮಿ ಗೋರಟಾ,
ವಿರೂಪಾಕ್ಷಯ್ಯ ಶಿ. ಮಠಪತಿ – ೧೯೫೬

೨. ಸಂಗೀತ ಶ್ರೀರುದ್ರ : ಡಾ॥ ಸಿದ್ಧರಾಮಯ್ಯ ಸ್ವಾಮಿ ಗೋರಟಾ,
ಬಾಗಲಕೋಟ – ೧೯೯೨

೩. ಹೈದ್ರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು :
ಡಾ॥ ಬಿ.ಸಿ. ಮಹಾಬಲೇಶ್ವರಪ್ಪ – ೧೯೯೭

೪. The End of An Area : K.M. Munsi

೫. ಬೀದರ ಜಿಲ್ಲೆಯ ಸ್ವಾತಂತ್ರ ಹೋರಾಟಗಾರರು :
ಜಿಲ್ಲಾಡಳಿತ ಬೀದರ – ೧೯೯೯

೬. ಹೈ.ಕ. ಜಲಿಯನ್‌ವಾಲಾಬಾಗ ಗೋರಟಾ :
ವಿರೂಪಾಕ್ಷಯ್ಯ ಶಿವಲಿಂಗಯ್ಯ ಮಠಪತಿ

೭. ಹೈ.ಕ. ವಿಮೋಚನಾ ಸುವರ್ಣೋತ್ಸವ :
ಕನ್ನಡ ಪ್ರಭ ವಿಶೇಷ ಪುರವಣಿ
೧೭ ಸೆಪ್ಟೆಂಬರ ೧೯೯೮

೮. ಬೀದರ ಜಿಲ್ಲೆಯ ಶಾಸನಗಳು
ಕ.ವಿ.ವಿ. ಹಂಪಿ–೨೦೦೬

೯. ರಾಜ್ಯ ಮತ್ತು ಬೀದರ ಜಿಲ್ಲೆಯ ಎಲ್ಲಾ ಕನ್ನಡ ದಿನಪತ್ರಿಕೆಗಳು


## ಅನುಬಂಧ


### ಛಾಯಾಚಿತ್ರಗಳು



ಗೋರಟಾ ಗ್ರಾಮದ ಲಕ್ಷ್ಮೀ ದೇವಾಲಯ



ಡುಮಣೆ ಅವರ ಮನೆ



**ಭುಲಾಯಿ ಪದ ಕೃತಿಯ ಲೇಖಕರಾದ**
**ಶ್ರೀ ವಿರೂಪಾಕ್ಷಯ್ಯ ಸಿ. ಸ್ವಾಮಿ, ಶ್ರೀ ವಿರೂಪಾಕ್ಷಯ್ಯ ಶಿ. ಮಠಪತಿ**



**ನಿರ್ಮಾಣ ಹಂತದ ಹುತಾತ್ಮ ಸ್ಮಾರಕ**

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |